# ಯುಗಶಕ್ತಿ

* ಖುರ್‌ಆನಿನ ಅಧ್ಯಾಪನೆ ಸತ್ಯವಿಶ್ವಾಸಿಗಳಿಗೆ
* ಖಿಲಾಫತ್ ಒಂದು ಮಹಾನುಗ್ರಹ
* ಇಂದಿನ ಕಾಲದ ಅಪಾಯಗಳು ಮತ್ತು ಇಸ್ಲಾಮಿಕ ಮೌಲ್ಯಗಳ ಸಂರಕ್ಷಣೆ
* ಧರ್ಮದ ನಾಮದಲ್ಲಿ ರಕ್ತಪಾತ

ಜೂನ್ 2008

ತ್ರೈಮಾಸಿಕ
ಬೆಲೆ ರೂ.5/-

"ಎಲೈ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ."

ಪವಿತ್ರ ಖುರ್‌ಆನ್ (5 : 9)

# ಯುಗರಶ್ಮಿ

## ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ : ರೂ.5/- ವಾರ್ಷಿಕ ಚಂದಾ : ರೂ.20/- ಅಂಚೆ ಮೂಲಕ : ರೂ.30/-

ವಿಷಯ ಸೂಚಿಕೆ ಪುಟ


★ ಸಹಾನುಭೂತಿ ಅತ್ಯಾವಶ್ಯಕ 1

★ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2

★ ಖುರ್‌ಆನಿನ ಅಧ್ಯಾಪನೆ ಸತ್ಯವಿಶ್ವಾಸಿಗಳಿಗೆ 3

★ ಖಿಲಾಫತ್ ಒಂದು ಮಹಾನುಗ್ರಹ 9

★ ಇಂದಿನ ಕಾಲದ ಅಪಾಯಗಳು ಮತ್ತು ಇಸ್ಲಾಮಿಕ ಮೌಲ್ಯಗಳ ಸಂರಕ್ಷಣೆ 12

★ ಇಸ್ಲಾಮಿನ ಪ್ರಾಥಮಿಕ ಪಾಠಗಳು 19

★ ಅಹ್ಮದಿಯಾ ವಾರ್ತೆ 21

★ ಪ್ರತಿಕ್ರಿಯೆ 22

★ ಓದಿದ್ದು 23

★ ಸಂಪಾದಕರಿಗೆ ಪತ್ರ 23

★ ಪುಸ್ತಕ ವಿಭಾಗ : ಧರ್ಮದ ನಾಮದಲ್ಲಿ ರಕ್ತಪಾತ 25



**Statement about ownership and other particulars about the Newspaper Yugarashmi Quarterly**

(From IV See Rule 8)

| | | |
|---|---|---|
| 1. Placeof Publication | : | Mangalore |
| 2. Period of its publication | : | Quarterly |
| 3. Printer's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor, Ansari Road, Bunder, Mangalore - 575 001 |
| 4. Publisher's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor, Ansari Road, Bunder, Mangalore - 575 001 |
| 5. Editor's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor, Ansari Road, Bunder, Mangalore - 575 001 |
| 6. Name and address of individuals who own the newspaper and partners or shareholders holding more than one percent of the capital | | Jamath Ahmadiyya 10-23-1008/1, 1st Floor, Ansari Road, Bunder, Mangalore - 575 001 |

I, Muhammad Yusuf hereby declare that the particulars given above are true to the best of my knowledge and belief.

Date : 01-06-2008

Sd/-
**Muhammad Yusuf**

بسم الله الرحمن الرحيم
نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 25 | ಜೂನ್ 2008 | ಇಹ್‌ಸಾನ್ 1387 | ಸಂಚಿಕೆ : 1-2 |
|---|---|---|---|---|

# ಸಹಾನುಭೂತಿ ಅತ್ಯಾವಶ್ಯಕ

ಸಹಾನುಭೂತಿಯ ಉಪದೇಶವನ್ನೀಯದ ಧರ್ಮ ಯಥಾರ್ಥ ಧರ್ಮವಲ್ಲ. ಹಾಗೆಯೇ ಸಹಾನುಭೂತಿಯನ್ನು ತೋರಿಸದ ಮನುಷ್ಯನು ಮನುಷ್ಯನೆಂದು ಕರೆಯಲ್ಪಡಲು ಅರ್ಹನಲ್ಲ. ಪರಮಾತ್ಮನು ತನ್ನ ಅನುಗ್ರಹವನ್ನು ಯಾವುದೇ ಜಾತಿಯವರಿಗೂ ನೀಡದಿರಲಿಲ್ಲ. ಆರ್ಯಾವರ್ತದ ಪೂರ್ವಿಕರಿಗೆ ಅವನು ಏನೆಲ್ಲ ಶಕ್ತಿಗಳನ್ನೂ ಬೋಧನೆಗಳನ್ನೂ ಇತ್ತಿದ್ದನೋ ಅಂತಹ ಶಕ್ತಿಗಳನ್ನೂ ಬೋಧನೆಗಳನ್ನೂ ಅವನು ಅರಬಿಯರಿಗೂ ಫಾರ್ಸಿಯರಿಗೂ ಸಿರಿಯಾದವರಿಗೂ ಚೀನಿಯರಿಗೂ ಜಪಾನಿಯರಿಗೂ ಯುರೋಪ್ಯನರಿಗೂ ಅಮೇರಿಕನರಿಗೂ ಇತ್ತಿರುವನು. ಸಕಲ ಜನಾಂಗಗಳಿಗೂ ದೇವರ ಭೂಮಿ ಒಂದು ವಿಶಾಲವಾದ ಪ್ರಾಂಗಣದಂತಿದೆ. ಹಾಗೆಯೇ ಎಲ್ಲರಿಗೂ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಪ್ರಕಾಶವನ್ನು ಕೊಡುತ್ತವೆ. ಎಲ್ಲ ಜಾತಿಯವರೂ ದೇವನಿಂದ ಸೃಷ್ಟಿಸಲ್ಪಟ್ಟ ವಾಯು, ನೀರು, ಬೆಂಕಿ, ಮಣ್ಣು ಎಂಬಿತ್ಯಾದಿಗಳಿಂದ ಪ್ರಯೋಜನಗಳನ್ನು ಪಡೆಯುತ್ತಾರೆ. ಹಾಗೆಯೇ ಭೂಮಿಯ ಉತ್ಪತ್ತಿಗಳಾದ ಧಾನ್ಯಗಳನ್ನೂ ಮೂಲಿಕೆಗಳನ್ನೂ ಫಲಪುಷ್ಪಾದಿಗಳನ್ನೂ ತಮ್ಮ ಪ್ರಯೋಜನಕ್ಕಾಗಿ ಉಪಯೋಗಿಸುತ್ತಾರೆ. ಪರಮಾತ್ಮನ ಈ ವಿಶಾಲವಾದ ಉದಾರತೆಯು ನಮಗೆ ಕಲಿಸಿಕೊಡುವುದೇನೆಂದರೆ, ನಾವು ಸಹ ಮನುಷ್ಯ ಕುಲಕ್ಕೆ ಒಳಿತುಂಟುಮಾಡಬೇಕು ಹಾಗೂ ನಮ್ಮಲ್ಲಿ ಸಂಕುಚಿತ ಮನೋಭಾವವಾಗಲೀ ಅಸಹಾನುಭೂತಿಯಾಗಲೀ ಇರಬಾರದು.

(ಪೈಗಾಮೆ ಸುಲ್ಹ್)

**ಹಜ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

* ಅಲ್ಲಾಹನಾಣೆ, ನಿನ್ನ ಮೂಲಕ ಒಬ್ಬನಾದರೂ ಸನ್ಮಾರ್ಗ ಪಡೆದರೆ ಉತ್ತಮವಾದ ಕೆಂಬಣ್ಣದ ಒಂಟೆಗಳು ಸಿಗುವುದಕ್ಕಿಂತ ನಿನಗೆ ಹೆಚ್ಚು ಉತ್ತಮ. (ಮುಸ್ಲಿಂ)

* ಯಾರಾದರೂ ಏನಾದರೂ ಒಳಿತು ಮಾಡಲು ಕರೆದರೆ, ಆ ಒಳಿತು ಮಾಡುವವನಿಗೆ ಲಭಿಸುವಷ್ಟು ಪ್ರತಿಫಲ ಆದೇಶಿಸುವವನಿಗೂ ಲಭಿಸುವುದು. ಒಳಿತು ಮಾಡುವವನ ಪ್ರತಿಫಲದಲ್ಲಿ ಏನೂ ಕಡಿಮೆಯಾಗದು. ಯಾರಾದರೂ ಕೆಡುಕಿನೆಡೆಗೆ ಕರೆದರೆ, ಆ ಕೆಡುಕು ಮಾಡುವವನಿಗೆ ಸಮಾನವಾದ ಪಾಪ ಆತನಿಗೂ ತಟ್ಟುವುದು. ಕೆಡುಕು ಮಾಡುವವನ ಪಾಪದಲ್ಲಿ ಏನೂ ಕಡಿಮೆಯಾಗದು. (ಮುಸ್ಲಿಂ)

* ಒಳಿತು ಉಪದೇಶಿಸುವವನು ಅದನ್ನು ಮಾಡಿದವನ ಹಾಗೆಯೇ. (ಮುಸ್ಲಿಂ)

* ಯಾರ ಕೈಯಲ್ಲಿ ನನ್ನ ಜೀವವಿದೆಯೋ ಅವನಾಣೆ. ನೀವು ಒಳಿತನ್ನು ಉಪದೇಶಿಸಿರಿ; ಕೆಡುಕನ್ನು ವಿರೋಧಿಸಿರಿ. ಇಲ್ಲವಾದರೆ, ಅಲ್ಲಾಹನು ಕಠಿಣವಾದ ಶಿಕ್ಷೆಗೆ ನಿಮ್ಮನ್ನು ಗುರಿಪಡಿಸುವನು. ಅನಂತರ ನೀವು ಪ್ರಾರ್ಥಿಸಿದರೂ ಅದು ಸ್ವೀಕರಿಸಲ್ಪಡದು. (ತಿರ್ಮಿದಿ)

* ಅಲ್ಲಾಹನ ಆಜ್ಞೆಯನ್ನು ಅಂಗೀಕರಿಸಲು ಯಾರಾದರೂ ಹರಕೆಹೊತ್ತರೆ ಅದನ್ನು ನೆರವೇರಿಸಬೇಕು. (ಬುಖಾರಿ)

* ಅಲ್ಲಾಹನ ಆಜ್ಞೆಯನ್ನು ಉಲ್ಲಂಘಿಸಲು ಯಾರಾದರೂ ಹರಕೆಹೊತ್ತರೆ ಅದನ್ನು ನೆರವೇರಿಸಬಾರದು. (ಬುಖಾರಿ)

* ಒಂದು ಜನತೆ ಸ್ವತಂತ್ರಗೊಳಿಸಿದ ಗುಲಾಮ ಆ ಜನತೆಯ ಕುಟುಂಬದಲ್ಲಿ ಸೇರಿದವನಾಗುತ್ತಾನೆ. (ಬುಖಾರಿ)

* ನೀವು ನಿಮ್ಮ ಮಾತಾಪಿತರನ್ನು ದ್ವೇಷಿಸಬಾರದು. ಯಾರಾದರೂ ತನ್ನ ಮಾತಾಪಿತರನ್ನು ದ್ವೇಷಿಸಿದರೆ ಅವನು ಕೃತಘ್ನನಾಗಿದ್ದಾನೆ. (ಬುಖಾರಿ)

* ಅಧಿಕಾರ ಸಿಗಲು ನೀವು ಬಯಸುವಿರಿ. ಪುನರುತ್ಥಾನ ದಿನದಂದು ಅದು ನಿಮಗೆ ದುಃಖಕರವಾಗಿ ಪರಿಣಮಿಸುವುದು. (ಬುಖಾರಿ)
* ಯಾರಾದರೂ ಜನರನ್ನು ಕಷ್ಟಗಳಿಗೆ ಗುರಿಪಡಿಸಿದರೆ ಪುನರುತ್ಥಾನ ದಿನದಂದು ಅಲ್ಲಾಹನು ಅವನನ್ನು ಕಷ್ಟಕ್ಕೆ ಗುರಿಪಡಿಸುವನು (ಬುಖಾರಿ)

## "ಇನ್ಸಾನಿಯತ್ ಝಿಂದಾಬಾದ್"

## "ಮಾನವೀಯತೆ ಚಿರಕಾಲ ಬಾಳಲಿ"

# ಖುರ್‌ಆನಿನ ಅಧ್ಯಾಪನೆ ಸತ್ಯವಿಶ್ವಾಸಿಗಳಿಗೆ

- ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್
(ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫ)

ಕಳೆದ ಕೆಲವು ಕಾಲಗಳಲ್ಲಿ ಶತ್ರುಗಳು ಪುನಃ ಬಹಿರಂಗವಾಗಿ ಇಸ್ಲಾಮಿನ ಮೇಲೆ ಆಕ್ರಮಣ ಮಾಡುತ್ತಿರುವ ವಿಚಾರ ನಮಗೆಲ್ಲ ಗೊತ್ತಿದೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ರವರ ಮೇಲೆ ಮತ್ತು ಖುರ್‌ಆನ್ ಹಾಗೂ ಅದರ ಅಧ್ಯಾಪನೆಗಳ ಮೇಲೆ ಆಕ್ರಮಣ ನಡೆಯುತ್ತಿದೆ. ಇದು ಇಸ್ಲಾಮನ್ನು ಕೆಟ್ಟದ್ದಾಗಿ ಚಿತ್ರೀಕರಿಸಿ ತೋರಿಸುವ ಪ್ರಯತ್ನವಾಗಿದೆ. ಇವರು ಇಸ್ಲಾಮನ್ನು ಇಷ್ಟು ಕೆಟ್ಟದ್ದಾಗಿ ಏಕೆ ಚಿತ್ರೀಕರಿಸುತ್ತಾರೆ? ಇದು ಕಾಲಘಟ್ಟದ ಅಗತ್ಯಗಳನ್ನು ನೆರವೇರಿಸಿ ಕೊಡುವ ಧರ್ಮವಾದುದರಿಂದ ಇದಕ್ಕೆ ಮಸಿ ಬಳಿದು ತೋರಿಸುವುದು ಶತ್ರುಗಳಿಗೆ ಅವಶ್ಯವಾಗಿದೆ. ಪವಿತ್ರ ಖುರ್‌ಆನಿನ ಅಧ್ಯಾಪನೆಗಳನ್ನು ಕಂಡು ಜನರ ಶ್ರದ್ಧೆ ಈ ಭಾಗದೆಡೆಗೆ ತಿರುಗಲು ತೊಡಗಿದೆ. ಕೆಲವು ಮುಸ್ಲಿಮರ ವರ್ತನೆ ಕಂಡು ಜನರಲ್ಲಿ ವಿದ್ವೇಷ ಭಾವನೆ ಸಹ ಕೆಲವೆಡೆಗಳಲ್ಲಿ ತಲೆಯೆತ್ತುತ್ತಿರುವುದು ಬೇರೆ ವಿಚಾರ. ಆದರೆ, ಇಸ್ಲಾಮಿಗೆ ವಿರುದ್ಧವಾಗಿರುವ ಶತ್ರುಗಳ ಈ ವರ್ತನೆ ಧರ್ಮದಲ್ಲಿ ಆಸಕ್ತಿಯುಳ್ಳವರನ್ನು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿದ ಅಧ್ಯಾಪನೆಗಳನ್ನು ನೋಡಲಿಕ್ಕೂ ಅದನ್ನು ಮನವರಿಕೆ ಮಾಡುವುದಕ್ಕೂ ಪ್ರೇರೇಪಿಸುತ್ತದೆ. ಆ ಅಧ್ಯಾಪನೆಗಳು ಸತ್ಯಭರಿತವೂ ಪ್ರಕೃತಿ ಸಹಜವೂ ಆಗಿವೆ. ಧರ್ಮದಲ್ಲಿ ಆಸಕ್ತಿಯುಳ್ಳವರೂ ನಿಷ್ಕಳಂಕರೂ ಆಗಿರುವವರು ಪವಿತ್ರ ಖುರ್‌ಆನನ್ನು ಕಲಿತು ಆ ಬಗ್ಗೆ ಚಿಂತನೆ ಮಾಡುತ್ತಾರೆ. ಅದರ ಭಾಷಾಂತರ ಓದುವುದರಿಂದ ಅದರ ಅಗಾಧ ತಲದಲ್ಲಿರುವ ಜ್ಞಾನ ಲಭಿಸದೆಂಬುವುದು ಸರಿಯೇ. ಅಂದರೆ, ಪವಿತ್ರ ಖುರ್‌ಆನಿನಲ್ಲಿ ಅಡಕವಾಗಿರುವ ವಿಶಿಷ್ಟ ಸಂದೇಶಗಳು ಮನಗಾಣಲು ಪ್ರಯಾಸಕರ. ಆದರೂ ಅದನ್ನು ತಿಳಿಯಲಿಕ್ಕೋಸ್ಕರ ಅವರ ಪ್ರಯತ್ನ ಶ್ಲಾಘನೀಯ. ಕೆಲವರು ಸತ್‌ಸ್ವಭಾವಿಗಳಾಗಿದ್ದಾರೆ. ಅವರಿಗೆ ಸಂಗತಿಗಳು ಮನವರಿಕೆಯಾಗುವುವು.

ಕಳೆದ ದಿವಸ ವರ್ತಮಾನ ಪತ್ರದಲ್ಲಿ ಓರ್ವ ಸ್ತ್ರೀ ಒಂದು ಕಾಲಂ ಬರೆದಿದ್ದರು. ರಿಡ್ಲಿ ಎಂದು ಅವರ ಹೆಸರು. ಉರ್ದುವಿನಲ್ಲಿ ಅದು ಪ್ರಕಟವಾಗಿದೆ. ಆದ್ದರಿಂದ ಅವರ ಹೆಸರಿನ ಉಚ್ಚಾರಣೆ ಸರಿಯೋ ಎಂದು ನನಗೆ ಗೊತ್ತಿಲ್ಲ. ಅವರು ಪತ್ರಿಕೋದ್ಯೋಗಿ ಆಗಿದ್ದರಿಂದ ಅವರಿಗೆ ಅಫ್ಘಾನಿಸ್ಥಾನಕ್ಕೆ ಹೋಗಬೇಕಾಗಿತ್ತು. ಸ್ತ್ರೀಯರಿಗೆ ಅಲ್ಲಿಗೆ ಹೋಗಲು ಅನುಮತಿ ಇರಲಿಲ್ಲ. ಹೇಗಿದ್ದರೂ ಅವರು ಪರದೆ ಧರಿಸಿ ವೇಷ ಪಲ್ಲಟಿಸಿ ಅಲ್ಲಿಗೆ ತಲಪಿದರು. ತಾನು ವೃತ್ತಿ ನಿರತವಾಗಿರುವಾಗ ಅವರು ಹಿಡಿಯಲ್ಪಟ್ಟರು. ಕೊನೆಗೆ, ಖುರ್‌ಆನ್ ಕಲಿಯುವೆನೆಂದು ವಾಗ್ದಾನ ಮಾಡಿದ ಕಾರಣ ಅವರು ವಿಮುಕ್ತರಾದರು. ಹಾಗೆ ಅವರು ಇಲ್ಲಿಗೆ (ಲಂಡನಿಗೆ) ಹಿಂತಿರುಗಿದರು. ಆದರೆ ಅವರು ಮಾಡಿದ ವಾಗ್ದಾನ ಮರೆತು ಬಿಟ್ಟಿದ್ದರು. ಇಸ್ಲಾಮಿಗೆ ವಿರುದ್ಧವಾಗಿ ಇಲ್ಲಿ ಆಕ್ಷೇಪವೇಳಲು ತೊಡಗಿದಾಗ ತಾನು ತಾಲಿಬಾನಿಗಳಿಗೆ ಕೊಟ್ಟ ವಾಗ್ದಾನ ಅವರಿಗೆ ನೆನಪಾಯಿತು. ಹಾಗೆ ಆ ಮಹಿಳೆ ಪವಿತ್ರ ಖುರ್‌ಆನ್ ಪಡಕೊಂಡು ಅದನ್ನು ಓದಿದರು. ಆಗ, ಪವಿತ್ರ ಖುರ್‌ಆನ್ ಸ್ತ್ರೀಯರೊಂದಿಗಿನ ವರ್ತನೆ ಕುರಿತು ಹೇಳುವುದರಲ್ಲೂ ಇಸ್ಲಾಮಿನ ವಕ್ತಾರರೆಂದೂ ಅದನ್ನು ಪ್ರೀತಿಸುವವರೆಂದೂ ಹೇಳುವ ಮುಸ್ಲಿಮರು ಸ್ತ್ರೀಯರೊಡನೆ ವರ್ತಿಸುವುಧರಲ್ಲೂ ದೊಡ್ಡ ವ್ಯತ್ಯಾಸವಿದೆಯೆಂದು ಅವರಿಗೆ ಮನವರಿಕೆಯಾಯಿತು. ಹೇಗಿದ್ದರೂ ಪವಿತ್ರ ಖುರ್‌ಆನ್ ಓದಿ ಅವರು ಮುಸ್ಲಿಮಾದರು. ಮುಸ್ಲಿಮಾದಾಗ ಅವರನ್ನು ಎಲ್ಲರೂ ಆಕಾಶಕ್ಕೇರಿಸಿದರು. ಒಂದು ಮುಸ್ಲಿಂ ರಾಷ್ಟ್ರ, ಅದು ಖತರ್ ಎಂದು ತೋರುತ್ತದೆ, ಅಲ್ಲಿಯ ಒಂದು ಪತ್ರಿಕೋದ್ಯಮಿ ಅವರಿಗೆ ಕೆಲಸ ನೀಡಿದರು. ಇವರು ಯುರೋಪಿನಲ್ಲಿ ವಿದ್ಯಾಭ್ಯಾಸ ಪಡೆದವರಾಗಿದ್ದಾರೆ. ಭೌತಿಕ ವಿದ್ಯಾಭ್ಯಾಸ ಸಹ ಸಾಕಷ್ಟು ಇತ್ತು. ಸತ್ಯವನ್ನು ಸತ್ಯವಾಗಿಯೇ ಹೇಳಬೇಕೆಂಬ ಧೋರಣೆಯಲ್ಲಿ ಅವರು ದೃಢಚಿತ್ತರಾಗಿದ್ದರು. ಎಷ್ಟು ದೊಡ್ಡ ವ್ಯಕ್ತಿಯಾದರೂ ಸತ್ಯ ನುಡಿಯುವುದರಲ್ಲಿ ಹಿಂಜರಿಯಬಾರದೆಂಬ ಧೋರಣೆ ಅವರದ್ದಾಗಿತ್ತು. ಆದ್ದರಿಂದ ಪತ್ರಿಕೋದ್ಯಮಿ ಮತ್ತು ಅವರೆಡೆಯಲ್ಲಿ ಭಿನ್ನಾಭಿಪ್ರಾಯ ತಲೆದೋರಿತು. ಹಾಗೆ ಅವರನ್ನು ಕೆಲಸದಿಂದ ತೆಗೆದುಹಾಕಲಾಯಿತು. ಆದರೆ ಅವರು ಪತ್ರಿಕೋದ್ಯಮಿಗೆ ವಿರುದ್ಧವಾಗಿ ಮೊಕದ್ದಮೆ ಹೂಡಿ ಸತ್ಯಕ್ಕಾಗಿ ಹೋರಾಡಿದರು. ಸ್ತ್ರೀಯರ ಹಕ್ಕು ಇಂಥದ್ದೆಂದೂ ಪತ್ರಿಕಾ ಧರ್ಮ ಇಂಥದ್ದೆಂದೂ ಅವರು ಕೋರ್ಟಿಗೆ ನಿವೇದಿಸಿದರು. ಕೊನೆಗೆ ಅವರು ಜಯಹೊಂದಿದರು.

ಅನಂತರ, ಬೇರೊಂದು ಸ್ಥಳದಲ್ಲಿ ಅವರಿಗೆ ಕೆಲಸ ಸಿಕ್ಕಿತು. ಮೇಲೆ ಹೇಳಿದ ಅದೇ ಕಾರಣದಿಂದ ಅಲ್ಲಿಂದಲೂ ಹೊರದೂಡಲ್ಪಟ್ಟರು. ಅವರ ವಿರುದ್ಧವೂ ಆ ಮಹಿಳೆ ಮೊಕದ್ದಮೆ ಹೂಡಿ ಸತ್ಯಕ್ಕಾಗಿ ಹೋರಾಡಿದರು. ಆ ಮೊಕದ್ದಮೆಯಲ್ಲೂ ಅವರು ವಿಜಯಿಯಾದರು. ಮುಸ್ಲಿಂ ಸ್ತ್ರೀಯ ಹಕ್ಕುಗಳನ್ನೂ ಮುಸ್ಲಿಂ ಪುರುಷನ ಹಕ್ಕುಗಳನ್ನೂ ಇಸ್ಲಾಂ ಸರಕಾರ ಒದಗಿಸಬೇಕೆಂಬುದು ಅವರ ವಾದ. ಹೇಗಿದ್ದರೂ ತಾನು ಹೂಡಿದ ಮೊಕದ್ದಮೆಗಳಲ್ಲೆಲ್ಲ ಅವರು ಜಯಗಳಿಸಿದರು. ತತ್ಫಲವಾಗಿ ಅವರ ವಿಶ್ವಾಸ ಸಹ ದೃಢೀಕರಿಸಲ್ಪಟ್ಟಿತು.

ಹೇಳಿದುದರ ಉದ್ದೇಶವೇನೆಂದರೆ, ಪವಿತ್ರ ಖುರ್‌ಆನಿನ ಅಧ್ಯಾಪನೆಗಳನ್ನು ಮನವರಿಕೆ ಮಾಡಿದ ಕಾರಣದಿಂದ ಆ ಮಹಿಳೆಗೆ ಅದರಲ್ಲಿರುವ ನಂಬಿಕೆ ಹೆಚ್ಚಾಯಿತು. ಹಲವು ತರ ಅನುಭವಗಳುಂಟಾದರೂ ಅವರು ಅವನ್ನೆಲ್ಲ ಎದುರಿಸಿ ಮುನ್ನಡೆದರು. ಆದರೆ, ಆ ಮಹಿಳೆ ಪವಿತ್ರ ಖುರ್‌ಆನಿನ ಅಧ್ಯಾಪನೆಗಳು ದೋಷಕರವೆಂದು ಹೇಳಲಿಲ್ಲ. ಬದಲು, ಆ ಅಧ್ಯಾಪನೆಗಳಿಗೆ ವಿರುದ್ಧವಾಗಿ ವರ್ತಿಸಿದವರೊಡನೆ ಅವರು ಹೋರಾಡಿದರು. ಇಂತಹ ಘಟನೆಗಳನ್ನು ಇಸ್ಲಾಮಿನ ಶತ್ರುಗಳು ಕಾಣುವಾಗ ಅವರಲ್ಲಿ ಕಳವಳ ಉಂಟಾಗುವುದು ಸಹಜ. ಅವರಿಗೆ ಅವರ ಧರ್ಮದೊಡನೆ ಸಂಬಂಧವಿದ್ದರೂ ಇಲ್ಲದಿದ್ದರೂ ಸರಿ. ಆದರೆ, ಇಸ್ಲಾಮಿನೊಡನಿರುವ ವಿರೋಧ ಕೀಳ್ಮಟ್ಟದ ವರ್ತನೆಗಳಿಗೆ ಕೂಡ ಅವರನ್ನು ಪ್ರೇರೇಪಿಸುತ್ತದೆ. ಇದೊಂದು ಹೊಸ ವಿಚಾರವಲ್ಲ. ಇದು ಪ್ರವಾದಿಗಳ ಸಂಘಟನೆಗಳೊಡನೆ ಮೊದಲಿನಿಂದಲೇ ನಡೆದು ಬಂದಿರುವ ರೀತಿಯಾಗಿದೆ. ಇಸ್ಲಾಂ ಜಾಗತಿಕ ಧರ್ಮವಾಗಿದೆ. ಆದ್ದರಿಂದಲೇ, ಅದರ ವಿರುದ್ಧವಾಗಿ ಇಂತಹ ವರ್ತನೆಗಳು ಅತಿ ಹೆಚ್ಚಾಗಿ ತೋರಿಬರುತ್ತವೆ.

ಮಕ್ಕದಲ್ಲಿ ಮುಹಮ್ಮದ್ ಪೈಗಂಬರೊಂದಿಗೆ[ಸ] ಕೆಲವು ಜನರು ಇದ್ದಾಗ ಸತ್ಯವಿರೋಧಿಗಳು ಅಪಹಾಸ್ಯಮಾಡಲಿಕ್ಕೂ ಅವಹೇಳಿಸಲಿಕ್ಕೂ ತೊಡಗಿದ್ದರು. ನಂತರ ಪವಿತ್ರ ಖುರ್‌ಆನಿನ ಅಧ್ಯಾಪನೆಗಳು ಸತ್ಯಾತ್ಮರ ಮೇಲೆ ಅದರ

ಸ್ವಾಧೀನವನ್ನು ಸ್ಥಾಪಿಸಲು ತೊಡಗಿದಾಗ ವಿರೋಧಿಗಳಿಗೆ ಕಳವಳವಾಯಿತು. ಹಾಗೆ ವಿರೋಧಕ್ಕೆ ಆರಂಭವಾಯಿತು. ಪೈಗಂಬರರನ್ನು ಹತ್ಯೆ ಮಾಡಲು ಬಂದ ಅದೇ ಉಮರ್, ಪವಿತ್ರ ಖುರ್‌ಆನಿನ ವಚನ ಆಲಿಸಿ ಎಷ್ಟರ ಮಟ್ಟಿಗೆ ಆಕರ್ಷಿಸಲ್ಪಟ್ಟರೆಂದರೆ, ತನ್ನ ಶಿರಸ್ಸನ್ನು ಆ ಮಹಾಪುರುಷರ ಪಾದಗಳಿಗೆ ಸಮರ್ಪಿಸಿದರು. ಅಲ್ಲಾಹನು ಅವರಿಗೆ ದೊಡ್ಡ ದೊಡ್ಡ ಸ್ಥಾನಗಳನ್ನು ನೀಡಿದನು. ಅವರು ಖುಲಫಾಉರ್ರಾಶಿದ್‌ಗಳಲ್ಲಿ ಎರಡನೇ ಖಲೀಫರಾದರು. ಇದನ್ನೆಲ್ಲ ವಿರೋಧಿಗಳು ನೋಡಿ, ಈ ಸಂಘ ಅಲ್ಪ ಕಾಲದಲ್ಲೇ ತಮ್ಮ ಪಟ್ಟಣವನ್ನು ಸ್ವಾಧೀನಪಡಿಸುವುದೆಂದು ಶತ್ರುಗಳಿಗೆ ತೋಚಿತು. ಮಕ್ಕದ ಅನುಗ್ರಹ ಕಾರಣದಿಂದ ತಮಗೆ ಲಭಿಸಿದ ಸ್ಥಾನಮಾನಗಳು ಕೊನೆಗೊಳ್ಳುವುದೆಂದೂ ಅವರು ಗ್ರಹಿಸಿದರು. ಅಷ್ಟೇ ಅಲ್ಲ, ತಮ್ಮ ಮಕ್ಕಳನ್ನೂ ಈ ಜನರು ಹಾರಿಸಿಕೊಂಡು ಹೋಗುವರೆಂದು ಅವರು ಮನಗಂಡರು.

ಆ ಬಳಿಕ ಇಸ್ಲಾಮಿನ ಸಂದೇಶ ಹೆಚ್ಚು ವ್ಯಾಪಿಸಿತು. ಪೈಗಂಬರರು(ಸ) ಮದೀನಕ್ಕೆ ಹೋದರು. ಅಲ್ಲಿಯೂ ಇಸ್ಲಾಮಿನ ಸಂದೇಶ ಪ್ರಚಾರಗೊಳ್ಳಲು ತೊಡಗಿತು. ತಮ್ಮ ಮಕ್ಕಳನ್ನೂ ಇಸ್ಲಾಂ ತನ್ನ ಕಡೆಗೆ ಸೆಳೆಯಲು ಸಾಧ್ಯವಿದೆಯೆಂದು ಯಹೂದಿಯರು ಸಹ ಮನಗಂಡರು. ಇಸ್ಲಾಂ ಇನ್ನೂ ವ್ಯಾಪಿಸಿತು. ಆಗ ಕಿಸ್ರಾ, ಕೈಸರ್ ಆಡಳಿತೆಗಳಲ್ಲೂ ಅದು ಅಸ್ವಸ್ಥತೆಯನ್ನು ಸೃಷ್ಟಿಸಿತು. ಅವರು ಸಹ ಇಸ್ಲಾಮಿಗೆ ವಿರುದ್ಧವಾಗಿ ಸನ್ನದ್ಧರಾದರು. ಇಂದು ಲೋಕದಲ್ಲಿರುವ ಇಹಭೋಗತತ್ಪರರಾದ ಎಲ್ಲ ನೇತಾರರು, ಜಗತ್ತನ್ನು ಇಸ್ಲಾಂ ಅಧೀನಕ್ಕೊಳಪಡಿಸುವುದೋ ಎಂದು ಭಯಪಟ್ಟು ಅದನ್ನು ವಿರೋಧಿಸುವಾಗ, ಅವರ ಪೈಕಿಯೇ ಇರುವ ಮಹನೀಯರು ಅದಕ್ಕೆದುರಾಗಿ ಶಬ್ದವೆತ್ತುತ್ತಾರೆ. ಇಸ್ಲಾಮಿಗೆ ವಿರುದ್ಧವಾಗಿ ಯುರೋಪಿನಲ್ಲಿ ಏಳುವ ಶಬ್ದ ಎಲ್ಲ ಯುರೋಪಿಯನರದ್ದೆಂದು ತಿಳಿಯಲ್ಪಡುತ್ತದೆ. ಆದರೆ ಸ್ಥಿತಿ ಹಾಗಲ್ಲ. ಯುರೋಪಿಯನರೆಲ್ಲ ಇಸ್ಲಾಮನ್ನು ವಿರೋಧಿಸುವವರಲ್ಲ, ಇವರಲ್ಲೂ ಸಾಕಷ್ಟು ಜನರು ಇಂತಹ ವಿರೋಧಗಳನ್ನು ಇಷ್ಟಪಡದವರಾಗಿದ್ದಾರೆ. ಉದಾಹರಣೆಗೆ, ಇತ್ತೀಚೆಗೆ ಮುಹಮ್ಮದ್ ಪೈಗಂಬರರ(ಸ) ವ್ಯಕ್ತಿತ್ವದ ಮೇಲೆ ಆಕ್ರಮಣವಾದಾಗ ಅದರ ವಿರುದ್ಧವಾಗಿ ಡೆನ್ಮಾರ್ಕಿನ ಪ್ರಜೆಗಳು ಪ್ರತಿಭಟಿಸಿದರು. ಈ ಕೃತ್ಯಗಳೆಲ್ಲ ಕೀಳ್ಮಟ್ಟದ್ದೂ ಅನಾಗರಿಕವೂ ಎಂದು ಅವರು ಬಹಿರಂಗವಾಗಿ ಹೇಳಿದರು. ನಾನು ಒಂದು ಖುತುಬದಲ್ಲಿ ವಿವರಿಸಿದ ಅದೇ ಪ್ರಶ್ನೆಗಳನ್ನು ಅವರು ಸಹ ಎತ್ತಿದರು. ಕೊಲೆಪಾತಕ ಸೆರೆಹಿಡಿಯಲ್ಪಟ್ಟಿರುವಾಗ ಮತ್ತೆ ಕಾರ್ಟೂನ್ ಪ್ರಕಟಿಸುವ ಅಗತ್ಯವಿರಲಿಲ್ಲ. ಮೊಕದ್ದಮೆ ಹೂಡದೆ ಇಬ್ಬರನ್ನು ಗಡಿಪಾರು ಮಾಡಲಾಯಿತು. ಒಬ್ಬನನ್ನು ಬಿಡುಗಡೆ ಮಾಡಲಾಯಿತು. ಇದರ ಅರ್ಥ, ನಂತರ ಏನೂ ಸಮಸ್ಯೆ ಉಂಟಾಗಲಿಲ್ಲ ಎಂದಾಗಿದೆ. ಹೇಗಿದ್ದರೂ ನಾನು ಹೇಳಿದ ಹಾಗೆ, ಎದ್ದು ಬರುವ ಶಬ್ದಗಳಲ್ಲಿ ಗೌರವಾನ್ವಿತರ ಶಬ್ದಗಳೂ ಕೇಳಿಬರುತ್ತವೆ.

ನಮ್ಮ ಮಿಷನರಿಯೊಂದಿಗೆ ಟೆಲಿವಿಷನ್ ಚ್ಯಾನೆಲ್‌ನವರು ಸಂದರ್ಶನ ನಡೆಸಿದರು. ಅದನ್ನು ಅವರು ಚಿತ್ರರಿಸಿದರು. ಅವರ ಪೈಕಿ ಒಬ್ಬಾಕೆ ಪತ್ರಿಕೋದ್ಯೋಗಿ ಇದ್ದರು. ಅವರು ಟಿ.ವಿ. ಚ್ಯಾನೆಲ್‌ನವರ ಮುಂದೆ ಇಂತಹ ಕೃತ್ಯಗಳನ್ನು ದೂಷಿಸಿ ಖೇದ ಪ್ರಕಟಿಸಿದರು. ಈ ಕಾರ್ಟೂನ್ ಪ್ರಕಟವಾಗುವುದಕ್ಕೆ ಮುಂಚೆ ತಾನು ಡಾನಿಶ್ ಎಂದು ವಿದೇಶದವರೊಡನೆ ಹೆಮ್ಮೆಯಿಂದ ಹೇಳುತ್ತಿದ್ದೆನೆಂದೂ ಆದರೆ ಈಗ ಹಾಗೆ ಹೇಳಲು ತನಗೆ ನಾಚಿಕೆಯಾಗುತ್ತದೆಂದೂ ಆಕೆ ಹೇಳಿದರು.

ನಾನು ಡೆನ್ಮಾರ್ಕಿನಿಂದ ಈ ಸಂಬಂಧವಾಗಿ ವರದಿಗಳನ್ನು ತರಿಸಿದ್ದೇನೆ. ಆ ವರದಿಗಳಲ್ಲಿ ಕೆಲವು ಈ ರೀತಿಯಾಗಿವೆ: ಪುನಃ ಕಾರ್ಟೂನ್ ಪ್ರಕಟಿಸಿದ ಪರಿಣಾಮವಾಗಿ ಡಾನಿಶ್ ಜನತೆಯಲ್ಲಿ ಒಂದು ವಿಷಮಕರ ಸ್ಥಿತಿಯುಂಟಾಗಿದೆ. ಕಾರ್ಟೂನಿನ ಪ್ರಕಟಣೆ ಬರೇ ಪ್ರಕ್ಷೋಭ ಸೃಷ್ಟಿಸಲಿಕ್ಕೆಂದು ಅವರು ಹೇಳುತ್ತಾರೆ. ಪತ್ರಿಕೆಗಳಲ್ಲೂ ಇಂಟರ್‌ನೆಟ್‌ನಲ್ಲೂ ಸ್ಪಷ್ಟವಾಗಿಯೂ ಅಸ್ಪಷ್ಟವಾಗಿಯೂ ಈ ವಿಚಾರವನ್ನು ಪ್ರಕಟಿಸಿದುದಾಗಿ ಕಾಣಬಹುದು. ಇಂಟರ್‌ನೆಟ್‌ನಲ್ಲಿ ಒಂದು ಪ್ರಸಿದ್ಧ ಗ್ರೂಪಿದೆ. ಅದರ ಹೆಸರು, ಫೇಸ್‌ಬುಕ್ ಎಂದಾಗಿದೆ. ಅವರು ಪೈಗಂಬರರಿಗೆ ವಿರುದ್ಧವಾಗಿ ಎತ್ತಲ್ಪಟ್ಟ ಆಕ್ಷೇಪಗಳಿಗೆದುರಾಗಿ ಜನರಿಗೆ ಖೇದ ಪ್ರಕಟಿಸುವ ಸಂದರ್ಭ ಒದಗಿಸಿದ್ದಾರೆ. ಇಷ್ಟರ ತನಕ ಆರು ಸಾವಿರಕ್ಕಿಂತ ಹೆಚ್ಚು ಜನರು ಅದರಲ್ಲಿ ಭಾಗವಹಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ ಬೇರೊಂದು ಗ್ರೂಪಿದೆ. ಆದರೆ ಅವರ ಜನಸಂಖ್ಯೆ ಕಡಿಮೆ.

ಓರ್ವ ಮಹನೀಯರು ಬರೆದರು: ಡೆನ್ಮಾರ್ಕ್ ಎಲ್ಲಿದೆ? ಒಂದು ಕಡೆಯಲ್ಲಿ ನಾವು ಇರಾಕ್ ಮತ್ತು ಅಫ್ಘಾನಿಸ್ಥಾನದ ಮುಸ್ಲಿಮರಿಗೆ ಸಹಾಯ ನೀಡಲು ಸೈನ್ಯವನ್ನು ಕಳುಹಿಸುತ್ತೇವೆ. ಇನ್ನೊಂದು ಕಡೆಯಲ್ಲಿ, ಇಲ್ಲಿ ಕಾರ್ಟೂನ್ ಪ್ರಕಟಿಸಿ ಮುಸ್ಲಿಮರ ಭಾವನೆಗಳಿಗೆ ಹಾನಿಮಾಡುತ್ತೇವೆ. ಮತ್ತೊಬ್ಬರು ಮುನ್ನೆಚ್ಚರಿಕೆ ಎಂಬಂತೆ ಬರೆದರು: ಮೋರಲ್ ಒಳ್ಳೆಯ ವಿಚಾರವಾಗಿದೆ. ಆದರೆ ಡಬಲ್ ಮೋರಲ್ ಅದಕ್ಕಿಂತ ಉತ್ತಮವಾಗಿದೆ. ಮತ್ತೆ ಬರೆಯುತ್ತಾರೆ: ಈ ದಿನಗಳಲ್ಲಿ ಡಾನಿಶ್ ಎಂದು ಹೇಳಲು ನನಗೆ ನಾಚಿಕೆಯಾಗುತ್ತದೆ. ಈ ಗ್ರೂಪಿನಲ್ಲಿರುವ ಹೆಚ್ಚಿನ ಜನರು ನನ್ನಂತೆಯೇ ನಾಚಿಕೆಪಡುವವರೆಂದು ನಾನು ತಿಳಿದಿದ್ದೇನೆ. ಬೇರೊಬ್ಬರು ಬರೆದಿದ್ದಾರೆ: ಡಾನಿಶ್ ಮಾಧ್ಯಮದವರು ಅಭಿವ್ಯಕ್ತಿ ಸ್ವಾತಂತ್ರ್ಯದ ಯಥಾರ್ಥ ಸ್ಥಿತಿಯನ್ನು ಕಂಡುಕೊಂಡು ಭಾವಿಯಲ್ಲಿ ಕಾಗದ, ಲೇಖನಿ ಮತ್ತು ಶಾಯಿಯನ್ನು ಚೆನ್ನಾಗಿ ಚಿಂತಿಸಿ, ಆಲೋಚಿಸಿ ಉಪಯೋಗಿಸಲು ಪ್ರಯತ್ನಿಸುವರೆಂದು ನಾನು ಭಾವಿಸುತ್ತೇನೆ. ಇನ್ನೊಬ್ಬರು ಬರೆದರು: ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ತಪ್ಪಾದ ರೀತಿಯಲ್ಲಿ ಇಲ್ಲಿ ಉಪಯೋಗಿಸಲಾಗುತ್ತದೆ.

ಎವಿಸೆನ್ ಡೀಕೆ ಎಂಬ ಪತ್ರಿಕೆಗೆ ಹೆಚ್ಚಿನ ಜನಾನುರಾಗವಿದೆ. ಫೆಬ್ರವರಿ 25ರ ಸಂಚಿಕೆಯಲ್ಲಿ ಬರೆಯಲಾಯಿತು: ನನಗೆ ಮುಹಮ್ಮದ್‌ರ ಬಗ್ಗೆ ಬರೆದ ಕಾರ್ಟೂನಿಗೆದುರಾಗಿ ಪ್ರತಿಕ್ರಿಯಿಸಲು ಅನುಮತಿ ನೀಡಿರಿ. ನನ್ನ ಅಭಿಪ್ರಾಯದಲ್ಲಿ ಇದು ಮೃಗೀಯವೂ ನೀಚವೂ ಆದ ವರ್ತನೆಯಾಗಿದೆ. ಯಾವುದೇ ನೆರೆಮನೆಯವನ ಕಾರ್ಟೂನ್ ಬರೆದು ಅವನು ಕಾಣುವಂತೆ ತನ್ನ ಮನೆ ಮುಂದೆ ತೂಗಾಡಿಸುವುದು ಮತ್ತು ಕಪಟವಾಗಿ ತಾನು ತನ್ನ ನೆರೆಮನೆಯವನನ್ನು ಸ್ನೇಹಿಸುತ್ತೇನೆ ಎಂದು ಹೇಳುವುದು ದೊಡ್ಡ ಅಕ್ರಮವಾಗಿದೆ. ಇನ್ನೊಂದು ಪತ್ರ ಬರೆದಿದೆ: ನೆರೆಮನೆಯವನಿಗೆ ನೋವುಂಟುಮಾಡುವ ವರ್ತನೆ ತುಂಬಾ ಕೆಟ್ಟದ್ದು. ಇದು ಇಸ್ಲಾಮಿಗೆ ವಿರುದ್ಧವಾಗಿ ಎಂದಾದರೂ ಏನಾದರೂ ಹೇಳುವಂತೆ ಅಲ್ಲ. ಹೀಗೆ ಪ್ರಕಟಿಸುವುದರ ಉದ್ದೇಶ ಒಂದು ಸಮುದಾಯಕ್ಕೆ ತೊಂದರೆ ಕೊಡುವುದು ಎಂಬುದೇ ಆಗಿದೆ. ಕ್ರಿಸ್ಟಲಿಗ್ ಡಗ್‌ಬ್ಲಡ್ ಎಂಬ ಒಂದು ಧಾರ್ಮಿಕ ಪತ್ರಿಕೆಯಲ್ಲಿ ಒಬ್ಬ ಡಾನಿಶ್ ಬರೆಯುತ್ತಾರೆ: ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆದರಿಕೆ ಮುಸ್ಲಿಮರಿಂದಲ್ಲ. ಬದಲು, ಮಾಧ್ಯಮದವರಿಂದಾಗಿದೆ; ಮಂತ್ರಿಗಳಿಂದಲೂ ರಾಜಕೀಯ ವ್ಯಕ್ತಿಗಳಿಂದಲೂ ಆಗಿದೆ. ಕಾರಣವೇನೆಂದರೆ, ಅವರು ಮುಸ್ಲಿಮರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ನೀಡಲು ಸಿದ್ಧರಿಲ್ಲ.

ಕ್ರೈಸ್ತ ವರ್ಕಿಂಗ್ ಕಮಿಟಿಯ ಓರ್ವ ಸದಸ್ಯ ಬೈಬಲ್ ವಚನವನ್ನು ಉದ್ಧರಿಸುತ್ತಾ ಬರೆಯುತ್ತಾರೆ: ಕಾರ್ಟೂನ್ ಪ್ರಕಟಿಸುವುದು ಕ್ರೈಸ್ತ ಪಾಠಗಳಿಗೆ

ತೀರಾ ವಿರುದ್ಧವಾಗಿದೆ. ಅಂತಹ ಕೃತ್ಯಗಳನ್ನು ಮೌಢ್ಯತೆ ಎಂಬ ಹೆಸರಿನಿಂದ ಮಾತ್ರ ಕರೆಯಲು ಸಾಧ್ಯ. ಡಾನಿಶ್ ಭಾಷೆಯಲ್ಲಿ ಒಂದು ನಾಣ್ನುಡಿ ಇದೆ. "ದೇವನು ಯಾರಿಗಾದರೂ ಒಂದು ಸ್ಥಾನ ನೀಡಿದರೆ ಅವನಿಗೆ ವಿವೇಕ ಬುದ್ಧಿಯನ್ನೂ ನೀಡುತ್ತಾನೆ" ಆದರೆ ಇಂತಹ ವರ್ತನೆ ಕಂಡು ಇವರಲ್ಲಿ ಬುದ್ಧಿ ಕಡಿಮೆಯಾದುದಾಗಿ ತೋರುತ್ತದೆ.

ಹೀಗೆ ಹಲವರು ತಮ್ಮ ಅಭಿಪ್ರಾಯಗಳನ್ನು ಬಹಿರಂಗಪಡಿಸಿದ್ದಾರೆ. ಇಸ್ಲಾಮಿಗೆ ವಿರುದ್ಧವಿರುವ ಈ ಕೃತ್ಯಗಳಲ್ಲಿ ಗೌರವಾನ್ವಿತರಾದ ಅನೇಕ ಜನರು ಪಾಲುಗೊಳ್ಳಲಿಲ್ಲವೆಂದು ಈ ಪತ್ರಿಕಾ ಪ್ರಕಟಣೆಗಳಿಂದೆಲ್ಲ ಮನವರಿಕೆಯಾಗುತ್ತದೆ. ಆದರೆ ಒಬಿಬ್ಬರು ಕಾರ್ಟೂನಿಸ್ಟರೂ ಕೆಲವು ಪಾರ್ಲಿಮೆಂಟ್ ಸದಸ್ಯರೂ ರಾಜಕೀಯ ನಾಯಕರಾಗಲು ಹಂಬಲಿಸುವ ಕೆಲವರೂ ಮಾತ್ರವಲ್ಲ ಇದರ ಹಿಂದೆ ಇರುವವರು. ಬದಲು, ಇದರ ಹಿಂದೆ ಆಳವಾದ ಗೂಢತಂತ್ರವಿದೆ. ದೊಡ್ಡ ದೊಡ್ಡ ಶಕ್ತಿಗಳು ವರ್ತಿಸುತ್ತಿವೆ. ಅವರು ಇಸ್ಲಾಮಿನ ಮನೋಹರವಾದ ಅಧ್ಯಾಪನೆಗಳಿಗೆ ಭಯಪಡುವವರಾಗಿದ್ದಾರೆ. ಸಾಮಾನ್ಯ ಜನರು ಅದರ ಅಧ್ಯಾಪನೆಗಳನ್ನು ತಿಳಿದುಕೊಳ್ಳಬಾರದೆಂದು ಅವರು ಬಯಸುತ್ತಾರೆ. ಅವರು ಧರ್ಮದ ನಾಮದಲ್ಲಿ ತಮ್ಮ ಗಳಿಕೆ ಬಯಸುವವರಾಗಿದ್ದಾರೆ. 15 ಶತಮಾನಗಳಿಂದ ನೆಲೆನಿಂತಿರುವ ಇಸ್ಲಾಮಿಗೆ ವಿರುದ್ಧವಾದ ದ್ವೇಷವನ್ನು ಸುಸೂತ್ರವಾಗಿ ಅವರು ಬಹಿರಂಗಪಡಿಸುತ್ತಿದ್ದಾರೆ. ಇದರಲ್ಲಿ ಎಲ್ಲ ವರ್ಗದ ಜನರೂ ಸೇರಿದ್ದಾರೆ. ಅವರು ಅಲ್ಲಾಹನ ವಿರುದ್ಧವಾಗಿ ಜನರನ್ನು ಎದ್ದು ನಿಲ್ಲಿಸಿ ಅವರಿಂದ ಅನ್ಯಾರಾಧನೆ ಮಾಡಿಸಲು ಪ್ರಯತ್ನಿಸುತ್ತಿದ್ದಾರೆ. ಈ ಕಾರಣದಿಂದಲೇ ಎಲ್ಲ ರೀತಿಯ ಒತ್ತಡಗಳನ್ನು ಹೇರಿ ನಮ್ಮ ಅಲ್‌ಅರಬಿಯ್ಯ ಟಿ.ವಿ. ಚ್ಯಾನೆಲನ್ನು ಸ್ಥಗಿತಗೊಳಿಸಲು ಯತ್ನಿಸಿದ್ದು. ಅದರ ಹಿಂದೆ ಕ್ರೈಸ್ತರ ಬಲು ದೊಡ್ಡ ಕೈಯಿದೆ. ದೊಡ್ಡ ದೊಡ್ಡ ಸರಕಾರಗಳ ಮೂಲಕ ಅವರು ಹಸ್ತಕ್ಷೇಪ ಮಾಡಿದರು.

ಅಂತಹ ಜನರಿಗೆ ಅನ್ಯಾರಾಧನೆಯಿಂದ ವಿಮುಕ್ತವಾಗಿರುವ ಸುಂದರವಾದ ಇಸ್ಲಾಮಿಕ ಅಧ್ಯಾಪನೆಗಳನ್ನು ಹೇಗೆ ಸಹಿಸಲು ಸಾಧ್ಯ? ಈ ಜನರು ಧರ್ಮ ಮತ್ತು ರಾಜಕೀಯದ ಮರೆಯಲ್ಲಿದ್ದುಕೊಂಡು ಲೋಕದ ಅಗ್ರಸ್ಥಾನಕ್ಕೆ ತಲಪಲಿಕ್ಕೂ ಆರಾಧ್ಯರಾಗಲಿಕ್ಕೂ ಅಧಿಕಾರಸ್ಥರಾಗಲಿಕ್ಕೂ ರಕ್ಷಕರಾಗಲಿಕ್ಕೂ ಪರಿಶ್ರಮಿಸುತ್ತಾರೆ. ಈ ಮಹಾಬುದ್ಧಿ ಇಸ್ಲಾಮಿಗೆ ವಿರುದ್ಧವಾಗಿರುವ ಗೂಢಾಲೋಚನೆಯಲ್ಲಿ ನಿರತವಾಗಿದೆ. ಇಸ್ಲಾಂ ಜಗತ್ತಿನಲ್ಲಿ ವ್ಯಾಪಿಸಿದರೆ ಇತರ ಧರ್ಮಗಳಿಗೆ ಚ್ಯುತಿಯುಂಟಾಗುವುದೆಂದು ಇವರು ಭಾವಿಸುತ್ತಾರೆ. ಆದರೆ ಇದು ಅವರ ಯೋಚನಾಲಹರಿಯಾಗಿದೆ. ಅವರಿಗೆ ಇಷ್ಟವಿರುವುದನ್ನು ಅವರು ಮಾಡಲಿ. ಇಸ್ಲಾಂ, ಲೋಕದಲ್ಲೆಲ್ಲ ವ್ಯಾಪಿಸುವುದೆಂಬುದು ವಿಧಿಸಲ್ಪಟ್ಟದ್ದಾಗಿದೆ. ಇನ್‌ಶಾಅಲ್ ಅಲ್ಲಾಹ್. ಅದು ಲೋಕದೆಲ್ಲೆಡೆ ವ್ಯಾಪಿಸುವುದು. ಆದರೆ ಯಾವುದೇ ರೀತಿಯ ಭಯೋತ್ಪಾದನೆ ಅಥವಾ ಕುತ್ಸಿತ ಪ್ರಯತ್ನದಿಂದಲ್ಲ. ಬದಲು, ಮಸೀಹ್ ಮತ್ತು ಮಹ್‌ದೀ ಮುಖೇನ ಅದು ವ್ಯಾಪಿಸುವುದು. ಪವಿತ್ರ ಖುರ್‌ಆನಿನಲ್ಲಿ ಪ್ರೀತಿ ಮತ್ತು ಕ್ಷೇಮವನ್ನು ಹರಡಲಿಕ್ಕಾಗಿ ನೀಡಲಾದ ಅಧ್ಯಾಪನೆಗಳ ಮೂಲಕ ಮತ್ತು ಪ್ರಕೃತಿಧರ್ಮದ ಪ್ರಕಟಣೆಯ ಮೂಲಕ ಅದು ನಾಲ್ದೆಸೆಗಳಲ್ಲೂ ವ್ಯಾಪಿಸುವುದು. ಆದುದರಿಂದ ನಮ್ಮಲ್ಲಿ ಪ್ರತಿಯೊಬ್ಬನೂ ಈ ಸಂದೇಶವನ್ನು ಹೆಚ್ಚು ಹೆಚ್ಚಾಗಿ ಹರಡಿಸಲು ಶ್ರಮಪಡಬೇಕು. ಇವರು ಪತ್ರಿಕೆಗಳ ಮೂಲಕ ಅದನ್ನು ತಡೆಯಲು ಎಷ್ಟು ಬೇಕಾದರೂ ಪ್ರಯತ್ನಿಸಲಿ ಅಥವಾ ಇವರ ಪಾರ್ಲಿಮೆಂಟ್ ಸದಸ್ಯರಾಗಲಿ, ಸರಕಾರಗಳಾಗಲಿ, ಬೇರೆ ಧರ್ಮನಾಯಕರಾಗಲಿ ಅವರ ಶಕ್ತಿಯ ಪರಮಾವಧಿ ಪ್ರಯತ್ನಿಸಿ ನೋಡಲಿ. ಹೇಗಿದ್ದರೂ ಅಲ್ಲಾಹನು ವಿಧಿಸಿದ್ದು ಎಂದಿಗೂ ಘಟಿಸದೆ ಇರದು.

ಹಾಲೆಂಡಿನ ಒಬ್ಬ ಪಾರ್ಲಿಮೆಂಟ್ ಸದಸ್ಯ ಸ್ವಂತ ಪಕ್ಷವನ್ನು ರಚಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆಂದು ಕಳೆದ ದಿವಸ ಪತ್ರಿಕೆಯಲ್ಲಿ ಓದಿದೆ. ಇಸ್ಲಾಮಿಗೆ ವಿರುದ್ಧವಾಗಿ ಶಬ್ದವೆತ್ತಿದ ಕಾರಣದಿಂದ ಆತನನ್ನು ಆತನ ಪಕ್ಷ ಹೊರ ಹಾಕಿತ್ತು. ಆತ ಮುಸ್ಲಿಮರಿಗೆದುರಾಗಿ ಶತ್ರುತ್ವ ಮನೋಭಾವವನ್ನು ಹೊಂದಿದ ವ್ಯಕ್ತಿ. ಆತನು ಇಸ್ಲಾಮಿಗೆದುರಾಗಿ ಸಹ ಕೋಪಾಂಧ. ಆತನು ಪೈಗಂಬರರ(ಸ) ವಿರುದ್ಧ ಒಂದು ಪ್ರಸ್ತಾವನೆ ಹೊರಡಿಸಿದರು. ಅದು ಬಹಳ ನಿಂದನೀಯವಾಗಿತ್ತು. ಅದನ್ನು ಈಗ ವಿವರಿಸುವುದಿಲ್ಲ. ಪವಿತ್ರ ಖುರ್‌ಆನನ್ನು ನಿಂದಿಸಿ ಮತ್ತು ಅಪಮಾನಿಸಿ ಆತನು ಹೊರಡಿಸಿದ ಪ್ರಸ್ತಾವನೆ, ಇಸ್ಲಾಮಿನೊಡನೆ ಇರುವ ಶತ್ರುತ್ವ ಇವರಲ್ಲಿ ಎಷ್ಟರ ಮಟ್ಟಿಗೆ ಬೆಳೆದಿದೆ ಎಂದು ಸ್ಪಷ್ಟಪಡಿಸುತ್ತದೆ. ಡೆನ್ಮಾರ್ಕ್‌ನಲ್ಲಿ ಪ್ರಕಟಿಸಿದ ಕಾರ್ಟೂನ್ ತಮ್ಮ ವೆಬ್‌ಸೈಟಿನಲ್ಲೂ ಇವರು ಸೇರಿಸಿದರು. ಅವರು ಅದನ್ನು ತುಂಬಾ ಹೊಗಳಿದರು. ಹೇಗಿದ್ದರೂ ಅಲ್ಲಾಹನೇ ಇವರನ್ನು ಹಿಡಿಯುವನು. ಪವಿತ್ರ ಖುರ್‌ಆನಿನ ಬಗ್ಗೆ ಹೊರಡಿಸಿದ ಪ್ರಸ್ತಾವನೆ ಹೀಗಿದೆ: ಖುರ್‌ಆನ್ ಭಯೋತ್ಪಾದನೆಯನ್ನು ಕಲಿಸುತ್ತದೆ. ಆದುದರಿಂದ ಅದರ ಮೇಲೆ ನಿಯಂತ್ರಣ ಹೇರಬೇಕಾಗಿದೆ. ಅರ್ಧಾಂಶ ಖುರ್‌ಆನನ್ನು ಹರಿದು ಬಿಸಾಡಬೇಕಾಗಿದೆ. (ನವೂದು ಬಿಲ್ಲಾಹ್.) ಈಗ ಪವಿತ್ರ ಖುರ್‌ಆನಿನ ವಿರುದ್ಧ ಒಬ್ಬ ವ್ಯಕ್ತಿ ಸಿನೆಮಾ ನಿರ್ಮಿಸುತ್ತಾರೆ. ಮುಂಚೆಯೇ ರಿಲೀಸ್ ಮಾಡಲು ಇವರ ಕಾರ್ಯಕ್ರಮವಿತ್ತು. ಆದರೆ ಇಷ್ಟರವರೆಗೆ ಅವರಿಗೆ ಅದು ಸಾಧ್ಯವಾಗಿಲ್ಲ. ಮುಸ್ಲಿಂ ಸಂಘಟನೆಗಳು ಸರಕಾರಕ್ಕೆ ಈ ಬಗ್ಗೆ ನಿವೇದನೆ ಕೊಟ್ಟಿವೆ. ನಮ್ಮ ಜಮಾಅತ್ ಸಹ ನಿವೇದನೆ ಸಲ್ಲಿಸಿದೆ. ಫಿತ್ನ ಅಥವಾ ಕ್ಷೋಭೆ ಎಂದು ಈ ಸಿನೆಮಾವನ್ನು ಹೆಸರಿಸಲಾಗಿದೆ.

ನೀವು ಇದರಲ್ಲಿ ಏನನ್ನು ತೋರಿಸುವಿರೆಂದು ಯಾರೋ ಇವರೊಡನೆ ಕೇಳಿದರು. ಖುರ್‌ಆನಿನ ಆಜ್ಞೆಗಳನ್ನೇ ತೋರಿಸುವೆವೆಂದು ಅವರು ಹೇಳಿದರು. ಅವಿಶ್ವಾಸಿಗಳನ್ನು ರಣಾಂಗಣದಲ್ಲಿ ಕಂಡರೆ ಅವರ ಕೊರಳು ಕೊಯ್ಯಲು ಅದು ಕಲಿಸುತ್ತದೆಯಂತೆ! ಆಕ್ರಮಣ ಉಂಟಾಗುವಾಗ ಪ್ರತಿರೋಧ ಯುದ್ಧ ಮಾಡಬೇಕಾದೀತು. ಇನ್ನು ಅವರು ಹೇಳುವುದು ಇರಾಖ್ ಮತ್ತು ಅಫ್ಘಾನಿಸ್ಥಾನದಲ್ಲಿ ಮನುಷತ್ವವನ್ನು ತುಳಿದು ದಮನಿಸುವುದನ್ನು ತೋರಿಸಲಾಗುವುದೆಂದು. ಇದರ ಹಿಂದೆ ಸಹ ದೊಡ್ಡ ಸಂಘಟನೆಗಳು ವರ್ತಿಸುತ್ತಿರುವುದಾಗಿ ತೋರುತ್ತದೆ. ಆದರೆ, ಇಲ್ಲೆಲ್ಲ ಒಳ್ಳೆಯ ಪ್ರತಿಕ್ರಿಯೆ ಕಂಡುಬರುತ್ತದೆ. ಸರಕಾರವು ಮುಸ್ಲಿಂ ವಿದ್ವಾಂಸರೊಂದಿಗೆ ಮೀಟಿಂಗ್ ನಡೆಸಿದೆ. ನಮ್ಮ ಜಮಾಅತ್ ಸಹ ನಿವೇದನೆ ಸಲ್ಲಿಸಿದೆ. ರಾಜ್ಞಿಗೆ ಸಹ ಪತ್ರದ ಮೂಲಕ ವಿವರ ತಿಳಿಸಲಾಗಿದೆ. ಪಾರ್ಲಿಮೆಂಟ್ ಸದಸ್ಯರಿಗೆ ಸಹ ಪತ್ರ ನೀಡಲಾಗಿದೆ. ಸ್ಪಷ್ಟವಾದ ರೀತಿಯಲ್ಲಿ ವಿಷಯಗಳನ್ನು ನಾವು ವಿಶದೀಕರಿಸಿಕೊಟ್ಟು, ಇಂತಹ ಆಧಾರ ರಹಿತವಾದ ವರ್ತನೆಗಳು ನಮ್ಮ ಸಮೂಹದ ಶಾಂತಿಯನ್ನು ಕದಡಿಸುವುದೆಂದು ನಾವು ಹೇಳಿದ್ದೇವೆ. ನಾನು ಶಾಂತಿ ಸಭೆಯಲ್ಲಿ ಮಾಡಿದ ಭಾಷಣದ ಪ್ರತಿಯನ್ನು ಆ ಪತ್ರಗಳ ಜೊತೆಯಲ್ಲಿ ಕೊಡಲಾಗಿದೆ. ಪಾರ್ಲಿಮೆಂಟ್ ಸದಸ್ಯರೂ ಮತ್ತಿತರ ಹಲವರೂ ಬಹಳ ಉತ್ತಮ ರೀತಿಯಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ಸ್ಪೀಕರ್ ಬರೆದರು: ನಿಮ್ಮ ಪತ್ರವನ್ನು ನಾನು ಎಲ್ಲ ಪಾರ್ಲಿಮೆಂಟ್ ಸದಸ್ಯರಿಗೆ ವಿತರಣೆ ಮಾಡಿದ್ದೇನೆ. ಸಮೂಹದಲ್ಲಿ ಅಶಾಂತಿ ಹರಡುವವರು ಅದರಿಂದ ಹಿಂದೆ ಸರಿಯಬೇಕೆಂದೂ ಯಾರಿಗಾದರೂ ಉಪದ್ರ ಉಂಟಾಗುವ ರೀತಿಯಲ್ಲಿ ಮಾತನಾಡಬಾರದೆಂದೂ ರಾಜ್ಞಿ ಸಹ ತನ್ನ ಸಂದೇಶದಲ್ಲಿ ಹೇಳಿದ್ದಾರೆ. ಅವರು ಪ್ರಧಾನ ಮಂತ್ರಿಗೂ ಆ ಸಂದೇಶವನ್ನು ಕಳುಹಿಸಿದ್ದಾರೆ. ವಿಲ್ಡರ್ಸ್ ಎಂಬ ವ್ಯಕ್ತಿ ಈ ಕೃತ್ಯವನ್ನು ತೊಡಗಿದನು. ರಾಜ್ಞಿ ಹೇಳಿದ್ದು ತನ್ನ ಬಗ್ಗೆಯೆಂದು ಆಕ್ಷೇಪಿಸಿ ಆತನು ಈಗ

ರಾಜ್ಞಿಯ ವಿರುದ್ಧ ತಿರುಗಿಬಿದ್ದಿದ್ದಾನೆ. ಈ ಸಮಸ್ಯೆಗಳಲ್ಲಿ ಸರಕಾರ ಹಸ್ತಕ್ಷೇಪ ಮಾಡಬಾರದೆಂದು ಆತನು ಅಗತ್ಯಪಡಿಸಿದ್ದಾನೆ. ಹೀಗೆ ಇವರ ಈ ಕುತ್ಸಿತ ಪ್ರಯತ್ನಕ್ಕೆದುರಾಗಿ ಪ್ರತಿಕ್ರಿಯಿಸಲು ಇವರಿಂದಲೇ ಅಲ್ಲಾಹನು ಜನರನ್ನು ತರುತ್ತಾನೆ. ಸತ್‌ಸ್ವಭಾವಿಗಳಾದ ಅನೇಕ ಜನರು ಈ ರಂಗದಲ್ಲಿದ್ದಾರೆ. ಇವರ ಸಂಖ್ಯೆಯನ್ನು ಅಲ್ಲಾಹನು ವೃದ್ಧಿಗೊಳಿಸಲಿ. ಶತ್ರುಗಳು ತಮ್ಮ ಕೃತ್ಯಗಳಿಂದ ಹಿಮ್ಮೆಟ್ಟಲಿ. ಇಲ್ಲವಾದರೆ ಅಲ್ಲಾಹನ ವಿಧಿ ಉದ್ದೇಶಿಸುವಾಗ ವರ್ತಿಸುವುದು. ಆಗ ಅದು ಯಾರನ್ನೂ ಬಿಟ್ಟುಬಿಡದು.

ಪವಿತ್ರ ಖುರ್‌ಆನಿನ ಮೇಲೆ ಆಕ್ರಮಣ ಮಾಡಿ ಕೆನಡಾದ ಓರ್ವ ಕ್ರೈಸ್ತ ಮಿಷನರಿ ಡೋನ್ ರಿಚರ್ಡ್‌ಸನ್ ಒಂದು ಪುಸ್ತಕವನ್ನು ಮೂರು ನಾಲ್ಕು ವರ್ಷ ಮೊದಲೇ ಪ್ರಕಟಿಸಿದ್ದರು. 'ದಿ ಸೀಕ್ರೆಟ್ಸ್ ಆಫ್ ಖುರ್‌ಆನ್' ಎಂದು ಅದರ ಹೆಸರು. ಹಗೆ ಮತ್ತು ವಿದ್ವೇಷದಿಂದ ಕೂಡಿದ ಪುಸ್ತಕ ಅದಾಗಿದೆ. ಖುರ್‌ಆನಿನ ವಿವಿಧ ವಚನಗಳನ್ನು ಬರೆದು ಅದರಲ್ಲಿ ಹೇಳಿರುವ ವಿಚಾರಗಳನ್ನು ಖಂಡಿಸಲು ಆ ಪಾದರಿ ಪ್ರಯತ್ನಿಸಿದ್ದಾರೆ. ಪ್ರತಿಯೊಂದು ಕಡೆಯಲ್ಲಿ ಕೆಲವು ವಚನಗಳನ್ನು ತೆಗೆದುಕೊಂಡು ತನಗೆ ಸಿಕ್ಕಿದ ಖುರ್‌ಆನಿನ ಏಳೆಂಟು ತರ್ಜುಮೆಗಳನ್ನು ಬರೆದುಕೊಂಡು ಅವರು ವಿಷಯ ಮಂಡಿಸುತ್ತಾರೆ..... ಆ ಪುಸ್ತಕವನ್ನು ನಾನು ತರಿಸಿದ್ದೇನೆ. ಅದರ ಕೆಲವು ಪುಟಗಳನ್ನು ತಿರುವಿ ನೋಡಿದಾಗ, ಇಸ್ಲಾಮಿಗೆ ವಿರುದ್ಧವಾಗಿ ಹಗೆ ಮತ್ತು ದ್ವೇಷ ಜ್ವಲಿಸುವುದನ್ನು ಕಾಣಲು ಸಾಧ್ಯವಾಯಿತು. ಒಂದೆಡೆಯಲ್ಲಿ ಹೀಗೆ ಬರೆಯಲಾಗಿದೆ: "ಸ್ವತಂತ್ರ ಚಿಂತಕರಾದ ಧಾರಾಳ ಅಮೇರಿಕನರು ತಿಳಿದುಕೊಂಡಿರುವುದೇನೆಂದರೆ, ಖುರ್‌ಆನಿನಲ್ಲಿ ನಂಬಿಕೆಯುಳ್ಳ 1.3 ಬಿಲಿಯನ್ ಮುಸ್ಲಿಮರು ಅದರಲ್ಲಿ ಹೇಳಿರುವ ಅಧ್ಯಾಪನಗಳು ಸರಿಯಾದುದರಿಂದ ನಂಬುತ್ತಾರೆಂದು. ಇದು ಆ ಅಮೇರಿಕನರ ತಪ್ಪು ಭಾವನೆಯಾಗಿದೆ. ವಾಸ್ತವದಲ್ಲಿ ಇಸ್ಲಾಮಿನಲ್ಲಿ ಸತ್ಯ ಸಂಧವಾದ ಯಾವ ವಿಚಾರವೂ ಇಲ್ಲ. ಖುರ್‌ಆನಿನಲ್ಲಿ ಸನ್ಮಾರ್ಗವೂ ಇಲ್ಲ."

ಮುಂದುವರಿಸುತ್ತಾ, ಪ್ರೆಸಿಡೆಂಟ್ ಬುಶ್ ಬಗ್ಗೆ ಹೀಗೆ ಬರೆಯಲಾಗಿದೆ: "ಅವರು ಬಹಳ ಉತ್ತಮ ವ್ಯಕ್ತಿ. ಆದರೆ, ಅನೇಕ ಪಾಶ್ಚಾತ್ಯರಂತೆ ಅವರು ಸಹ ಇಸ್ಲಾಮಿನ ಬಗ್ಗೆ ಅಜ್ಞ. ಕಾರಣವೇನೆಂದರೆ, ಸಪ್ಟೆಂಬರ್ 11ರ ನಂತರ ಅವರು ಭಯೋತ್ಪಾದಕರಿಗೆ ವಿರುದ್ಧದ ಯುದ್ಧವನ್ನು ಕ್ರುಸೇಡ್ ಅಥವಾ ಧರ್ಮಯುದ್ಧ ಎಂದು ಹೇಳಿದ್ದಾರೆ. ಇದು ಅವರ ಅವಿವೇಕತನವಾಗಿದೆ. ಅವರ ಸಲಹೆಗಾರರು ಕೂಡ ಅವರಿಗೆ ಸರಿಯಾದ ಸಲಹೆ ನೀಡಲಿಲ್ಲ. ಬುಶ್ ಇದನ್ನು ಧರ್ಮಯುದ್ಧ ಎಂದು ತಿಳಿದುಕೊಂಡಿದ್ದರೆ ಕೂಡ ಅದನ್ನು ಬಹಿರಂಗಪಡಿಸಬಾರದಿತ್ತು. ಕಾರಣವೇನೆಂದರೆ, ಅದರ ಮೂಲಕ ಕ್ರೈಸ್ತ ಧರ್ಮದ ಮೇಲೆ ದುಷ್ಪರಿಣಾಮವಾಗುವುದು."

ಈ ರೀತಿಯಲ್ಲಿ ಇವರ ಅಂತರಂಗದಲ್ಲಿ ಇಂದು ಇಸ್ಲಾಂ ಮತ್ತು ಖುರ್‌ಆನಿಗೆ ವಿರುದ್ಧವಾಗಿ ಹಗೆ ಮತ್ತು ವಿದ್ವೇಷ ತುಂಬಿಕೊಂಡಿವೆ. ಆದರೆ, ಇಸ್ಲಾಂ ಮತ್ತು ಖುರ್‌ಆನಿನ ಎಲ್ಲ ಶತ್ರುಗಳು ಏನೇ ತಿಳಿದುಕೊಂಡಿದ್ದರೂ ಕೊನೆಗೆ ಜಯಿಸುವುದು ಇಸ್ಲಾಮಿಕ ಅಧ್ಯಾಪನವೇ ಆಗಿದೆಯೆಂದು ಅಲ್ಲಾಹನು ಹೇಳುತ್ತಾನೆ. ಇನ್‌ಶಾಅ್ ಅಲ್ಲಾಹ್. ಇದು ದೇವವಿಧಿಯಾಗಿದೆ. ಇವರ ಸುಳ್ಳು ಅಥವಾ ಶಕ್ತಿ ಅಥವಾ ಸಂಪತ್ತು ಅಥವಾ ಪ್ರತಾಪಕ್ಕೆ ಇದರ ಬೆಳವಣಿಗೆಯನ್ನು ತಡೆಯಲು ಸಾಧ್ಯವಿಲ್ಲ. ಆದರೆ ಕೆಲವು ಮುಸ್ಲಿಂ ಆಡಳಿತೆಗಳನ್ನು ನೋಡುವಾಗ ಬೇಸರವಾಗುತ್ತದೆ. ಅವರು ಪ್ರತ್ಯಕ್ಷದಲ್ಲಿ ಮುಸ್ಲಿಮರಾದರೂ ತಮ್ಮ ಯಥಾರ್ಥ ಉದ್ದೇಶವನ್ನು ಮರೆತುಬಿಟ್ಟಿದ್ದಾರೆ. ಬಾಹ್ಯವಾದ ತಮ್ಮ ಪ್ರೌಢಿಮೆ ಮತ್ತು ಪ್ರತಾಪ ಕಾರಣದಿಂದ ತಿಳಿದೋ ತಿಳಿಯದೆಯೋ ಇಸ್ಲಾಮನ್ನು ಅವರು ಬಲಗುಂದಿಸುತ್ತಿದ್ದಾರೆ.

ಒಬ್ಬ ಅಮೇರಿಕನ್ ಈ ವಿಚಾರವನ್ನು ತನ್ನ ಪುಸ್ತಕದಲ್ಲಿ, ಏನೆಲ್ಲ ನಡೆಯುತ್ತಿದೆಯೋ ಅದರಲ್ಲಿ ಇಸ್ಲಾಮಿಕ ರಾಷ್ಟ್ರಗಳ ನಾಯಕರ ಕೈವಾಡ ಇದೆಯೆಂದು ಬಹಿರಂಗಪಡಿಸಿದ್ದಾರೆ. ಇದು ಪಾಶ್ಚಾತ್ಯರ ಕೈಯಲ್ಲಿ ತೈಲ ಸಂಪತ್ತನ್ನು ತರುವ ಪ್ರಯತ್ನವಾಗಿದೆ. ಅದರಲ್ಲಿ ಮುಸ್ಲಿಂ ಆಡಳಿತೆಗಳು ಸಹ ಪಾಲ್ಗೊಂಡಿವೆ. ಅಂದರೆ, ನೇತಾರರು. ಅದರಲ್ಲಿ ಹೇಳಲಾಗಿದೆ: "ಸಾಮಾನ್ಯ ಜನರಿಗೆ ಇಂತಹ ವಿಚಾರಗಳ ಬಗ್ಗೆ ತಿಳುವಳಿಕೆಯಿಲ್ಲ. ಹಗೆ ಮತ್ತು ವಿದ್ವೇಷ ಭರಿತ ಇಂತಹ ಜನರು ಖುರ್‌ಆನನ್ನು ತೆರೆಯುವುದು ಮತ್ತು ನೋಡುವುದು ಅದರಿಂದ ಆಕ್ಷೇಪಾರ್ಹವಾದ ಏನಾದರೂ ವಚನ ಸಿಗುತ್ತದೋ ಎಂಬುದಕ್ಕಾಗಿ." ಅವರ ಹೃದಯ ಬಂಡೆಯಂತೆ. ಅಲ್ಲ, ಅದಕ್ಕಿಂತ ಕಠಿಣ. ಪವಿತ್ರ ಖುರ್‌ಆನಿನ ಅಧ್ಯಾಪನೆ ಅವರಿಗೆ ಏನೂ ಪ್ರಯೋಜನವಾಗಲಿಕ್ಕಿಲ್ಲ. ಹಗೆ ಮತ್ತು ದ್ವೇಷಭರಿತ ಹೃದಯವಿರುವವರಿಗೂ ಕೊಳೆಯಲ್ಲಿ ವಾಸಿಸುವ ಶೀಲವಿರುವವರಿಗೂ - ಅವರು ಅದರಲ್ಲೇ ಇರಬೇಕೆಂದು ಹಟಹಿಡಿಯುತ್ತಾರೆ- ಈ ಬರಹಯಿಂದ ಹೇಗೆ ಪ್ರಯೋಜನ ಪಡೆಯಲು ಸಾಧ್ಯ? ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ:

"ದಿಟವಾಗಿಯೂ ಇದು ಆದರಣೀಯವಾದ ಖುರ್‌ಆನ್ ಆಗಿದೆ - ಸುರಕ್ಷಿತವಾದ ಗ್ರಂಥ ರೂಪದಲ್ಲಿ. ಪರಿಶುದ್ಧರಾದವರು ಹೊರತು ಬೇರ್‍ಯಾರೂ ಅದನ್ನು ಸ್ಪರ್ಶಿಸಲಾರರು." (56 : 78-80).

ಈ ವಚನಕ್ಕೆ ಮುಂಚೆ ಅಲ್ಲಾಹನು ಹೇಳುತ್ತಾನೆ: "ನಾನು ನಕ್ಷತ್ರಗಳ ನೆಲೆಗಳ ಕುರಿತು ಪ್ರಮಾಣವಾಗಿ ಹೇಳುತ್ತೇನೆ" (56 : 76). ಈ ವಚನವನ್ನೂ ಸೇರಿಸಿಕೊಂಡು ಹಝ್ರತ್ ಮಸೀಹ್ ಮೌಊದ್[ಅ] (ಅಹ್ಮದಿಯಾ ಜಮಾಅತಿನ ಸ್ಥಾಪಕರು) ಆ ವಚನಗಳನ್ನು ಹೀಗೆ ವಿಶದೀಕರಿಸುತ್ತಾರೆ: "ಅಲ್ಲಾಹನು ಹೇಳುತ್ತಾನೆ: ನಾನು ನಕ್ಷತ್ರಗಳ ನೆಲೆಗಳ ಕುರಿತು ಪ್ರಮಾಣವಾಗಿ ಹೇಳುತ್ತೇನೆ. ನೀವು ತಿಳಿಯುವವರಾಗಿದ್ದರೆ ಅದು ಬಲು ದೊಡ್ಡ ಪ್ರಮಾಣವಾಗಿದೆ. ಈ ಖುರ್‌ಆನ್ ಮಹತ್ತರವಾದೊಂದು ಗ್ರಂಥವೆಂದು ಸತ್ಯ ಪ್ರಮಾಣಮಾಡಿ ಹೇಳಲಾಗಿದೆ. ಇದರ ಅಧ್ಯಾಪನೆಗಳು ಅಲ್ಲಾಹನ ನಡೆವಳಿಕೆಗೆ ವಿರುದ್ಧವಲ್ಲ. ಅವು ಪ್ರಕೃತಿ ನಿಯಮದಲ್ಲಿ ಬರೆಯಲ್ಪಟ್ಟಿವೆ. ಪ್ರತಿಯೊಬ್ಬ ಮನುಷ್ಯನ ಪ್ರಕೃತಿಯಲ್ಲಿ ಇದು ಅಡಕವಾಗಿದೆ. ಇದರ ಜ್ಞಾನ ಗಳಿಸುವವರು ಪರಿಶುದ್ಧಗೊಳಿಸಲ್ಪಟ್ಟವರಾಗಿದ್ದಾರೆ. ಹೃದಯ ಶುದ್ಧಿಯುಳ್ಳವರು ಇದರ ಜ್ಞಾನವನ್ನೂ ಆಳವನ್ನೂ ಮನವರಿಕೆಮಾಡುತ್ತಾರೆ. ಇಲ್ಲಿ ಅಲ್ಲಾಹನು ನಕ್ಷತ್ರಗಳ ನೆಲೆಗಳ ಕುರಿತು ಪ್ರಮಾಣವಾಗಿ ಸೂಚಿಸುವುದೇಕೆಂದರೆ, ನಕ್ಷತ್ರ ಅತ್ಯಂತ ಎತ್ತರದಲ್ಲಿರುವ ಕಾರಣದಿಂದ ಒಂದು ಚುಕ್ಕಿಯಂತೆ ಕಾಣುತ್ತದೆ. ಆದರೆ ನಿಜವಾಗಿ ಅದೊಂದು ಚುಕ್ಕಿಯಲ್ಲ. ಬದಲು, ಬಹಳ ದೊಡ್ಡದಿದೆ. ಇದೇ ಪ್ರಕಾರವೇ ಪವಿತ್ರ ಖುರ್‌ಆನ್ ಅದರ ಅತ್ಯುನ್ನತಿ ಮತ್ತು ಜ್ಞಾನ ಪ್ರೌಢಿಮೆ ಕಾರಣದಿಂದ ದೃಷ್ಟಿ ಕಡಿಮೆಯಿರುವವರ ಕಣ್ಣುಗಳಿಂದ ಮರೆಯಾಗಿದೆ. ಕಣ್ಣಿನ ಕಶ್ಮಲ ನೀಗಿದವರು ಅದನ್ನು ಸ್ಪಷ್ಟವಾಗಿ ಕಾಣುತ್ತಾರೆ. ಈ ವಚನಗಳ ಮೂಲಕ ಅಲ್ಲಾಹನು ಪವಿತ್ರ ಖುರ್‌ಆನಿನ ಉನ್ನತ ಮತ್ತು ಅತಿ ಗಹನವಾದ ಜ್ಞಾನಗಳ ಬಗ್ಗೆ ಸೂಚನೆ ನೀಡಿದ್ದಾನೆ. ಅದು ಅಲ್ಲಾಹನ ವಿಶಿಷ್ಟ ದಾಸರೊಂದಿಗೆ ಜೋಡಿಸಲ್ಪಟ್ಟಿದೆ. ಅವರನ್ನು ಅಲ್ಲಾಹನು ತನ್ನ ಕೈಯಿಂದ ಪರಿಶುದ್ಧ ಗೊಳಿಸುತ್ತಾನೆ. ಪವಿತ್ರ ಖುರ್‌ಆನಿನ ಜ್ಞಾನಗಳು ವಿಶಿಷ್ಟ ವ್ಯಕ್ತಿಗಳೊಂದಿಗೆ ಜೋಡಿಸಲ್ಪಟ್ಟಿರುವಾಗ ಇತರರು ಅವಿಧೇಯತೆ ತೋರಿಸಿದರೆ

ಅವರನ್ನು ಏಕೆ ಶಿಕ್ಷಿಸಲಾಗುವುದೆಂಬ ಆಕ್ಷೇಪ ಆಧಾರರಹಿತವಾಗಿದೆ. ಕಾರಣವೇನೆಂದರೆ, ಪವಿತ್ರ ಖುರ್‌ಆನಿನ ನಂಬಿಕೆಯ ನೆಲೆಯಲ್ಲಿರುವ ಜ್ಞಾನ ಸತ್ಯನಿಷೇಧಿಗಳಿಗೆ ಕೂಡ ಮನವರಿಕೆಮಾಡಲು ಸಾಧ್ಯವಾಗುವಷ್ಟು ಸುಗಮವಾಗಿದೆ. ಅಂದರೆ, ಬಹಳ ಆಳವಾದ ಜ್ಞಾನವೂ ಇದೆ; ಸಾಮಾನ್ಯನಿಗೆ ತಿಳಿದುಕೊಳ್ಳಲು ಸಾಧ್ಯವಾಗುವ ಜ್ಞಾನವೂ ಇದೆ. ತಿಳಿದುಕೊಳ್ಳಲು ಬಯಸುವವರಿಗೆ ತಿಳಿದುಕೊಳ್ಳಬಹುದಾಗಿದೆ. ಅದು ಓದುವವರಿಂದ ಮರೆಯಾಮದಲ್ಲ...... ವಿಶ್ವಾಸದ ಅಧ್ಯಾಪನೆ ಎಲ್ಲರಿಗೂ ಮನವರಿಕೆಮಾಡಲು ಅಸಾಧ್ಯವೆಂದಾಗಿದ್ದರೆ ಆಕ್ಷೇಪ ಉಂಟಾಗುತ್ತಿತ್ತು. ಮತ್ತೆ ಏನು ಪ್ರಬೋಧಿಸಲಿಕ್ಕಿದೆ? ಜನರಿಗೆ ಹೇಗೆ ಮನಗಾಣಿಸಿಕೊಡುವುದು? ಎಲ್ಲರೂ ಅಗಾಧ ಜ್ಞಾನವನ್ನು ಮನವರಿಕೆಮಾಡಲು ಶಕ್ತರಲ್ಲ.

"ಆದುದರಿಂದ ಇದು ಎಲ್ಲರಿಗೂ ಮನವರಿಕೆಯಾಗುವ ರೀತಿಯಲ್ಲಿರುವ ಅಧ್ಯಾಪನವೆಂಬುದು ಸರಿಯೇ. ಆದರೆ, ಯಥಾರ್ಥ ರೂಪದಲ್ಲಿರುವ ದೈವಿಕ ಜ್ಞಾನ, ಅದು ವಿಶ್ವಾಸದ ಸಂಚಾರಮಾರ್ಗವಲ್ಲದಿದ್ದುದರಿಂದ, ಬದಲು, ಹೆಚ್ಚಾಗಿ ದೇವನನ್ನು ಗುರುತಿಸುವ ಉಪಾಧಿಯಾದುದರಿಂದ ಅದನ್ನು ಪ್ರತ್ಯೇಕಿಸಲಾಗಿದೆ. ಅಂದರೆ, ವಿಶ್ವಾಸಹೊಂದಲು ಗಾಢವಾದ ದೈವಿಕ ಜ್ಞಾನ ಅವಶ್ಯವಿಲ್ಲ. ಬದಲು, ದೈವಿಕ ಜ್ಞಾನದ ಗಾಢವಾದ ವಿಚಾರಗಳು ದೇವನನ್ನು ಚೆನ್ನಾಗಿ ಗುರುತಿಸಲಿಕ್ಕೂ ಯಥಾರ್ಥವಾದ ಜ್ಞಾನವನ್ನು ಕರಗತ ಮಾಡಲಿಕ್ಕೂ ಅನಿವಾರ್ಯವಾಗಿದೆ. ಆದ್ದರಿಂದ ಪ್ರಮುಖ ವ್ಯಕ್ತಿಗಳಿಗೆ ಆ ವಿಚಾರಗಳು ಮನಗಾಣಿಸಿಕೊಡಲ್ಪಟ್ಟಿವೆ. ಅವು ವಾಸ್ತವದಲ್ಲಿ ವರದಾನ ಮತ್ತು ಆಧ್ಯಾತ್ಮಿಕ ಅನುಗ್ರಹಗಳಾಗಿವೆ. ಅದು ವಿಶ್ವಾಸಹೊಂದಿದ ಬಳಿಕ ಅದನ್ನು ಪೂರ್ಣತೆಗೆ ತಲಪಿಸುವವರಿಗೆ ಲಭಿಸುತ್ತದೆ. ಭೌತಿಕ ವಿದ್ಯಾಭ್ಯಾಸ ಮತ್ತು ಅದರ ಗಾಢವಾದ ಜ್ಞಾನ ಸಂಪಾದಿಸಲಿಕ್ಕೆ ದೇವ ಭಯ ಅಥವಾ ಪರಿಶುದ್ಧಿಯ ಅಗತ್ಯವಿಲ್ಲ. ಅದನ್ನು ಯಾವ ನೀಚ ಮನುಷ್ಯನಿಗೂ ಆಜ್ಞಾಲಂಘಕನಿಗೂ ಗಲಭೆಕೋರನಿಗೂ ಗಳಿಸಲಿಕ್ಕೆ ಸಾಧ್ಯ. ಅತಿ ಸಾಮಾನ್ಯರೂ ಬಿರುದುಗಳನ್ನು ಗಳಿಸುತ್ತಾರೆ. ಆದರೆ, ಧಾರ್ಮಿಕ ಜ್ಞಾನ ಎಲ್ಲರಿಗೂ ಗಳಿಸಲು ಅಸಾಧ್ಯ. ಅದನ್ನು ಪಡೆಯಲು ದೇವ ಭಯಭಕ್ತಿ ಮತ್ತು ಪರಿಶುದ್ಧಿ ಅಗತ್ಯ. ಅಲ್ಲಾಹನು ಹೇಳುತ್ತಾನೆ: "ಲಾ ಯಮಸ್ಸುಹು ಇಲ್ಲಲ್ ಮುತಹ್ಹರೂನ್" (ಪರಿಶುದ್ಧರಾದವರು ಹೊರತು ಬೇರ್‍ಯಾರೂ ಅದನ್ನು ಸ್ಪರ್ಶಿಸಲಾರರು). ಆದುದರಿಂದ ಧಾರ್ಮಿಕ ಜ್ಞಾನ ಸಂಪಾದಿಸಲು ಇಚ್ಛಿಸುವವರು ಖಂಡಿತವಾಗಿಯೂ ಭಯಭಕ್ತಿಯಲ್ಲಿ ಅಭಿವೃದ್ಧಿಹೊಂದಬೇಕಾಗಿದೆ. ಎಷ್ಟರ ಮಟ್ಟಿಗೆ ಅದರ ಅಭಿವೃದ್ಧಿಯಾಗುತ್ತದೋ ಅಷ್ಟರ ಮಟ್ಟಿಗೆ ಸೂಕ್ಷ್ಮವಾದ ದೈವಿಕ ಜ್ಞಾನ ಸಿದ್ಧಿಸುವುದು."

ಪ್ರಥಮ ವಿಚಾರ ವಿಶ್ವಾಸವಾಗಿದೆ. ನಂತರ, ಹೆಚ್ಚಿನ ದೈವಿಕ ಜ್ಞಾನ ಗಳಿಸ ಬೇಕಾದರೆ ಹೃದಯ ಶುದ್ಧಿ ಮತ್ತು ಭಯ ಭಕ್ತಿಯಲ್ಲಿ ಅಭಿವೃದ್ಧಿ ಹೊಂದಬೇಕಾದೀತು. ಅದರಲ್ಲಿ ಅಭಿವೃದ್ಧಿಗೊಳ್ಳುವುದಕ್ಕೆ ಅನುಗುಣವಾಗಿ ಹೆಚ್ಚು ಹೆಚ್ಚು ಪರಿಶುದ್ಧಿಯನ್ನು ಹೊಂದಬಹುದು. ಹಾಗೆ ಪವಿತ್ರ ಖುರ್‌ಆನಿನ ಜ್ಞಾನ ಸಿದ್ಧಿಸುವುದು.

ಆದುದರಿಂದ, ದೂರ ನಿಂತು ಪವಿತ್ರ ಖುರ್‌ಆನನ್ನು ನೋಡುವವರಿಗೂ ತಪ್ಪು ಹಗೆ ಮತ್ತು ವಿದ್ವೇಷದಿಂದ ಹತ್ತಿರ ಬರಲಿಕ್ಕೆ ಕೂಡ ಇಚ್ಛಿಸದವರಿಗೂ ಇತರರನ್ನು ಹಾದಿಗೆಡಿಸಲು ಪ್ರಯತ್ನಿಸುವವರಿಗೂ ಅದು ಏನೂ ಪ್ರಯೋಜನವಾಗಲಿಕ್ಕಿಲ್ಲ. ತಾನು ಎಲ್ಲ ದಾರಿಗಳಲ್ಲೂ ತಡೆಯೊಡ್ಡುವೆನೆಂದು ಶೈತಾನ ಹೇಳಿದ್ದಾನೆ. ಈ ಜನರು ಅವನ ದಾರಿಯನ್ನು ಕೈಗೊಂಡಿದ್ದಾರೆ. ಖುರ್‌ಆನನ್ನು ಮನವರಿಕೆಮಾಡಲಿಕ್ಕೆ, ಮೊದಲು ಹೃದಯವನ್ನು ಶುದ್ಧೀಕರಿಸಬೇಕು. ಅದರಲ್ಲಿ ನೆಲೆಗೊಳ್ಳಬೇಕು. ಪರಿಶುದ್ಧ ಹೃದಯವಿದ್ದರೆ ಏನಾದರೂ ಮನವರಿಕೆಯಾಗ ಬಹುದು. ದೇವನ ಬಗ್ಗೆ ಹೆಚ್ಚು ತಿಳಿಯಲಿಕ್ಕೆ ಭಯ ಭಕ್ತಿ ಹೆಚ್ಚು ವಿಕಸಿಸಬೇಕು. ಇದು ಪವಿತ್ರ ಖುರ್‌ಆನನ್ನು ತಿಳಿಯಲಿಕ್ಕಿರುವ ಮಾನದಂಡವಾಗಿದೆ. ನಾನು ಹೇಳಿದ ಆ ಮಹಿಳೆ ಪವಿತ್ರ ಖುರ್‌ಆನಿನ ಭಾಷಾಂತರ ಓದಿ ಮುಸ್ಲಿಂ ಆದರು. ಯಾರ ಭಾಷಾಂತರ ಓದಿದ್ದೆಂದು ಗೊತ್ತಿಲ್ಲ. ಅದು ಎಷ್ಟರ ಮಟ್ಟಿಗೆ ಸರಿಯೆಂದು ಸಹ ಗೊತ್ತಿಲ್ಲ. ಹೇಗಿದ್ದರೂ ಅವರ ಹೃದಯದಲ್ಲಿ ಅದು ಪರಿಣಾಮ ಬೀರಿತು. ಖುರ್‌ಆನನ್ನು ಮನವರಿಕೆ ಮಾಡಲು ಪರಿಶುದ್ಧ ಹೃದಯವಂತರಾಗಬೇಕಾದದ್ದು ಮತ್ತು ಅದರಲ್ಲಿ ಹೇಳಲಾದ ಮುತ್ತುಗಳ ಕುರಿತು ಅನ್ವೇಷಣೆ ಮಾಡಬೇಕಾದದ್ದು ಅತ್ಯಾವಶ್ಯಕವಾಗಿದೆ. ಸಮೀಪಕ್ಕೆ ಬಂದು ನೋಡಬೇಕಾದದ್ದು ಅಗತ್ಯ. ಆದರೆ ಆ ಪಾದರಿಯಂತೆ ಆಕ್ಷೇಪ ದೃಷ್ಟಿಯಿಂದ ನೋಡುವುದಾದರೆ ಅವರಿಗೆ ಏನನ್ನೂ ಕಾಣಲು ಅಸಾಧ್ಯ. ಆತ ನಕ್ಷತ್ರವನ್ನು ದೂರದಿಂದ ನೋಡಿ ಮಿನುಗುವ ಒಂದು ಚುಕ್ಕಿಯೆಂದು ಅದನ್ನು ತಿಳಿಯುವ ಹೆಡ್ಡನಂತೆ. ಅಂತಹ ಬುದ್ಧಿಹೀನರ ಬಗ್ಗೆ ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ. ಪವಿತ್ರ ಖುರ್‌ಆನಿನ ಅಧ್ಯಾಪನೆಯಿಂದ ಅಸೂಯೆ, ಹಗೆ, ವಿದ್ವೇಷ ಮತ್ತು ಅಕ್ರಮ ತುಂಬಿದವರಿಗೆ ಸನ್ಮಾರ್ಗ ಸಿದ್ಧಿಸಲಾರದು. ಇದರಲ್ಲಿ ರೋಗಶಮನವಿರುವುದು ಸತ್ಯವಿಶ್ವಾಸಿಗಳಿಗೆ. ಇದರಲ್ಲಿ ಪಾಠವಿರುವುದು ಸತ್ಯವಿಶ್ವಾಸಿಗಳಿಗೆ. ಇದರಿಂದ ಪ್ರಯೋಜನ ಪಡೆಯುವವರೂ ಸತ್ಯವಿಶ್ವಾಸಿಗಳು. ಅಥವಾ ನಿಷ್ಕಳಂಕರಾಗಿ ಇದನ್ನು ತಿಳಿಯಲು ಶ್ರಮಪಡುವವರು ಇದರ ಪ್ರಯೋಜನ ಪಡೆಯುತ್ತಾರೆ. ಇದರಿಂದ ಯಾರಾದರೂ ತನ್ನ ಆಧ್ಯಾತ್ಮಿಕ ರೋಗಗಳನ್ನು ನೀಗಿಸುವುದಿದ್ದರೆ ಅದು ಸಹ ಸತ್ಯವಿಶ್ವಾಸಿಗಳೇ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ: "ಸತ್ಯವಿಶ್ವಾಸಿಗಳಿಗೆ ಉಪಶಮನ ಮತ್ತು ಕಾರುಣ್ಯವಾಗಿರುವ ಅಧ್ಯಾಪನವನ್ನು ನಾವು ಖುರ್‌ಆನ್‌ನಿಂದ ಅವತೀರ್ಣಗೊಳಿಸುತ್ತಿದ್ದೇವೆ. ಆದರೆ ಅಧರ್ಮಿಗಳಿಗೆ ಅದು ನಷ್ಟವನ್ನೇ ಹೆಚ್ಚಿಸುತ್ತದೆ." (17 : 83) ಆದುದರಿಂದ ಈ ವಿಚಾರಗಳನ್ನು ನಾವು ಇಸ್ಲಾಂ ಮತ್ತು ಪವಿತ್ರ ಖುರ್‌ಆನಿನ ವಿರೋಧಿಗಳಿಂದ ಕೇಳುವಾಗ ನಮ್ಮ ನಂಬಿಕೆ ವೃದ್ಧಿಗೊಳ್ಳಲು ಅದು ಕಾರಣವಾಗುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಮುಂಚೆಯೇ ಅದನ್ನು ಹೇಳಿದ್ದಾನೆ. ಪೂರ್ವಿಕ ಪ್ರವಾದಿಗಳ ಶತ್ರುಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಲಾಗಿದ್ದು ಅವರು ಶೈತಾನನ ಸಹಾಯಕರಾಗಿದ್ದರು. ಇವರು ಶೈತಾನನ ಸಹಾಯಕರಾಗಿ ಏನಾದರೂ ಆಕ್ಷೇಪವನ್ನು ಹುಡುಕಿ ನಡೆಯುವವರಾಗಿದ್ದಾರೆ. ನಿಷೇಧಿಗಳ ಕುರಿತು ಹೇಳಿದ್ದು ಭಾವಿಕಾಲದಲ್ಲೂ ಇಂತಹ ಜನರು ಉಂಟಾಗುವರೆಂಬ ಕಾರಣದಿಂದಾಗಿದೆ. ಅವರು ಪ್ರವಾದಿಗಳ ವಿರೋಧಿಗಳಲ್ಲಿ ಸೇರಿದವರಾಗಿರಬಹುದು. ಎಷ್ಟರ ಮಟ್ಟಿಗೆಂದರೆ, ಬಾಹ್ಯವಾಗಿ ನೋಡಿದರೆ ವಿದ್ಯಾಸಂಪನ್ನರೂ ಮಾನ್ಯರೂ ವಿಕಸಿತ ರಾಷ್ಟ್ರಗಳ ಪೌರರೂ ಧಾರ್ಮಿಕ ನಾಯಕರೂ ಶಾಂತಿಯ ಧ್ವಜವಾಹಕರೂ ಎಲ್ಲವೂ ಆಗಿದ್ದು ಕೂಡ ಇಂತಹ ವರ್ತನೆಗಳನ್ನು ಅವರು ಖಂಡಿತವಾಗಿಯೂ ತೋರಿಸುವರು. ಹಾಗೆ ಅವರ ಬಾಹ್ಯ ಪ್ರದರ್ಶನ ಬರೇ ಮೋಸವೆಂದು ತಿಳಿದುಬರುವುದು. ಇವರು ರೋಗಿಗಳಾಗಿದ್ದಾರೆ. ಇವರ ರೋಗ ಉಲ್ಬಣಿಸುವುದು. ಇವರು ಎಂದಿಗೂ ಪೈಗಂಬರರು(ಸ) ನೀಡಿದ ಅಧ್ಯಾಪನಗಳಿಂದ ಪ್ರಯೋಜನ ಪಡೆಯಲಾರರು. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ:

"(ನಿನಗೆ ವಿರುದ್ಧವಾಗಿ) ಹಲವು ಪಂಗಡಗಳಾಗಿ ವಿಭಾಗಿಸಲ್ಪಟ್ಟವರ

ಮೇಲೆ ನಾವು ಶಿಕ್ಷೆ ಇಳಿಸಲು ತೀರ್ಮಾನಿಸಿದ್ದೇವೆ. ಅವರಾದರೋ ಖುರ್‌ಆನನ್ನು ಸುಳ್ಳಿನ ಕಂತೆಯೆಂದು ಬಗೆದವರು. ಆದ್ದರಿಂದ, ನಿನ್ನ ಪ್ರಭುವಿನಾಣೆ, ಖಂಡಿತವಾಗಿಯೂ ಅವರೆಲ್ಲರ ವಿಚಾರಣೆಯನ್ನು ನಾವು ನಡೆಸುವೆವು - ಅವರ ಕೃತ್ಯಗಳ ಕುರಿತು." (15 : 91-94)

ಈ ನಿಯಮ ಎಂದೆಂದಿಗೂ ಇರುವುದು. ಇದು ಪೈಗಂಬರರನ್ನು ಆಕ್ಷೇಪಿಸಿದ ಆ ಮಕ್ಕ ನಿವಾಸಿಗಳಿಗೆ ಮಾತ್ರವಿರುವುದಲ್ಲ. ಮುಹಮ್ಮದ್ ಪೈಗಂಬರರು(ಸ) ಸರ್ವಕಾಲಕ್ಕೋಸ್ಕರ ಬಂದಿರುವ ಪ್ರವಾದಿಯಾಗಿದ್ದಾರೆ. ಆ ಮಹಾಪುರುಷನಿಗೆ ಕಷ್ಟಕೊಡುವವರೊಡನೆ ಅಲ್ಲಾಹನ ವರ್ತನೆ ಸಹ ಸರ್ವಕಾಲಕ್ಕೆ ಇರುವುದಾಗಿದೆ. ಇಂದು ಪೈಗಂಬರರನ್ನು ಅಪಹಾಸ್ಯಕ್ಕೀಡು ಮಾಡುವವರು ಮತ್ತು ಖುರ್‌ಆನಿನ ಅಧ್ಯಾಪನೆಗಳು ಸುಳ್ಳೆಂದು ಹೇಳುವವರು ಅಲ್ಲಾಹನ ಹಿಡಿತದಿಂದ ಪಾರಾಗುವರೇ? ಅಲ್ಲಾಹನು ತನ್ನ ಪ್ರೀತಿಗೆ ಪಾತ್ರನಾದ ವ್ಯಕ್ತಿಯ ಅಭಿಮಾನವನ್ನು ಸದಾ ಸಂರಕ್ಷಿಸುವವನಾಗಿದ್ದಾನೆ. ಇಂದು ಸಹ ಈ ಜನರು ಪೈಗಂಬರರ ಮೇಲೆ ಆಕ್ರಮಣ ನಡೆಸಲು ತಮ್ಮ ಕೆಲಸಗಳನ್ನು ಹಂಚಿಕೊಂಡಿದ್ದಾರೆ. ಅದನ್ನೇ ಖುರ್‌ಆನ್ ಹೇಳಿದೆ. ವಿವಿಧ ರೀತಿಗಳಲ್ಲಿ ಪೈಗಂಬರರನ್ನೂ ಖುರ್‌ಆನನ್ನೂ ಆಕ್ಷೇಪಿಸಲಿಕ್ಕೋಸ್ಕರ ಶತ್ರುಗಳು ಯೋಜನೆಗಳನ್ನು ಹಾಕುತ್ತಾರೆ. ಪುಸ್ತಕಗಳ ಮೂಲಕ, ಪತ್ರಿಕೆಗಳ ಮೂಲಕ, ಟಿ.ವಿ. ಚ್ಯಾನೆಲ್‌ಗಳ ಮೂಲಕ ಮತ್ತು ನಾನು ಈಗ ಹೇಳಿದ ಹಾಗೆ ಸಿನೆಮಾ ಮೂಲಕ ಅವರು ಪರಿಶ್ರಮಿಸುತ್ತಾರೆ. ಖುರ್‌ಆನಿನ ಅಧ್ಯಾಪನೆ ಸುಳ್ಳೆಂದು ಇವರು ಹೇಳುತ್ತಾರೆ. (ನಊದುಬಿಲ್ಲಾಹ್.) ಕೆನಡಾದ ಪಾದ್ರಿಯ ಬಗ್ಗೆ ನಾನು ಹೇಳಿದೆ. ಹೀಗೆಲ್ಲ ಆಕ್ರಮಣ ಮಾಡಿ ನೀವು ಪಾರಾಗುವಿರೆಂದು ಭಾವಿಸುವುದು ಬೇಡ. ಇದಕ್ಕೆ ನೀವು ಉತ್ತರ ಹೇಳಬೇಕಾದೀತು ಮತ್ತು ಶಿಕ್ಷೆ ಪಡೆಯಲು ಸಿದ್ಧರಾಗಬೇಕಾದೀತು. ನೀವು ನಿಮ್ಮ ಶೈಲಿಯನ್ನು ಬದಲಾಯಿಸದಿದ್ದರೆ, ಹೇಗೆ ಶಿಕ್ಷಿಸಬೇಕೆಂದು ಅಲ್ಲಾಹನಿಗೆ ಗೊತ್ತಿದೆ. ಅವನು ಅಧಿಕಾರಿಯಾಗಿದ್ದಾನೆ. ಅವನಿಗೆ ಅವನದೇ ಮಾರ್ಗವಿದೆ. ಆದರೆ ಅವನು ತನ್ನ ಪ್ರೀತಿಗೆ ಅರ್ಹರಾದವರ ಬಗ್ಗೆ ಅಭಿಮಾನಪಡುವವನಾಗಿದ್ದಾನೆ. ತನ್ನ ಶಕ್ತಿಯನ್ನು ಅವನು ತೋರಿಸುವನು. ಆದ್ದರಿಂದ ಇವರನ್ನು ಶಿಕ್ಷಿಸದೆ ಅವನು ಬಿಡಲಿಕ್ಕಿಲ್ಲ. ಶಿಕ್ಷೆಯ ಸಮಯ ಬಂದರೆ ಮಿಥ್ಯ ದೈವಗಳು ಅವರನ್ನು ರಕ್ಷಿಸಲಿಕ್ಕೆ ಇರಲಿಕ್ಕಿಲ್ಲ. ಅಲ್ಲಾಹನು ಜನರಿಗೆ ಉಪದೇಶಿಸಲಿಕ್ಕೆ ಪುನರಾವರ್ತಿಸಿ ಹೇಳಿದ್ದಾನೆ. ಖುರ್‌ಆನ್ ಕೊನೆಯ ಧರ್ಮಶಾಸ್ತ್ರವೆಂದೂ ಮುಹಮ್ಮದ್ ಪೈಗಂಬರ್(ಸ) ಕೊನೆಯ ಧರ್ಮಶಾಸ್ತ್ರವನ್ನು ತಂದ ಪ್ರವಾದಿ ಎಂದೂ ಘೋಷಿಸಿರಿ. ಪೂರ್ವಕಾಲದ ಎಲ್ಲ ಪ್ರವಾದಿಗಳ ಪ್ರಧಾನ ಅಧ್ಯಾಪನಗಳು ಇದರಲ್ಲಿ ಉಲ್ಲೇಖಿಸಲ್ಪಟ್ಟಿವೆ. ಮಾತ್ರವಲ್ಲ, ಪೂರ್ವ ಗ್ರಂಥಗಳಲ್ಲಿ ಹೇಳಿಲ್ಲದ ಅನೇಕ ವಿಚಾರಗಳು ಸಹ ಇದರಲ್ಲಿ ಉಲ್ಲೇಖಿತವಾಗಿವೆ. ಆದರೂ ನಿಮಗೆ ಬುದ್ಧಿ ಬರುವುದಿಲ್ಲವೇ? - ಇದನ್ನು ಚಿಂತನೆಮಾಡಲಿಕ್ಕೆ ಮತ್ತು ನಿಮ್ಮ ಹೃದಯವನ್ನು ಶುದ್ಧೀಕರಿಸಲಿಕ್ಕೆ. ಇದರ ವಿಷಯ ಏನೆಂದು ನೀವು ನೋಡಿರಿ. 1.3 ಬಿಲಿಯನ್ ಮುಸ್ಲಿಮರನ್ನು ನೋಡಿ ಖುರ್‌ಆನಿನ ಅಧ್ಯಾಪನ ಸರಿಯೆಂದು ತಿಳಿದುಕೊಳ್ಳಬೇಡಿರೆಂದು ಹೇಳುವುದರ ಬದಲು ಆ ಬಗ್ಗೆ ಚಿಂತನೆ ಮಾಡಿರಿ. ಮೂಲರೂಪದಲ್ಲಿ ನೆಲೆಗೊಂಡಿರುವ ಒಂದೇ ಒಂದು ಗ್ರಂಥ ಇದು ಮಾತ್ರವಾಗಿದೆ. ಇದನ್ನು ಸಂರಕ್ಷಿಸುವೆನೆಂದು ಅಲ್ಲಾಹನು ವಾಗ್ದಾನ ಮಾಡಿದ್ದಾನೆ.

ಕಳೆದ ದಿವಸ ಹೀಗೆ ಸಹ ಒಂದು ವಾರ್ತೆ ಇತ್ತು. ಕೆಲವು ಸ್ಥಳಗಳಲ್ಲಿ ಕೆಲವು ಜನರು ಪವಿತ್ರ ಖುರ್‌ಆನ್ ಸಹ ನಿಜರೂಪದಲ್ಲಿ ಇಂದು ನೆಲೆಗೊಂಡಿರುವುದಿಲ್ಲವೆಂದು ಸಮರ್ಥಿಸಲು ಪ್ರಯತ್ನ ಆರಂಭಿಸಿದ್ದಾರಂತೆ. ನೀವು ನಿಮ್ಮ ಇಷ್ಟಾನುಸಾರ ಅನ್ವೇಷಣೆ ಮಾಡಿರಿ. ಆದರೆ ಅಲ್ಲಾಹನ ವಾಗ್ದಾನವನ್ನು ಸುಳ್ಳಾಗಿಸಲು ನಿಮಗೆ ಸಾಧ್ಯವಿಲ್ಲ. ತಪ್ಪು ಹಾದಿಯಲ್ಲಿ ಸಾಗುವುದರ ಬದಲು ಈ ಉಪದೇಶವನ್ನು ಗಮನಿಸಿರಿ. ಅಲ್ಲಾಹನು ಹೇಳುತ್ತಾನೆ: "ದಿಟವಾಗಿಯೂ ನಾವು ಖುರ್‌ಆನನ್ನು (ಮನವರಿಕೆ ಮಾಡಲಿಕ್ಕೆ ಮತ್ತು) ನೆನಪಿಟ್ಟುಕೊಳ್ಳಲಿಕ್ಕೆ ಸುಲಭಗೊಳಿಸಿದ್ದೇವೆ. ಆದರೆ ಉಪದೇಶವನ್ನು ಗ್ರಾಹ್ಯಮಾಡುವ ಯಾವನಾದರೂ ಇದ್ದಾನೆಯೇ?" (54 : 18). ಈ ವಚನವನ್ನು ಈ ಅಧ್ಯಾಯದಲ್ಲಿ ನಾಲ್ಕು ಸಲ ಪುನರಾವರ್ತಿಸಲಾಗಿದೆ. ಪ್ರತಿ ಸಲ ಇದನ್ನು ಹೇಳಿದ ಕೂಡಲೇ ಯಾವುದಾದರೂ ಜನತೆಯ ನಾಶದ ಕುರಿತು ತಿಳಿಸಲಾಗಿದೆ. ಆದ್ ಜನತೆಯ ಬಗ್ಗೆ ಪ್ರಥಮವಾಗಿ ಹೇಳಲಾಯಿತು. ಎರಡನೆಯದಾಗಿ ಸಮೂದ್ ಜನತೆಯ ಕುರಿತು. ನಂತರ ಲೂತ್ ಜನತೆಯ ಸಂಬಂಧಿಸಿ. ಆ ಬಳಿಕ ಫಿರ್‌ಔನನ ಜನತೆಯ ಕುರಿತು ಹೇಳಲಾಗಿದೆ. ಇವರೆಲ್ಲರೂ ಪ್ರವಾದಿಗಳನ್ನು ನಿರಾಕರಿಸಿದವರು; ಅವರನ್ನು ಸುಳ್ಳಾಗಿಸಿದವರು. ಹಾಗೆ ಅಲ್ಲಾಹನ ಹಿಡಿತದಲ್ಲಿ ಸಿಲುಕಿದವರು. ಅಲ್ಲಾಹನ ಕಾರುಣ್ಯ ದೃಷ್ಟಿಯ ಪ್ರಯೋಜನ ಪಡೆಯಿರಿ; ಅಹಂಕರಿಸದಿರಿ. ಹಾಗೆ ಅಹಂಕರಿಸುವುದರಿಂದ ಅವನ ಕ್ರೋಧಕ್ಕೆ ಗುರಿಯಾಗುವಿರಿ. ಆದುದರಿಂದ ನಾವು ಅವರೊಡನೆ ಸಹಾನುಭೂತಿಯಿಂದ ಹೇಳುವುದೇನೆಂದರೆ, ಅಲ್ಲಾಹನಿಗೆ ಭಯಪಡಿರಿ. ಖುರ್‌ಆನಿನ ಅಧ್ಯಾಪನೆಗಳು ಎಲ್ಲ ವಿಧ ಅಧ್ಯಾಪನೆಗಳ ಸಮುಚ್ಚಯವಾಗಿದೆ. ಆಧ್ಯಾತ್ಮಿಕತೆಯ ಉನ್ನತ ಸ್ಥಿತಿಯ ಕುರಿತು ಅದು ನಮಗೆ ಹೇಳಿಕೊಟ್ಟಿದೆ. ಸ್ವಭಾವಗಳ ಶ್ರೇಷ್ಠತೆಯ ಬಗ್ಗೆ ಅದು ನಮಗೆ ವಿವರಿಸಿಕೊಟ್ಟಿದೆ. ಸಾಮಾನ್ಯನಿಗೂ ಹೆಚ್ಚು ಚಿಂತನೆ ಮಾಡುವವನಿಗೂ ಇದರಲ್ಲಿ ಜ್ಞಾನವಿದೆ. ಆದ್ದರಿಂದ ಅವರಿಗೆ ಮನವರಿಕೆಯಾಗುವುದಿಲ್ಲವಾದರೆ ಆಕ್ಷೇಪವೆತ್ತುವ ಬದಲು ಸ್ವಂತ ಬುದ್ಧಿಯನ್ನು ಉಪಯೋಗಿಸಿ ನೋಡಲಿ. ಖುರ್‌ಆನಿನ ಅಧ್ಯಾಪನೆ ಮನುಷ್ಯ ಪ್ರಕೃತಿಗೆ ಅನುಯೋಜ್ಯವಾದ ರೀತಿಯಲ್ಲಿದೆ. ಆದರೆ ಅದನ್ನು ಮನವರಿಕೆಮಾಡಲು ನಿಷ್ಕಳಂಕ ಹೃದಯವಿರಬೇಕಾದುದು ಅತ್ಯಗತ್ಯ. ಓರ್ವ ಶುದ್ಧೀಕರಿಸುವ ಧರ್ಮ ಸುಧಾರಕನ ಅಗತ್ಯವಿದೆ. ಇಂದು ಅಹ್ಮದಿಯಾ ಜಮಾಅತ್ ಮಾತ್ರ ಶುದ್ಧೀಕರಿಸುವ ಧರ್ಮ ಸುಧಾರಕನ ಜ್ಞಾನವನ್ನು ಗಳಿಸಿ ಇತರರಿಗೆ ಅದನ್ನು ತಲಪಿಸುತ್ತಿದೆ. ಆದುದರಿಂದ ನಮ್ಮಿಂದ ಸರಿಯಾದ ಜ್ಞಾನವನ್ನು ಪಡೆಯಿರಿ. ಅಲ್ಲಾಹನು ಇವರಿಗೆ ಬುದ್ಧಿಕೊಡಲಿ. ಅವನು ಮುನ್ನೆಚ್ಚರಿಕೆಯಿತ್ತ ಶಿಕ್ಷೆಗಳಿಂದೆಲ್ಲ ಇವರನ್ನು ರಕ್ಷಿಸಲಿ.

ಇಂದು ಹೆಚ್ಚು ಹೆಚ್ಚಾಗಿ ಪ್ರಾರ್ಥಿಸಬೇಕಾದ ಅಗತ್ಯವಿದೆ. ಮುಸ್ಲಿಂ ಉಮ್ಮತಿಗೋಸ್ಕರ ಪ್ರಾರ್ಥಿಸಿರಿ. ಇವರು ತಮ್ಮ ದ್ವೇಷವನ್ನು ಬಿಟ್ಟು ಒಂದು ದೊಡ್ಡ ಉದ್ದೇಶ ಪ್ರಾಪ್ತಿಗೋಸ್ಕರ ಒಟ್ಟುಗೂಡಿ ಅಲ್ಲಾಹನ ಇಷ್ಟದಾಸನನ್ನು ಗುರುತಿಸಿದರೆ ಅನೇಕಾನೇಕ ದುರಂತಗಳಿಂದ ಸುರಕ್ಷಿತರಾಗುವರು. ಈ ದುಷ್ಕರ್ಮಿಗಳನ್ನು ಅವರ ದುಷ್ಕೃತ್ಯಗಳಿಂದ ಪಾರುಮಾಡುವುದು ಸಹ ಇದೇ ಆಗಿರಬಹುದು. ಅಲ್ಲಾಹನು ಅವರಿಗೆ ಆ ಭಾಗ್ಯವನ್ನು ದಯಪಾಲಿಸಲಿ.

(ಲಂಡನಿನ ಬೈತುಲ್ ಫುತೂಹ್‌ನಲ್ಲಿ 29-02-2008ರಂದು ಮಾಡಿದ ಖುತುಬ. ಭಾಷಾಂತರ : ಮುಹಮ್ಮದ್ ಯೂಸುಫ್)

★

# ಖಿಲಾಫತ್ ಒಂದು ಮಹಾನುಗ್ರಹ

★ ಮೌಲಾನಾ ಬಿ. ಅಬ್ದುಲ್ಲಾಹ್ ಎಚ್.ಎ.

وَعَدَ اللّٰهُ الَّذِيْنَ اٰمَنُوْا مِنْكُمْ وَعَمِلُوا الصّٰلِحٰتِ لَيَسْتَخْلِفَنَّهُمْ فِى الْاَرْضِ كَمَا اسْتَخْلَفَ الَّذِيْنَ مِنْ قَبْلِهِمْ وَلَيُمَكِّنَنَّ لَهُمْ دِيْنَهُمُ الَّذِى ارْتَضٰى لَهُمْ وَلَيُبَدِّلَنَّهُمْ مِّنْ بَعْدِ خَوْفِهِمْ اَمْنًا يَعْبُدُوْنَنِىْ لَا يُشْرِكُوْنَ بِىْ شَيْـًٔا وَمَنْ كَفَرَ بَعْدَ ذٰلِكَ فَاُولٰٓئِكَ هُمُ الْفٰسِقُوْنَ ﴿٥٥﴾

"ನಿಮ್ಮ ಪೈಕಿ ಸತ್ಯ ವಿಶ್ವಾಸಿಗಳಾಗಿದ್ದು ಸತ್ಕರ್ಮಗಳನ್ನು ಮಾಡುವವರಿಗೆ ಅಲ್ಲಾಹನು, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಪಟ್ಟಿರುವ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯ ಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು." - ಪವಿತ್ರ ಖುರ್‌ಆನ್ (24 : 56)

ಮೇಲಿನ ವಚನದಲ್ಲಿ, ಸತ್ಯ ವಿಶ್ವಾಸಿಗಳೂ ಸತ್ಕರ್ಮಿಗಳೂ ಆಗಿರುವ ಯಥಾರ್ಥ ಮುಸ್ಲಿಮರಿಗೆ ಅಲ್ಲಾಹನು ಖಿಲಾಫತ್ ಎಂಬ ಅನುಗ್ರಹೀತ ಸ್ಥಾನವನ್ನು ಏರ್ಪಡಿಸಿಕೊಡುವನೆಂದೂ ಆ ಮೂಲಕ ಅವರ ಭೀತಿಯನ್ನು ನಿವಾರಿಸಿ ಅವರಿಗೆ ಶಾಂತಿ-ಸಮಾಧಾನವನ್ನು ದಯಪಾಲಿಸುವನೆಂದೂ ಹೇಳಲಾಗಿದೆ. ಇದರಿಂದ, ಮುಸ್ಲಿಂ ಪಂಗಡಗಳ ಪೈಕಿ ಯಾವ ಪಂಗಡದಲ್ಲಿ ಖಿಲಾಫತ್ ವ್ಯವಸ್ಥೆ ಇದೆಯೋ ಆ ಪಂಗಡದವರು ಸತ್ಯ ವಿಶ್ವಾಸ ಹೊಂದಿದ ಸತ್ಕರ್ಮಿಗಳಾದ ಯಥಾರ್ಥ ಮುಸ್ಲಿಮರೆಂದು ತೀರ್ಮಾನಿಸಬೇಕಾಗಿದೆ. ಏಕೆಂದರೆ, ಖಿಲಾಫತ್ ಅಂಥವರಿಗೆ ನೀಡಲಾಗುವುದೆಂದು ಅಲ್ಲಾಹನು ವಾಗ್ದಾನ ಮಾಡಿದ್ದಾನೆ.

ಇಸ್ಲಾಮಿನಲ್ಲಿ ಖಿಲಾಫತ್ ಎಂದು ಹೇಳುವುದು ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಪ್ರಾತಿನಿಧ್ಯ ವಹಿಸುವ ಸ್ಥಾನಕ್ಕಷ್ಟೇ. ಈ ಸ್ಥಾನ ಪೈಗಂಬರರ ನಂತರ ಅವರ ಶಿಷ್ಯರಲ್ಲಿ ಉಂಟಾಗುವುದೆಂದು ಕಲಿಸುವ ಒಂದೇ ಒಂದು ದೇವವಾಕ್ಯ ಮೇಲೆ ಉದ್ಧರಿಸಿದುದೇ ಆಗಿದೆ. ಅದರ ವಾಗ್ದಾನಕ್ಕನುಸಾರವಾಗಿ ಪೈಗಂಬರರ ನಿಧನದ ಬಳಿಕ ಅವರ ಶಿಷ್ಯರಲ್ಲಿ ಖಿಲಾಫತ್ ಉಂಟಾಯಿತು. ಅವರ ಯಥಾರ್ಥವಾದ ಸ್ಥಾನ ಅವರು ನಬಿ ಮತ್ತು ರಸೂಲ್ ಎಂಬುದಾಗಿದೆ. ಆದ್ದರಿಂದ, ಆ ಸತ್ಯಾತ್ಮರ ಯಥಾರ್ಥ ಪ್ರಾತಿನಿಧ್ಯವು ಆಧ್ಯಾತ್ಮಿಕ ಮತ್ತು ಧಾರ್ಮಿಕವಾದ ಪವಿತ್ರ ದೌತ್ಯಕ್ಕೆ ಸಂಬಂಧಿಸಿದುದಾಗಿದೆ. ಪೈಗಂಬರರ(ಸ) ಆಗಮನೋದ್ದೇಶ ಮನುಷ್ಯರನ್ನು ಸನ್ಮಾರ್ಗಿಗಳನ್ನಾಗಿ ಮಾಡಿ ಅವರನ್ನು ಅಲ್ಲಾಹನೆಡೆಗೆ ಕೊಂಡೊಯ್ಯುವುದಷ್ಟೇ. ಹಾಗಿರುವಾಗ ಪೈಗಂಬರರ ಯಥಾರ್ಥ ಖಲೀಫರುಗಳು ಆಧ್ಯಾತ್ಮಿಕತೆಯನ್ನು ಪೋಷಿಸುವ ಪ್ರತಿನಿಧಿಗಳಾಗಬೇಕಾಗಿದೆ. ಆದ್ದರಿಂದಲೇ,

عليكم بسنتي وسنة الخلفاء الراشدين المهدين

"ನೀವು ನನ್ನ ನಡವಳಿಕೆ ಕ್ರಮವನ್ನು ಮತ್ತು ಸನ್ಮಾರ್ಗಿಗಳೂ ಮಾರ್ಗದರ್ಶನ ಲಭಿಸಿದವರೂ ಆದ ನನ್ನ ಖಲೀಫರ ನಡವಳಿಕೆ ಕ್ರಮವನ್ನು ಸ್ವೀಕರಿಸಿರಿ" ಎಂದು ಪೈಗಂಬರರು(ಸ) ನುಡಿದಿದ್ದಾರೆ. ಪೈಗಂಬರರ(ಸ) ಆಗಮನೋದ್ದೇಶ ರಾಜ್ಯಾಡಳಿತೆಯನ್ನು ಸ್ಥಾಪಿಸುವುದಲ್ಲವಾದರೂ ಅಲ್ಲಾಹನು ಪೈಗಂಬರರಿಗೆ(ಸ) ಪಾರಿತೋಷಕವಾಗಿ ಆಡಳಿತಾಧಿಕಾರವನ್ನೂ ನೀಡಿರುವುದರಿಂದ, ಆ ಬಳಿಕ ಕೇವಲ ರಾಷ್ಟ್ರೀಯ ಅಧಿಕಾರ ಹೊಂದಿದ ಮುಸ್ಲಿಂ ರಾಜರುಗಳು ಸಹ ಪೈಗಂಬರರ(ಸ) ಪ್ರತಿನಿಧಿಗಳೆಂಬಂತೆ ಖಲೀಫರೆಂದು ಕರೆಯಲ್ಪಟ್ಟರು. ಆದರೆ, ಪೈಗಂಬರರ ಸಾಕ್ಷಾತ್ ಪ್ರಾತಿನಿಧ್ಯ ರಾಜಕೀಯವಲ್ಲದಿದ್ದರೂ ರಾಜ್ಯಾಡಳಿತೆ ಸಹ ಅನಂತರ ಪೈಗಂಬರರಿಗೆ(ಸ) ಲಭಿಸಿದುದರಿಂದ, ಆದ್ಯದ ಖಲೀಫರುಗಳು ಆಧ್ಯಾತ್ಮಿಕವೂ ಭೌತಿಕವೂ ಆದ ಎರಡು ತರ ಖಿಲಾಫತ್ ಹೊಂದಿದವರಾಗಿದ್ದರು. ಅವರ ಬಳಿಕ ಬರೇ ಆಡಳಿತಾಧಿಕಾರಿಗಳಾದ ರಾಜರುಗಳು ಭೌತಿಕ ನೆಲೆಯಲ್ಲಿ ಮಾತ್ರ ಖಲೀಫರೂ ಇಸ್ಲಾಮಿನಲ್ಲಿ ಆವಿರ್ಭವಿಸುತ್ತಿದ್ದ ಮುಜದ್ದಿದ್‌ಗಳು ಆಧ್ಯಾತ್ಮಿಕ ಪ್ರಾತಿನಿಧ್ಯದಿಂದೊಡಗೂಡಿದ ಸಾಕ್ಷಾತ್ ಖಲೀಫರೂ ಆಗಿದ್ದರು. ಸಂಕ್ಷಿಪ್ತವಾಗಿ, ಪೈಗಂಬರರ(ಸ) ಪ್ರಾತಿನಿಧ್ಯ ವಹಿಸಿಕೊಂಡು ಪೈಗಂಬರರ(ಸ) ದೌತ್ಯೋದ್ದೇಶವನ್ನು ಈಡೇರಿಸುವ ಖಲೀಫರುಗಳು ಇಸ್ಲಾಮಿನಲ್ಲಿ ಆಗಮಿಸುತ್ತಿಲಿರುವರೆಂದು ಮೇಲೆ ಉದ್ಧರಿಸಿದ ಖುರ್‌ಆನ್ ವಚನದಲ್ಲಿ ಹೇಳಲಾಗಿದೆ. ಆದ್ದರಿಂದ ಆ ಯಥಾರ್ಥ ಖಲೀಫರುಗಳಿಗೆ ರಾಜ್ಯಾಡಳಿತೆ ಇರಲೇಬೇಕೆಂದಿಲ್ಲ. ಅಂತಹ ಖಲೀಫರುಗಳು ಸತ್ಯ ವಿಶ್ವಾಸಿಗಳೂ ಸತ್ಕರ್ಮಿಗಳೂ ಆಗಿರುವ ಯಥಾರ್ಥ ಮುಸ್ಲಿಮರಲ್ಲಿ ಉಂಟಾಗುತ್ತಲಿರುವರೆಂದು ಈ ಖುರ್‌ಆನ್ ವಚನದಿಂದ ವ್ಯಕ್ತವಾಗುತ್ತದೆ.

ಇಂದು ಖಿಲಾಫತ್ ಅಹ್ಮದಿಯಾ ಜಮಾಅತಿನಲ್ಲಿ ಮಾತ್ರ ಇದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಇತರ ಮುಸ್ಲಿಂ ಪಂಗಡಗಳಲ್ಲಿ ಯಾವುದರಲ್ಲೂ ಖಿಲಾಫತ್ ಎಂಬ ಈ ಅನುಗ್ರಹ ಇಲ್ಲವೆಂದು ಅವರೇ ಒಪ್ಪುತ್ತಾರೆ. ಅಲ್ಪಕಾಲ ಮುಂಚೆವರೆಗೆ ಹೆಸರಿಗೆ ಮಾತ್ರ ತುರ್ಕಿ ಸುಲ್ತಾನನನ್ನು ಅವರು ಖಲೀಫ ಎಂದು ಕರೆಯುತ್ತಿದ್ದರು. ಆದರೆ, ಆ ಖಿಲಾಫತ್, ಸುಲ್ತಾನನ ಆಡಳಿತೆಯ ಅಧೀನದಲ್ಲಿರುವ ತನ್ನ ಪ್ರಜೆಗಳ ಮೇಲಿರುವ ರಾಜಕೀಯ ಅಧಿಕಾರ ಮಾತ್ರವಾಗಿತ್ತು. ಹೊರತು, ಮುಸ್ಲಿಮರ ಪೈಕಿ ಯಾವುದೇ ಪಂಗಡ ಆತನ ಆಜ್ಞಾನುಸಾರ ನಡೆಯಬೇಕಾದುದು ತಮ್ಮ ಕರ್ತವ್ಯವೆಂದು ಭಾವಿಸಿರಲಿಲ್ಲ. ಇಂದಾದರೆ, ಆ ನಾಮ ಮಾತ್ರ ಖಿಲಾಫತ್ ಕೂಡ ಭೂಮಿಯಿಂದ ಅಳಿಸಲ್ಪಟ್ಟಿದೆ. ಆದನ್ನು ಆ ಸುಲ್ತಾನನ ಸ್ವಂತ ಜನರಾದ ತುರ್ಕಿಗಳೇ ಕಿತ್ತೆಸೆದರು. ಹಾಗೆ ಅಹ್ಮದಿಯರಲ್ಲದ ಬೇರೆ ಮುಸ್ಲಿಂ ಪಂಗಡಗಳಲ್ಲಿ ಯಾವುದರಲ್ಲೂ ಖಿಲಾಫತ್ ಎಂಬ ದೇವಾನುಗ್ರಹ ನೆಲೆಯಲ್ಲಿಲ್ಲ. ಅಹ್ಮದಿಯರಿಗೆ, ಅವರ ಅನುಸರಣೆಗೆ ಅರ್ಹರಾದ ಇಮಾಂ ಹಾಗೂ ಧಾರ್ಮಿಕವೂ ಆಧ್ಯಾತ್ಮಿಕವೂ ಆದ ವಿಚಾರಗಳಲ್ಲಿ ಅವರಿಗೆ ಮಾರ್ಗದರ್ಶನ ನೀಡುವ ಗುರುವೂ ಆದ ಖಲೀಫ ಇದ್ದಾರೆ. ಸತ್ಯ ವಿಶ್ವಾಸಿಗಳೂ

ಸತ್ಕರ್ಮಿಗಳೂ ಆಗಿರುವವರಿಗೆ ನೀಡುವನೆಂದು ಅಲ್ಲಾಹನು ವಾಗ್ದಾನ ಮಾಡಿದ ಖಿಲಾಫತ್ ಹೀಗೆ ಅವರಲ್ಲಿ ನೆಲೆಗೊಂಡಿರುವುದೆಂಬುದು, ಅವರೇ ಯಥಾರ್ಥ ಮುಸ್ಲಿಂ ಪಂಗಡ ಎಂಬುದಕ್ಕೆ ತಕ್ಕುದಾದ ಒಂದು ಪುರಾವೆಯಾಗಿದೆ.

## ಖಿಲಾಫತಿನ ರೂಪಬೇಧಗಳು

ತನ್ನ ಬಳಿಕ ಮೊದಲು ನುಬುವ್ವತಿನ ರೀತಿಯಲ್ಲಿರುವ ಖಿಲಾಫತ್ ಸ್ಥಾಪಿತವಾಗುವಂತೆ, ನಂತರದ ಕಾಲದಲ್ಲಿ ಸಹ ಅದೇ ರೀತಿಯಲ್ಲಿರುವ ಖಿಲಾಫತ್ ಉಂಟಾಗುವುದೆಂದು ಪೈಗಂಬರ್[ಸ] ಭವಿಷ್ಯ ನುಡಿದಿದ್ದಾರೆ. ಅವರು ಹೀಗೆ ಹೇಳಿದರು :

تكون النبوة فيكم ماشاء الله ان
تكون لم يرفعها الله تعلى ثم تكون
خلافة على منهاج النبوة ما شاء الله
أن تكون ثم يرفعها الله تعالى ثم
تكون ملكا عاضا فيكون ما شاء الله
ان يكون ثم يرفعها الله ثم تكون
ملكا جبرية فيكون ما شاء الله ان
يكون ثم يرفعها الله تعالى ثم تكون
خلافة على منهاج نبوة

"ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ನಿಮ್ಮಲ್ಲಿ ನುಬುವ್ವತ್ ನೆಲೆಗೊಳ್ಳುವುದು; ಬಳಿಕ ಅವನು ಅದನ್ನು ಮೇಲೆತ್ತುವನು. ಅನಂತರ, ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ನುಬುವ್ವತಿನ ರೀತಿಯಲ್ಲಿರುವ ಖಿಲಾಫತ್ ನೆಲೆಗೊಳ್ಳುವುದು; ಬಳಿಕ ಅವನು ಅದನ್ನು ಮೇಲೆತ್ತುವನು. ಅನಂತರ, ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ಸ್ವೇಚ್ಛಾಧಿಪತ್ಯ ನೆಲೆಗೊಳ್ಳುವುದು; ಬಳಿಕ ಅವನು ಅದನ್ನು ತೆಗೆದುಬಿಡುವನು. ಅನಂತರ ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ಬಲಾತ್ಕಾರದಿಂದ ಕೂಡಿದ ಆಡಳಿತೆ ನೆಲೆಗೊಳ್ಳುವುದು; ಬಳಿಕ ಅವನು ಅದನ್ನು ಸಹ ತೆಗೆದುಬಿಡುವನು. ಅನಂತರ ನುಬುವ್ವತಿನ ರೀತಿಯಲ್ಲಿರುವ ಖಿಲಾಫತ್ ಉಂಟಾಗುವುದು."

**(ಮಿಶ್ಕಾತ್ ಕಿತಾಬುರ್ರಿಖಾಖ್)**

ಪೈಗಂಬರರ ಈ ನುಡಿಯಿಂದ, ಅಂತ್ಯಕಾಲದಲ್ಲಿ ನುಬುವ್ವತಿನ ಮಾರ್ಗದಲ್ಲಿರುವ ಖಿಲಾಫತ್ ಸ್ಥಾಪಿತವಾಗುವುದೆಂದು ಸ್ಪಷ್ಟವಾಗುತ್ತದೆ. ಈ ರೀತಿಯ ಖಿಲಾಫತ್ ಇಂದು ಅಹ್ಮದಿಯಾ ಜಮಾಅತಿನಲ್ಲಿ ಮಾತ್ರವೇ ಇದೆ. ವಾಗ್ದತ್ತ ಮಸೀಹ್ ತನ್ನ ಖಲೀಫಹಾಗೂ ಪ್ರವಾದಿ ಆಗಿರುವರೆಂದು ಮುಹಮ್ಮದ್ ಪೈಗಂಬರ್[ಸ] ನುಡಿದಿದ್ದಾರೆ. (ತಬ್ರಾನಿ.) ಆದ್ದರಿಂದ ಮೇಲೆ ಉದ್ಧರಿಸಲಾದ ಹದೀಸಿನಲ್ಲಿ ಕೊನೆಗೆ ನುಬುವ್ವತಿನ ಮಾರ್ಗದಲ್ಲಿರುವ ಖಿಲಾಫತ್ ಉಂಟಾಗುವುದೆಂದು ಹೇಳಿರುವುದು ಆ ವಾಗ್ದತ್ತ ಮಸೀಹರ ಉತ್ತರಾಧಿಕಾರವಾಗಿ ಉಂಟಾಗುವ ಖಿಲಾಫತನ್ನು ಉದ್ದೇಶಿಸಿ ಆಗಿತ್ತೆಂದು ಚೆನ್ನಾಗಿ ಮನವರಿಕೆ ಮಾಡಬಹುದು.

ಮುಹಮ್ಮದ್ ಪೈಗಂಬರ್[ಸ] ಪ್ರವಾದಿ ಮೂಸಾರಿಗೆ[ಅ] ಸದೃಶರಾಗಿ ಬಂದ ಪ್ರವಾದಿ ಎಂದು ಪವಿತ್ರ ಖುರ್‌ಆನ್ ಮತ್ತು ತೌರಾತ್‌ನಿಂದ ವ್ಯಕ್ತವಾಗುತ್ತದೆ. ಆದ್ದರಿಂದ ಮೊದಲು ಉದ್ಧರಿಸಿದ ಖುರ್‌ಆನ್ ವಾಕ್ಯದಲ್ಲಿ **"ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ"** ಎಂದು ಹೇಳಿರುವುದು ಮೂಸಾನಬಿಯ ಅನುಯಾಯಿಗಳಲ್ಲಿ ಉಂಟಾದ ಖಲೀಫರಿಗೆ ಸಂಬಂಧಿಸಿದ್ದಾಗಿತ್ತೆಂಬುದು ಸ್ಪಷ್ಟ. ಅವರಲ್ಲಿ ಆಡಳಿತಾಧಿಕಾರ ಇದ್ದವರೂ ಇಲ್ಲದವರೂ ಆದ ಖಲೀಫರು ಇದ್ದರು. ಮೂಸಾನಬಿಯ ನಂತರ ಹದಿನಾಲ್ಕನೇ ಶತಮಾನದಲ್ಲಿ ಅವರ ಖಲೀಫರಾಗಿ ಆಗಮಿಸಿದ ಈಸಾನಬಿ[ಅ] ಆಡಳಿತಾಧಿಕಾರವಿಲ್ಲದವರಾಗಿದ್ದರು. ಇದರಿಂದ, ಮೂಸಾನಬಿಯ ಸದೃಶರಾಗಿ ಬಂದ ಮುಹಮ್ಮದ್ ಪೈಗಂಬರರ[ಸ] ನಂತರ ಹದಿನಾಲ್ಕನೇ ಶತಮಾನದಲ್ಲಿ ಈಸಾನಬಿಯೊಡನೆ ಸಾದೃಶ್ಯವಿರುವ ಓರ್ವ ಖಲೀಫ ಉಂಟಾಗುವರೆಂದೂ ಅವರ ನಂತರ ಉಂಟಾಗುವ ಖಿಲಾಫತ್ ನುಬುವ್ವತಿನ ಮಾರ್ಗದಲ್ಲಿರುವ ಖಿಲಾಫತ್ ಆಗಿರುವುದೆಂದೂ ಮನವರಿಕೆಯಾಗುತ್ತದೆ. ಕೊನೆಯಲ್ಲಿ ನುಬುವ್ವತಿನ ಹೆಜ್ಜೆಗುರುತಿನಲ್ಲಿ ಚಲಿಸುವ ಖಿಲಾಫತ್ ಉಂಟಾಗುವುದೆಂದೂ ಅಂತ್ಯಕಾಲದಲ್ಲಿ ಮಸೀಹ್ ಅವತರಿಸುವರೆಂದೂ ತಾನು ಆದ್ಯದಲ್ಲಿ ಮತ್ತು ಮಸೀಹ್ ಅಂತ್ಯದಲ್ಲಿ ಇರುವ ಒಂದು ಸಮುದಾಯ ನಾಶವಾಗುವುದು ಹೇಗೆಂದೂ ಪೈಗಂಬರ್[ಸ] ನುಡಿದದ್ದು ಇದಕ್ಕೆ ಸಾಕ್ಷ್ಯವಾಗಿದೆ. ತಾನು ಮೂಸಾ ನಬಿಗೆ[ಅ] ಸದೃಶ್ಯನಾಗಿ ಬಂದ ಹಾಗೆ ತನ್ನ ನಂತರ ಹದಿನಾಲ್ಕನೇ ಶತಮಾನದಲ್ಲಿ ತನ್ನ ಖಲೀಫ ಆಗಿ ಬರುವ ಮಹಾ ಪುರುಷ ಸಹ ಹಲವು ವಿಚಾರಗಳಲ್ಲಿ ಈಸಾನಬಿಗೆ[ಅ] ಸದೃಶ್ಯರಾಗಿರುವುದರಿಂದಲೇ ಅವರನ್ನು "ಮಸೀಹ್" ಮತ್ತು "ಇಬ್ನು ಮರ್ಯಮ್" ಎಂದು ಪೈಗಂಬರ್[ಸ] ನಾಮಕರಣ ಮಾಡಿದ್ದಾರೆ.

ವಾಗ್ದಾನ ಮಾಡಲ್ಪಟ್ಟ ಆ ಮಹಾಪುರುಷರ ಕುರಿತು ಅಂತ್ಯಕಾಲದಲ್ಲಿ ಮಸೀಹ್ ಬರುವರೆಂದು ಪೈಗಂಬರ್[ಸ] ಭವಿಷ್ಯ ನುಡಿದಿದ್ದಾರೆ. ಆ ಮಸೀಹರ ಆವಿರ್ಭಾವದ ನಂತರ ಉಂಟಾಗುವ ಖಿಲಾಫತಿನ ಬಗ್ಗೆಯೇ ಮೇಲೆ ಉದ್ಧರಿಸಿದ ಹದೀಸಿನ ಕೊನೆಯಲ್ಲಿ "ನುಬುವ್ವತಿನ ರೀತಿಯಲ್ಲಿರುವ ಖಿಲಾಫತ್ ಉಂಟಾಗುವುದು" ಎಂದು ಪೈಗಂಬರ್[ಸ] ನುಡಿದಿದ್ದಾರೆ. ಒಟ್ಟಾರೆ, ಸತ್ಯ ವಿಶ್ವಾಸಿಗಳೂ ಸತ್ಕರ್ಮಿಗಳೂ ಆದ ಯಥಾರ್ಥ ಮುಸ್ಲಿಮರಲ್ಲಿ ಖಿಲಾಫತ್ ಉಂಟಾಗುವುದೆಂದು ಖುರ್‌ಆನ್ ಹೇಳಿರುವುದು ಯಥಾರ್ಥ ಇಸ್ಲಾಮಿಕ ಪಂಗಡ ಯಾವುದು ಎಂದು ಮನಗಾಣಿಸಿ ಕೊಡುವ ಒಂದು ಪ್ರತ್ಯಕ್ಷ ಸಾಕ್ಷ್ಯವಾಗಿದೆ. ಯಥಾರ್ಥ ಇಸ್ಲಾಮಿಕ ಪಂಗಡ ತಾನು ಮತ್ತು ತನ್ನ ಸಹಚರರು ಇದ್ದ ರೀತಿಯಲ್ಲಿ ಇರುವವರೆಂದೂ ಅವರು ಒಂದು ಜಮಾಅತಾಗಿರುವರೆಂದೂ ಪೈಗಂಬರ್[ಸ] ಹೇಳಿದ್ದಾರೆ. ಪೈಗಂಬರರ[ಸ] ನಂತರ ಶಿಷ್ಯ ಗಣವು ಖಲೀಫರನ್ನು ಆಯ್ಕೆ ಮಾಡಿ ಅವರ ಖಿಲಾಫತ್ ಅಧಿಕಾರದ ಅಧೀನದಲ್ಲಿ ಜಮಾಅತಾಗಿ ಇದ್ದ ಪ್ರಕಾರವೇ ಖಲೀಫರನ್ನು ಆರಿಸಿ ಖಿಲಾಫತ್ ಅಧಿಕಾರದ ಅಧೀನದಲ್ಲಿ ಜೀವಿಸುವವರು ಇಂದು ಲೋಕದಲ್ಲಿ ಅಹ್ಮದಿಯಾ ಜಮಾಅತ್ ಮಾತ್ರವೆಂಬುದು ಒಂದು ಪ್ರತ್ಯಕ್ಷ ಸಂಗತಿಯಾಗಿದೆ.

## ಭೀತಿಯ ಬದಲಿಗೆ ಶಾಂತಿ

ಮೇಲೆ ಉದ್ಧರಿಸಿದ ಖುರ್‌ಆನ್ ವಾಕ್ಯದಲ್ಲಿ ಖಿಲಾಫತಿನ ಒಂದು ಉದ್ದೇಶವಾಗಿ ಹೇಳಿರುವುದು, ಆ ಮೂಲಕ ಅಲ್ಲಾಹನು ಸತ್ಯ ವಿಶ್ವಾಸಿಗಳ ಧರ್ಮವನ್ನು ಅವರಿಗೆ ಬಲಪಡಿಸಿಕೊಡುವನು ಮತ್ತು ಅವರ ಭೀತಿಯನ್ನು ನಿವಾರಿಸಿ ಅವರಿಗೆ ಶಾಂತಿ ಸಮಾಧಾನ ದಯಪಾಲಿಸುವನು ಎಂದಲ್ಲವೇ. ಇಸ್ಲಾಂ ಧರ್ಮವು ಶತ್ರುಗಳ ಆಕ್ಷೇಪಗಳಿಗೆ ಗುರಿಯಾಗಿ ಮುಸ್ಲಿಮರು ಅದರ ಸತ್ಯವನ್ನು ಇತರರಿಗೆ ಬೋಧಿಸುವ ವಿಚಾರದಲ್ಲಿ ತೀರಾ ನಿರ್ಲಕ್ಷ್ಯರಾಗಿದ್ದ ಕಾಲದಲ್ಲಿ ಅಲ್ಲಾಹನು ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ನಿಯೋಜಿಸಿದನು. ಅವರು ಇಸ್ಲಾಮಿನ ವೈರಿಗಳನ್ನು ಎದುರಿಸಲಿಕ್ಕೆ ಮತ್ತು ಧರ್ಮಬೋಧನೆ ಮಾಡಲಿಕ್ಕೆ ಒಂದು ಮಾರ್ಗವನ್ನು ತೋರಿಸಿಕೊಟ್ಟರು. ತತ್ಫಲವಾಗಿ, ಅವರ ಅನುಚರ ಸಂಘ - ಒಂದು ಚಿಕ್ಕ ಸಂಘವಾದ ಅಹ್ಮದಿಯಾ ಜಮಾಅತ್ - ಲೋಕದ ನಾನಾ ಜಾತಿ ಮತಸ್ಥರ ಮುಂದೆ ಇಸ್ಲಾಮಿನ ಸತ್ಯವನ್ನು ಪ್ರಸ್ತಾಪಿಸಲಿಕ್ಕೂ ಅವರಿಗೆ ಸತ್ಯ ಬೋಧನೆ ಮಾಡಲಿಕ್ಕೂ ಸಾಮರ್ಥ್ಯ ಹಾಗೂ ಧೈರ್ಯ ಹೊಂದಿತು. ಅದರ ಫಲವಾಗಿ ಇಸ್ಲಾಮಿನ ವಿರುದ್ಧವಿರುವ ಆಕ್ಷೇಪಗಳನ್ನು ಕೇಳಿ ಮುಸ್ಲಿಮರು ಭಯಪಡುತ್ತಿದ್ದ ಕಾಲ ಹೋಗಿಬಿಟ್ಟಿತು. ಇಂದು ಇಸ್ಲಾಮಿಕ ತತ್ವಗಳನ್ನು ವಿರೋಧಿಸುವ ಕೃತ್ಯದಿಂದ ಅನ್ಯಧರ್ಮೀಯರು ಹಿಮ್ಮೆಟ್ಟುವ ಸ್ಥಿತಿ ಉಂಟಾಗಿದೆ. ಅಹ್ಮದಿಯಾ ಜಮಾಅತ್ ತನ್ನ ಇಮಾಮರ ನೇತೃತ್ವದಲ್ಲಿ ಲೋಕದ ನಾನಾ ಭಾಗಗಳಲ್ಲಿ ಇಸ್ಲಾಮಿಕ ಪತಾಕೆಯನ್ನು

ಎತ್ತಿಕೊಂಡು ಸತ್ಯಬೋಧನೆ ನಡೆಸುತ್ತಿದೆ. ಕೋಟಿಗಟ್ಟಲೆ ಮುಸ್ಲಿಮರಿಗೆ ಸಾಧ್ಯವಾಗದ ಈ ಕಾರ್ಯ ಇವರಿಗೆ ಸಾಧ್ಯವಾಗಿರುವುದು, ಯಾವ ಸ್ಥಾನ ಮೂಲಕ ಸತ್ಯ ವಿಶ್ವಾಸಿಗಳ ಧರ್ಮವನ್ನು ಬಲಪಡಿಸಿ ಅವರ ಭೀತಿಯನ್ನು ಹೋಗಲಾಡಿಸಿ ಅವರಿಗೆ ನೆಮ್ಮದಿಯನ್ನು ದಯಪಾಲಿಸಲಾಗುವುದೆಂದು ಮೇಲೆ ಹೇಳಿದ ಖುರ್‌ಆನ್ ವಾಕ್ಯದಲ್ಲಿ ಪ್ರಸ್ತಾಪಿಸ ಲಾಗಿಯೋ ಆ ಖಿಲಾಫತ್ ಈ ಜಮಾಅತಿನಲ್ಲಿ ಇರುವುದರಿಂದಲೇ ಆಗಿದೆ.

## ಶಿರ್ಕ್‌ನಿಂದ ಶುದ್ಧ

ಖಿಲಾಫತಿನ ಅನುಗ್ರಹ ಲಭಿಸಿದವರ ಕುರಿತು ಅಲ್ಲಾಹನು ಹೇಳಿರುವುದು "**ಅವರು ನನ್ನನ್ನು ಮಾತ್ರ ಆರಾಧಿಸುವವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು**" ಎಂದಾಗಿದೆ. ಈ ಲಕ್ಷಣ ಸಹ ಇಂದು ಅಹ್ಮದಿಯರಲ್ಲೇ ಪೂರ್ತಿಗೊಂಡು ಕಾಣುತ್ತದೆ. ಅಹ್ಮದಿಯರು ಇತರ ಮುಸ್ಲಿಮರಿಗೆ ಹೋಲಿಸಿದರೆ ಹೆಚ್ಚು ಧರ್ಮನಿಷ್ಠೆಯುಳ್ಳವರೂ ಧರ್ಮ ನಿಯಮಗಳನ್ನು ಅನುಸರಿಸಿ ಜೀವಿಸುವವರೂ ಆಗಿದ್ದಾರೆಂಬ ನಿಜಸ್ಥಿತಿಯನ್ನು ನಿಷ್ಪಕ್ಷಪಾತಿಗಳಾದ ಅನ್ಯರೇ ಒಪ್ಪುತ್ತಾರೆ. ಮಾತ್ರವಲ್ಲ, ಮುಸ್ಲಿಮರು ಸಾಮಾನ್ಯವಾಗಿ ಲೌಕಿಕವಾದ ಲಾಭಗಳಿಗೂ ರಾಜಕೀಯವಾದ ಅಧಿಕಾರಲಬ್ಧಿಗೂ ಬೇಕಾಗಿ ಮಾತ್ರ ಸಂಘಗಳನ್ನು ಸ್ಥಾಪಿಸಿ ಮೆರೆಯಿಡುವ ಈ ಕಾಲದಲ್ಲಿ ಇಸ್ಲಾಂ ಧರ್ಮವನ್ನು ಪ್ರಚಾರ ಮಾಡಲಿಕ್ಕೂ ಅದರ ಸಿದ್ಧಾಂತಗಳ ಸತ್ಯವನ್ನು ಸ್ಥಾಪಿಸಲಿಕ್ಕೂ ವ್ಯವಸ್ಥಿತವಾದ ರೀತಿಯಲ್ಲಿ ಪರಿಶ್ರಮಿಸುವುದು ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ. ಇದೇ ಪ್ರಕಾರ, ಅಲ್ಲಾಹನಿಗೆ ಏನನ್ನೂ ಸಹಭಾಗಿ ಮಾಡದೆ ಯಥಾರ್ಥ ದೇವ ವಿಶ್ವಾಸವನ್ನು ಹೊಂದಿರುವವರು ಸಹ ಅವರೇ ಆಗಿದ್ದಾರೆ. ಶಿಯಾ-ಸುನ್ನಿಗಳಾದರೆ ಹಲವು ತರದ 'ಶಿರ್ಕ್'ಗಳಲ್ಲಿ ಮುಳುಗಿದ್ದಾರೆ. ಪುರೋಗಮನವಾದಿಗಳೆಂದು ಹೇಳುವವರು ಸಂದರ್ಭಾನುಸಾರ ಶಿರ್ಕ್‌ಪರವಾದ ವಿಚಾರಗಳಲ್ಲಿ ಇತರರೊಡನೆ ಭಾಗವಹಿಸಿ, ಔಲಿಯಾಗಳಿಗೆ ಬದಲು ಈಸಾನಬಿಗೆ ದೈವತ್ವವನ್ನು ಕಲ್ಪಿಸಿ ಏಕ ದೇವ ವಿಶ್ವಾಸಕ್ಕೆ ವ್ಯತಿರಿಕ್ತವಾಗಿ ವರ್ತಿಸುತ್ತಾರೆ. ಇವರಲ್ಲಿ ಸೇರದವರು, ಧರ್ಮ ಮತ್ತು ಧರ್ಮ ವಿಶ್ವಾಸ ಬರೇ ವಿನೋದ ಮೆಂಬಂತೆ ಭಾವಿಸಿ ವರ್ತಿಸುವವರಾಗಿದ್ದಾರೆ. ಇವರು ಮುಸ್ಲಿಂ ಸಮುದಾಯದಲ್ಲಿ ಸೇರಿದವರಾದುದರಿಂದ ತಾವು ಸಹ ಮುಸ್ಲಿಮರೆಂದು ಹೇಳುತ್ತಾರೆ ಹೊರತು ಅವರ ಬದುಕಿನಲ್ಲಿ ಇಸ್ಲಾಮಿನೊಂದಿಗೆ ಯಾವುದೇ ಸಂಬಂಧವಿಲ್ಲ. ಅವರ 'ದೀನ್ ಮತ್ತು ಈಮಾನ್' ಎಲ್ಲವೂ ಲೌಕಿಕ ಲಾಭ ಮತ್ತು ಅದಕ್ಕೆ ಸಂಬಂಧಿಸಿದ ಚಿಂತೆ ಮಾತ್ರವಾಗಿದೆ. ಈ ನಿಜಸ್ಥಿತಿಯನ್ನು ಮುಸ್ಲಿಂ ನೇತಾರರೂ ವಿದ್ವಾಂಸರೂ ಒಪ್ಪಿಕೊಂಡು ಉಚ್ಚಸ್ವರದಲ್ಲಿ ಘೋಷಿಸುತ್ತಾರೆ. ಒಟ್ಟಿನಲ್ಲಿ, ಅಲ್ಲಾಹನಿಗೆ ಏನನ್ನೂ ಸಹಭಾಗಿ ಮಾಡದೆ ಅವನನ್ನು ಮಾತ್ರ ಆರಾಧಿಸುವವರೆಂಬ ಲಕ್ಷಣ ಇಂದು ಅಹ್ಮದಿಯಾ ಜಮಾಅತಿನಲ್ಲಿ ಪೂರ್ತಿಗೊಂಡು ಕಾಣುತ್ತದೆ. ಆದ್ದರಿಂದ ಖಿಲಾಫತಿನ ಹಕ್ಕುದಾರರು ಅವರೇ ಆಗಿದ್ದಾರೆ.

## ಮೌಲಾನ ಆಝಾದ್ ಹೇಳುತ್ತಾರೆ

ಖಿಲಾಫತನ್ನು ನಿರಾಕರಿಸುವವರ ಕುರಿತು "**ಅವರೇ ಧಿಕ್ಕಾರಿಗಳು**" ಎಂದು ಮೇಲಿನ ಖುರ್‌ಆನ್ ವಾಕ್ಯದ ಕೊನೆಯಲ್ಲಿ ಹೇಳಿರುವುದರ ಬಗ್ಗೆ ದೇವಭಯ ಮತ್ತು ನೀತಿಪ್ರಜ್ಞೆಯಿರುವ ಪ್ರತಿಯೊಬ್ಬನು ಚಿಂತನೆ ಮಾಡಬೇಕಾಗಿದೆ. ಖಲೀಫರನ್ನು ಸ್ವೀಕರಿಸಬೇಕಾದುದು ಅತ್ಯಾವಶ್ಯಕವೆಂದೂ ಸ್ವೀಕರಿಸದಿದ್ದರೆ ಮುಸ್ಲಿಮರಿಗೆ ಮೋಕ್ಷ ಮತ್ತು ಕ್ಷೇಮ ಪ್ರಾಪ್ತವಾಗದೆಂದೂ ಖುರ್‌ಆನ್ ಹೇಳುತ್ತದೆ. ಖಲೀಫರನ್ನು ಅನುಸರಿಸುವ ಆವಶ್ಯಕತೆಯ ಕುರಿತು ಮೌಲಾನಾ ಅಬುಲ್ ಕಲಾಂ ಆಝಾದ್ ತನ್ನ "ಮಸ್‌ಅಲಯೆ ಖಿಲಾಫತ್" ಎಂಬ ಪುಸ್ತಕದಲ್ಲಿ ಹೀಗೆ ಹೇಳುತ್ತಾರೆ:

"ವ್ಯಕ್ತಿಗತವಾಗಿಯೂ ವಿಶ್ವಾಸ ಸಂಬಂಧವಾಗಿಯೂ ಪ್ರವರ್ತನ ಪರವಾಗಿಯೂ ಇರುವ ಜೀವಿತಗಳಿಗೆ ಒಂದೊಂದು ಕೇಂದ್ರವಿರುವುದಾಗಿ ಕಾಣುವ ಪ್ರಕಾರವೇ ಸಾಮುದಾಯಿಕವೂ ಧಾರ್ಮಿಕವೂ ಆದ ಜೀವಿತಕ್ಕೂ ಕೇಂದ್ರವಾಗಿರುವ ಒಂದು ಶಕ್ತಿ ಇರಬೇಕಾದುದು ಅವಶ್ಯವಾಗಿದೆ. ಅಂತೆಯೇ, ಹಾಗೆ ಇರುವ ಒಂದು ಕೇಂದ್ರ ನಿಶ್ಚಯಿಸಲ್ಪಟ್ಟಿದೆ ಕೂಡ. ಸಮುದಾಯವೆಲ್ಲವೂ ಆ ಕೇಂದ್ರಕ್ಕೆ ಸುತ್ತಲೂ ಇರುವ ವೃತ್ತವಾಗಿ ಪರಿಗಣಿಸಲ್ಪಟ್ಟಿದೆ. ಆ ಕೇಂದ್ರ ಶಕ್ತಿಯೊಂದಿಗೆ ಒಂದು ವಿಶಿಷ್ಟ ಸಂಬಂಧ, ಅನುಸರಣೆ ಮತ್ತು ಪರಿಪೂರ್ಣ ರೀತಿಯಲ್ಲಿರುವ ವಿಧೇಯತೆಯನ್ನು ತೋರಿಸಿ, ಅದರ ಕರೆಯನ್ನು ಆಲಿಸಿ, ಅದರ ಆಜ್ಞಾನುಸಾರ ಜೀವವನ್ನೂ ಧನವನ್ನೂ ವ್ಯಯಿಸುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವಾಗಿ ವಿಧಿಸಲ್ಪಟ್ಟಿದೆ. ಈ ಧರ್ಮವನ್ನು ಅನುಷ್ಠಿಸುವುದರ ಮೂಲಕ ಹೊರತು ಅಜ್ಞಾನಾಂಧಕಾರದಿಂದ ಪ್ರಕಾಶದೆಡೆಗೆ ಬರಲಿಕ್ಕೆ ಸಾಧ್ಯವಿಲ್ಲ. ಇಸ್ಲಾಮಿನ ಈ ಸಾಮುದಾಯಿಕ ಕೇಂದ್ರ ಶಕ್ತಿಗೆ ಖಲೀಫ ಎಂದೂ ಇಮಾಂ ಎಂದೂ ಹೇಳಲಾಗುತ್ತದೆ. ಎಷ್ಟರವರೆಗೆ ಈ ಕೇಂದ್ರ ಶಕ್ತಿ ಅದರ ಸ್ಥಾನದಿಂದ ವ್ಯತಿಕ್ರಮಿಸದಿರುತ್ತದೋ - ಎಷ್ಟರ ವರೆಗೆ ಅದರ ಅನುಶಾಸನಗಳು ಖುರ್‌ಆನ್ ಮತ್ತು ಸುನ್ನತ್‌ಗೆ ಅನುಸಾರವಾಗಿ ಇರುತ್ತವೆಯೋ - ಅಷ್ಟರವರೆಗೆ ಅದನ್ನು ಅನುಸರಿಸುವುದು ಮತ್ತು ಅದಕ್ಕೆ ನೆರವಾಗುವುದು ಪೈಗಂಬರರನ್ನೂ(ಸ) ಅಲ್ಲಾಹನನ್ನೂ ಅನುಸರಿಸುವಂತೆಯೂ ನೆರವಾಗುವಂತೆಯೂ ಆಗಿದೆ." (ಮಸ್‌ಅಲಯೆ ಖಿಲಾಫತ್ - ಪುಟ 26)

ಇನ್ನೂ ಅವರು ಹೇಳುತ್ತಾರೆ : "ಹಝ್ರತ್ ಇಬ್ನು ಉಮರ್‌ರವರ ಒಂದು ನಿವೇದನೆಯಲ್ಲಿ ಹೀಗಿದೆ:

من خلع يداً من طاعة لقي الله يوم

القيمة ولا حجة له ومن مات وليس

فى عنقه بيعة مات ميتة جاهلية

'ಯಾರು ಖಲೀಫರ ಅನುಸರಣೆಯನ್ನು ಕೈಬಿಡುವನೋ, ಅವನು ನ್ಯಾಯ ವಿಚಾರಣೆ ದಿನದಂದು ದೇವ ಸನ್ನಿಧಿಯಲ್ಲಿ ಯಾವುದೇ ರಕ್ಷಾ ಮಾರ್ಗವಿಲ್ಲದ ಸ್ಥಿತಿಯಲ್ಲಿ ಹಾಜರಾಗುವನು. ಖಲೀಫರ ಬೈಅತ್ ಮತ್ತು ಅನುಸರಣೆ ಇಲ್ಲದೆ ಯಾವೊಬ್ಬ ಮುಸ್ಲಿಂ ಇಹಲೋಕ ವಾಸವನ್ನು ತ್ಯಜಿಸುವನೋ ಅವನು ಖಂಡಿತವಾಗಿಯೂ ಜಾಹಿಲಿಯ್ಯತಿನ (ಅವಿಶ್ವಾಸದ) ಮರಣವನ್ನು ಹೊಂದುವವನು.'

ومن فارق الجماعة شبرا فكانما خلع

ربقة الاسلام من عنقه

'ಯಾರು ಜಮಾಅತಿನಿಂದ ಬಿಟ್ಟು ನಿಲ್ಲುತ್ತಾನೋ ಅವನು ಇಸ್ಲಾಮಿಕ ವೃತ್ತದಿಂದಲೂ ಹೊರಗಿರುವವನಾಗುವನು.' (ತಿರ್ಮಿದಿ)

"ಒಂದು ವರದಿಯಲ್ಲಿ دخل النار ಎಂದು ಇದೆ. ಅಂದರೆ, 'ಯಾರು ಖಲೀಫರ ಅನುಸರಣೆಯಿಂದ ಬಿಟ್ಟು ನಿಲ್ಲುತ್ತಾನೋ ಅವನ ವಾಸಸ್ಥಳ ನರಕವಾಗಿರುವುದು' ಎಂದು." (ಮಸ್‌ಅಲಯೆ ಖಿಲಾಫತ್ ಪುಟ 31-32)

ಖಲೀಫರನ್ನು ಸ್ವೀಕರಿಸಿ ಖಲೀಫರ ಆಜ್ಞೆಗಳಿಗೆ ಪೂರ್ಣವಾಗಿ ವಿಧೇಯರಾಗಬೇಕಾದುದು ಇಸ್ಲಾಮಿಕ ದೃಷ್ಟಿಯಲ್ಲಿ ಎಷ್ಟು ಅಗತ್ಯವೆಂದೂ ಖಲೀಫರನ್ನು ಸ್ವೀಕರಿಸದವರ ಮತ್ತು ಖಲೀಫರ ಆಜ್ಞೆಗಳನ್ನು ಧಿಕ್ಕರಿಸುವವರ ಅಂತ್ಯ ಹೇಗಿರುವುದೆಂದೂ ಮೇಲಿನ ಉದ್ಧರಣೆಯಿಂದ ಚೆನ್ನಾಗಿ ಮನಗಾಣಬಹುದು. ಸಂಕ್ಷಿಪ್ತದಲ್ಲಿ, ಖಿಲಾಫತಿನೊಡನೆ ಸದಾ ಸಂಬಂಧವನ್ನಿಟ್ಟುಕೊಂಡು ಇರಬೇಕಾದುದು ಯಥಾರ್ಥ ಮುಸ್ಲಿಮನ ಅನಿವಾರ್ಯ ಕರ್ತವ್ಯವಾಗಿದೆ. ●

# ಇಂದಿನ ಕಾಲದ ಅಪಾಯಗಳು ಮತ್ತು ಇಸ್ಲಾಮಿಕ ಮೌಲ್ಯಗಳ ಸಂರಕ್ಷಣೆ

## (2006ರ ಯು.ಕೆ. ಅಹ್ಮದಿಯಾ ವಾರ್ಷಿಕ ಅಧಿವೇಶನದಲ್ಲಿ ಮಾಡಿದ ಭಾಷಣ)

- ಬಿಲಾಲ್ ಅಟ್‌ಕಿನ್‌ಸನ್

ನನ್ನ ಭಾಷಣದ ವಿಷಯ "ಇಂದಿನ ಕಾಲದ ಅಪಾಯಗಳು ಮತ್ತು ಇಸ್ಲಾಮಿಕ ಮೌಲ್ಯಗಳ ಸಂರಕ್ಷಣೆ" ಎಂದಾಗಿದೆ. ಇದು ಬಹಳ ವಿಸ್ತೃತವಾದ ಒಂದು ವಿಷಯವಾಗಿದೆ. ದೇವರಿಚ್ಛಿಸಿದರೆ ಮಾನವ ಕುಲವನ್ನು ಬಾಧಿಸುತ್ತಿರುವ ಅನೇಕ ಅಪಾಯಗಳಲ್ಲಿ ಕೆಲವನ್ನು ನಾನು ನಿಮ್ಮ ಗಮನಕ್ಕೆ ತರುವೆನು. ಅವುಗಳು ನಮ್ಮ ನೈತಿಕ ಮತ್ತು ನ್ಯಾಯಯುತ ಇಸ್ಲಾಮಿಕ ಮೌಲ್ಯಗಳಿಗೆ, ನಂಬಿಕೆಗಳಿಗೆ ಮತ್ತು ಮಾನದಂಡಗಳಿಗೆ ಬೆದರಿಕೆ ಒಡ್ಡುತ್ತಾ ಇವೆ. ಇಸ್ಲಾಮ್ ಧರ್ಮವು ನಮಗೆ ಸಹಾಯಮಾಡುತ್ತಾ ಇದೆ ಮತ್ತು ಮಾರ್ಗದರ್ಶನ ನೀಡುತ್ತಾ ಇದೆ.ಆದುದರಿಂದ ನಮಗೆ ಭರವಸೆ ಇದೆ: ನಾವು ಇಸ್ಲಾಮಿಕ ಮಾರ್ಗ ದರ್ಶನಗಳನ್ನು ಅನುಸರಿಸಿ, ಕೃತಿಗಿಳಿಸಿದರೆ ಇಸ್ಲಾಮನ್ನು ಹೃತ್ಪೂರ್ವಕವಾಗಿ ಪ್ರೀತಿಸುವ ನಮ್ಮನ್ನು ಇಂದಿನ ಸಮಾಜದಲ್ಲಿರುವ ಎಲ್ಲಾ ಕೆಡುಕುಗಳಿಂದಲೂ ಅನೈತಿಕ ಅಪಾಯಗಳಿಂದಲೂ ಅದು ರಕ್ಷಿಸುವುದು.

ಈ ದಿನ ನಾನು ಚರ್ಚಿಸಲು ಬಯಸುವ ಅಪಾಯಗಳು ಲೌಕಿಕ ಲಾಲಸೆ, ಮದ್ಯಪಾನ, ಜುಗಾರಿ, ಇಂಟರ್‌ನೆಟ್, ಪುರುಷರು ಮತ್ತು ಮಹಿಳೆಯರು ಅನಿಯಂತ್ರಿತವಾಗಿ ಬೆರೆಯುವುದು, ವ್ಯಭಿಚಾರದಿಂದ ಉಂಟಾಗುವ ಏಯ್‌ಡ್ಸ್ ಮೊದಲಾದ ರೋಗಗಳು, ವಿಶ್ವಾಸದ್ರೋಹ ಮತ್ತು ಅಪ್ರಾಮಾಣಿಕತೆ.

ನಾನು ಎತ್ತಿಕೊಳ್ಳುವ ಮೊದಲನೆಯ ವಿಷಯ ಲೌಕಿಕ ಲಾಲಸೆಯಾಗಿದೆ. ಈ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

> (ಪ್ರಾಪಂಚಿಕ ಗಳಿಕೆಗೋಸ್ಕರ) ನಿಮ್ಮ ಪೈಪೋಟಿ
> (ಅಲ್ಲಾಹನ ಬಗ್ಗೆ) ನಿಮ್ಮನ್ನು ನಿರ್ಲಕ್ಷ್ಯರನ್ನಾಗಿ ಮಾಡಿದೆ.
> ಎಷ್ಟರವರೆಗೆಂದರೆ (ಅದೇ ಸ್ಥಿತಿಯಲ್ಲಿ) ನೀವು ಗೋರಿಗಳನ್ನು
> ಕೂಡ ಸಂದರ್ಶಿಸುತ್ತೀರಿ.
>
> ಎಚ್ಚರಿಕೆ, ನೀವು ಬೇಗನೆ ತಿಳಿಯುವಿರಿ.
>
> ಮತ್ತೊಮ್ಮೆ ಎಚ್ಚರಿಕೆ, ನೀವು ಬೇಗನೆ ತಿಳಿಯುವಿರಿ.
>
> ತಿಳಿದುಕೊಳ್ಳಿರಿ, ನೀವು ದೃಢ ಜ್ಞಾನದಿಂದ ಮನಗಂಡಿದ್ದರೆ,
> ಖಂಡಿತವಾಗಿಯೂ ನೀವು (ಇಹಲೋಕ ಜೀವಿತದಲ್ಲಿ)
> ನರಕವನ್ನು ಕಾಣುವಿರಿ.
>
> ಅನಂತರ ಅದನ್ನು (ಪರಲೋಕದಲ್ಲಿ) ನೀವು ದೃಢ ದೃಷ್ಟಿಯಿಂದ
> (ಕಣ್ಣಾರೆ) ಕಾಣುವಿರಿ.
>
> ಮತ್ತೆ ಖಂಡಿತವಾಗಿಯೂ ಅಂದು ನಿಮ್ಮೊಡನೆ ಇಹಲೋಕದ
> ಸುಖಗಳ ಬಗ್ಗೆ ಪ್ರಶ್ನಿಸಲಾಗುವುದು.
>
> (ಪವಿತ್ರ ಖುರ್‌ಆನ್ 102 : 2-9)

ಪ್ರಾಪಂಚಿಕ ಸಾಮಗ್ರಿಗಳನ್ನು ಪಡೆಯುವ ಆಶೆ ಮತ್ತು ಆ ಆಶೆಯನ್ನು ಈಡೇರಿಸುವ ಪರಿಶ್ರಮವು ಬಹುತೇಕ ಜನರಿಗೆ ಇಹಲೋಕದಲ್ಲಿ ನೆಮ್ಮದಿಯನ್ನು ಗಳಿಸಲಿಕ್ಕಾಗಿ ಮಾಡುವ ಕೆಲಸದ ಮುಖ್ಯ ಭಾಗವಾಗಿರುತ್ತದೆ. ವರ್ತಮಾನ ಪತ್ರಿಕೆಗಳು, ಸಿನೆಮಾ, ಟೆಲಿವಿಷನ್ ಮತ್ತು ರೇಡಿಯೋ ಪದೇ ಪದೇ ಜನರನ್ನು ಆಕರ್ಷಿಸಲು ಜಾಹೀರಾತುಗಳನ್ನು ಪ್ರಕಟಿಸಿ, ಹೊಸದಾಗಿ ಆವಿಷ್ಕರಿಸಿದ ಗೃಹೋಪಯೋಗಿ ಸಾಮಗ್ರಿಗಳನ್ನು ಮತ್ತು ಐಶಾರಾಮಕ್ಕಾಗಿ ಬಳಸಲಾಗುವ ಸಾಮಗ್ರಿಗಳನ್ನು ಕೊಳ್ಳಲು ಪ್ರೇರೇಪಿಸುತ್ತವೆ. ಅಂಗಡಿ ಮುಂಗಟ್ಟುಗಳನ್ನು ಮತ್ತು ವ್ಯಾಪಾರ ಮಳಿಗೆಗಳನ್ನು ವಿಶಿಷ್ಟವಾಗಿ ಅಲಂಕರಿಸಿ ಅವುಗಳಲ್ಲಿರುವ ಸಾಮಗ್ರಿಗಳು ಆಧುನಿಕ ಶೈಲಿಯ ಜೀವಿತಕ್ಕೆ ಅನಿವಾರ್ಯವೆಂಬಂತೆ ತೋರುವ ರೀತಿ ಪ್ರದರ್ಶಿಸಿ, ಆ ದಾರಿಯಲ್ಲಿ ಸಾಗುವ ನಾವು ಅವುಗಳಿಗೆ ಮರುಳಾಗುವಂತೆ ಮಾಡಲಾಗುತ್ತದೆ.

ಅನ್ಯ ಶ್ರೀಮಂತರಂತೆ ತಾವಾಗುವ ಹಂಬಲವು ಲೋಕದಾದ್ಯಂತ ವ್ಯಾಪಿಸಿರುವುದು ದುರದೃಷ್ಟಕರವಾಗಿದೆ. ಭರ್ಜರಿ ಸಂಬಳದ ಉದ್ಯೋಗ, ಅತ್ಯಾಧುನಿಕ ಸಲಕರಣೆಗಳಿಂದ ತುಂಬಿರುವ ಹೊಸಮನೆ, ಬೆಲೆಬಾಳುವ ಹೊಸ ಕಾರು, ದುಬಾರಿ ಬೆಲೆಯ ಉಡುಗೆ ತೊಡುಗೆಗಳು ಮೊದಲಾದುವು ಬಹುತೇಕ ಜನರು ತಮ್ಮ ಬೇಡಿಕೆಗಳಿಗೆ ಆದ್ಯತೆ ನೀಡುವ ವಸ್ತುಗಳಾಗಿವೆ. "ಈ ವಸ್ತುಗಳು ನಮಗೆ ಆವಶ್ಯಕವಾಗಿವೆಯೋ, ನಮಗೆ ಇವುಗಳನ್ನು ಪಡೆಯಲು ಸಾಧ್ಯವೋ?" ಎಂದು ಯೋಚಿಸುವುದಕ್ಕೆ ಪ್ರತಿಯಾಗಿ "ನಮಗೆ ಇವುಗಳು ಬೇಕೇ ಬೇಕು." ಎಂದು ಈ ಜನರು ಅವುಗಳ ಕಡೆಗೆ ನೋಡುತ್ತಾರೆ.

ನಿಮ್ಮ ಜೀವಿತದ ಗುರಿ ಲೌಕಿಕ ಸಂಪತ್ತಿನ ಗಳಿಕೆ ಮತ್ತು ಲೌಕಿಕ ಮೌಲ್ಯಗಳಿಗೆ ಆದ್ಯತೆ ನೀಡುವುದಾಗಿರುವಾಗ ಅದರ ಫಲಸ್ವರೂಪವಾಗಿ ಅನಿವಾರ್ಯವಾಗಿ ಬಂದೆರಗಲಿರುವ ಆರ್ಥಿಕ ಸಂಕಷ್ಟಗಳ ಕುರಿತು ನೀವು ಕುರುಡರಾಗುತ್ತೀರಿ. ತನ್ನ ಆ ಗುರಿಯ ಸಾಧನೆಯಲ್ಲಿ ಮುಂದುವರಿಯುವಾಗ ಮನುಷ್ಯನು ಸ್ವಾರ್ಥಿಯಾಗುತ್ತಾನೆ, ಪರರ ಹಿತದ ಬಗ್ಗೆ ಗಮನಿಸದವನಾಗುತ್ತಾನೆ ಮತ್ತು ಜೀವಿತದ ನಿಜ ಮೌಲ್ಯಗಳ ಕುರಿತು ನಿರ್ಲಕ್ಷ್ಯನಾಗುತ್ತಾನೆ.

ಕೆಲವು ದೇಶಗಳ ಮತ್ತು ವಿಶಿಷ್ಟವಾಗಿ ಪಾಶ್ಚಿಮಾತ್ಯ ರಾಷ್ಟ್ರಗಳ ಆರ್ಥಿಕ ಸ್ಥಿತಿಯನ್ನು ಮೇಲಿಂದ ಮೇಲೆ ನೋಡುವಾಗ ಅವರೆಲ್ಲಾ ಐಶ್ವರ್ಯವಂತರೆಂದೂ ಪ್ರಗತಿಪಥದಲ್ಲಿರುವರೆಂದೂ ತಪ್ಪುಗ್ರಹಿಕೆ ಉಂಟಾಗುತ್ತದೆ. ಆ ದೇಶಗಳ ಕುಟುಂಬಗಳ ಸ್ಥಿತಿಯ ಬಗ್ಗೆ ಮೇಲಿಂದ ಮೇಲೆ ಅವಲೋಕಿಸಿದರೆ ಹೀಗೆಯೇ ತಪ್ಪುಗ್ರಹಿಕೆಗೆ ಪಾತ್ರರಾಗುತ್ತೇವೆ. ಆದರೆ ನೀವು ಹತ್ತಿರದಿಂದ ಪರಿಶೀಲಿಸಿದರೆ ಬಹುತೇಕ ಸಂದರ್ಭಗಳಲ್ಲಿ ಒಂದು ದೇಶದ ಅಥವಾ ಒಂದು ಕುಟುಂಬದ ಸಂಗ್ರಹಿತ ಸಂಪತ್ತು, ಮನೆಗಳು, ಕಾರುಗಳು, ಪೀಠೋಪಕರಣಗಳು, ಬಟ್ಟೆ ಬರೆಗಳು ಮತ್ತು ದೊಡ್ಡ ದೊಡ್ಡ ಗೃಹೋಪಯೋಗಿ ಸಾಮಗ್ರಿಗಳು ಸಾಲದ ರೂಪದಲ್ಲಿ ಅಥವಾ ರಹಸ್ಯವಾಗಿಟ್ಟ ಬೆಲೆಗೆ ಪಡೆದುಕೊಂಡುದಾಗಿ ಕಾಣುವಿರಿ.

ರಾಷ್ಟ್ರೀಯ ಅಥವಾ ವೈಯಕ್ತಿಕ ಆರ್ಥಿಕ ನಿರ್ವಹಣೆಯು ಸಂಪಾದಿಸದೆ ಇದ್ದ ಆದಾಯವನ್ನು ಹೊಂದಿಕೊಂಡಿದ್ದರೆ ಅದಕ್ಕೆ ಬಹಳ ದೊಡ್ಡ ಬೆಲೆ ಕೊಡಬೇಕಾಗುತ್ತದೆ. ಬಹುತೇಕ ಆರ್ಥಿಕ ವ್ಯವಸ್ಥೆಗಳು ಬಡ್ಡಿಯಾಧಾರಿತವಾಗಿದೆ ಮತ್ತು ಬ್ಯಾಂಕ್‌ಗಳು ಸಾಲವನ್ನು ಕೊಡಲು ಸದಾ ಸನ್ನದ್ಧವಾಗಿರುತ್ತವೆ. ಸುಮಾರು ಮೂವತ್ತು ವರ್ಷಗಳ ಹಿಂದೆ ಸಾಲ ಪಡೆಯುವುದು ಸುಲಭವಾಗಿರಲಿಲ್ಲ. ಸಾಲ ನೀಡುವ ಸಂಸ್ಥೆಗಳು ಸಾಲ ಪಡೆಯುವವನ ವೈಯಕ್ತಿಕ ಆದಾಯವನ್ನು ಮತ್ತು ಸಾಲವನ್ನು ಮರುಪಾವತಿ ಮಾಡಲು ಆತನಿಗಿರುವ ಸಾಮರ್ಥ್ಯವನ್ನು ಪರಿಶೀಲಿಸಿ ತಾವು ನೀಡಿದ ಸಾಲಕ್ಕೆ ಭದ್ರತೆಯನ್ನು ಖಾತರಿಪಡಿಸುತ್ತಿದ್ದವು. ಈಗ ಅನೇಕ ನಿಯಂತ್ರಣಗಳನ್ನು ಸಡಿಲಗೊಳಿಸಲಾಗಿದೆ ಮತ್ತು ಸಾಲದಲ್ಲಿ ಮುಳುಗಿದವರಿಗೆ ಸಹ ಇನ್ನಷ್ಟು ಸಾಲ ಪಡೆಯಲು ಪ್ರೋತ್ಸಾಹಿಸಲಾಗುತ್ತಿದೆ.

ಇಂತಹ ಜನರು ಸಾಲ ಪಡೆಯುತ್ತಾ ಇರುವುದು ಬ್ಯಾಂಕಿನಿಂದಲ್ಲ. ಅವರು ತಮ್ಮ ಮುಂದಿನ ವೈಯಕ್ತಿಕ ಜೀವಿತದಿಂದ ಸಾಲ ಪಡೆಯುತ್ತಾರೆ.

ವಾಗ್ದತ್ತ ಮಸೀಹರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರು[ಅ] ಲೌಕಿಕ ಸಂಪತ್ತಿನ ಗಳಿಕೆಗಾಗಿ ಹೋರಾಡುವುದರ ಅಪಾಯಗಳ ಕುರಿತು ಹೀಗೆ ಹೇಳುತ್ತಾರೆ:

"ಮಿತಿಮೀರಿದ ಭೋಗ ಜೀವನ ನಡೆಸುವುದು ಶಾಪಕ್ಕೆ ಗುರಿಯಾಗುವ ಜೀವಿತವಾಗಿದೆ. ದೇವನ ಬಗ್ಗೆ ಮತ್ತು ಅವನ ದಾಸರ ಬಗ್ಗೆ ಸಹಾನುಭೂತಿ ತೋರದೆ ನಿರ್ಲಕ್ಷ್ಯ ತೋರಿಸುವುದು ಶಾಪಕ್ಕೆ ಪಾತ್ರವಾಗುವುದಾಗಿದೆ. ಪ್ರತಿಯೊಬ್ಬ ಶ್ರೀಮಂತನು ಅವನು ದೇವನಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಮತ್ತು ಮನುಷ್ಯರಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಹೇಗೆ ಈಡೇರಿಸಿದನೆಂಬುದರ ಬಗ್ಗೆ ಬಡವನು ಪ್ರಶ್ನಿಸಲ್ಪಡುವ ಹಾಗೆ ಅಥವಾ ಅದಕ್ಕಿಂತ ಮಿಗಿಲಾಗಿ ಪ್ರಶ್ನಿಸಲ್ಪಡುವನು. ಇಹಲೋಕದ ಅಲ್ಪ ಕಾಲದ ಜೀವಿತದ ಮೇಲೆ ಭರವಸೆ ಇರಿಸಿ ಸಂಪೂರ್ಣವಾಗಿ ದೇವನಿಂದ ಮುಖ ತಿರುಗಿಸುವವನು ಎಷ್ಟು ದುರದೃಷ್ಟಶಾಲಿ." (ಕಿಶ್ತೀ ನೂಹ್ - 1902)

ಈಜಿಪ್ಟ್ ದೇಶದ ಫರೋವ ಅರಸರ ಗೋರಿಗಳು ಅವರ ಚಿನ್ನಾಭರಣಗಳಿಂದಲೂ ಇತರ ಅಮೂಲ್ಯ ವಸ್ತುಗಳಿಂದಲೂ ತುಂಬಿಸಲ್ಪಡುತ್ತಿದ್ದುವು. ಅವರು ಪರಲೋಕಕ್ಕೆ ಅವುಗಳನ್ನು ಕೊಂಡೊಯ್ಯುವರು ಎಂದು ಪ್ರತೀಕ್ಷಿಸಲಾಗುತ್ತಿತ್ತು. ತಾವು ಶೇಖರಿಸಿದ ಸಂಪತ್ತನ್ನು ಪರಲೋಕಕ್ಕೆ ಕೊಂಡೊಯ್ಯಬಲ್ಲೆವೆಂದು ಅವರು ಅಹಂಕಾರದಿಂದ ಯೋಚಿಸಿದ್ದರು. ಇಲ್ಲಿ ಗಮನಾರ್ಹ ವಿಚಾರವೇನೆಂದರೆ, ಆ ಜನರು ಪರಲೋಕದ ಕುರಿತು ತಪ್ಪಾದ ನಿರ್ಧಾರ ಕೈಗೊಂಡಿದ್ದರೂ ಅವರಿಗೆ ಪರಲೋಕ ಜೀವಿತದ ಬಗ್ಗೆ ಚಿಂತೆ ಇತ್ತು. ಆದರೆ ಇಂದಿನ ಕಾಲದ ಜನರಿಗೆ ತಮ್ಮ ಮರಣದ ನಂತರದ ಪರಲೋಕ ಜೀವಿತದ ಬಗ್ಗೆ ಯಾವ ಚಿಂತೆಯೂ ಇಲ್ಲ. ಈ ಜನರ ನೈತಿಕ ಮತ್ತು ಆಧ್ಯಾತ್ಮಿಕ ಅಧಃಪತನಕ್ಕೆ ಮುಖ್ಯ ಕಾರಣ ಇದೇ ಆಗಿದೆ. ಅವರು ಮೃತ್ಯುಬಂದೆರಗುವ ತನಕ ಲೌಕಿಕ ಆಶೆಗಳನ್ನು ಈಡೇರಿಸುವ ಪ್ರಯತ್ನಗಳಲ್ಲಿ ಮುಳುಗಿರುತ್ತಾರೆ. ತಾವು ತಮ್ಮ ಅಮೂಲ್ಯ ಜೀವಿತ ಕಾಲವನ್ನು ನಾಶ ಹೊಂದಲಿರುವ ಸಂಪತ್ತನ್ನು ಬೆನ್ನಟ್ಟುವುದರಲ್ಲಿ ಕಳೆದುದಾಗಿ ಮತ್ತು ತಮ್ಮ ಎಲ್ಲಾ ಸಂಪತ್ತಿನ ಸೃಷ್ಟಿಕರ್ತನನ್ನು ಹಿಂಬಾಲಿಸುವುದಕ್ಕೆ ಪ್ರತಿಯಾಗಿ ಹೀಗೆ ಮಾಡಿದುದಾಗಿ ಕಂಡುಕೊಳ್ಳುವರು. ಲೌಕಿಕ ಸಂಪತ್ತನ್ನು ಮಾತ್ರ ಗಳಿಸುವುದಕ್ಕೆ ಮಾಡುವ ಪರಿಶ್ರಮಗಳು ಆಧ್ಯಾತ್ಮಿಕ ಅವನತಿಗೆ ಕಾರಣವಾಗುತ್ತಾ ಇವೆ.

ಪ್ರಾಪಂಚಿಕ ಸುಖ ಸಂಪತ್ತುಗಳನ್ನು ಗಳಿಸಬೇಕೆಂಬ ಕುರುಡು ಅತ್ಯುತ್ಸಾಹವು ಅವಿಶ್ವಾಸಿಗಳನ್ನು ಉನ್ನತ ಮತ್ತು ಶ್ಲಾಘನೀಯ ನೈತಿಕ ಮೌಲ್ಯಗಳನ್ನು ಗಳಿಸುವುದನ್ನು ತಡೆಗಟ್ಟುತ್ತದೆ.

ಈ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಓ ಸತ್ಯ ವಿಶ್ವಾಸಿಗಳೇ, ಕೊಡು-ಕೊಳ್ಳುವಿಕೆಯಾಗಲಿ, ಮಿತ್ರತ್ವವಾಗಲಿ, ಶಿಫಾರಸಾಗಲಿ ಇಲ್ಲದ ಒಂದು ದಿನ ಬರುವುದಕ್ಕೆ ಮುಂಚಿತವಾಗಿ, ನಾವು ನಿಮಗೆ ನೀಡಿದವುಗಳಿಂದ ಖರ್ಚು ಮಾಡಿರಿ. (ಈ ಆಜ್ಞೆಯನ್ನು) ಧಿಕ್ಕರಿಸುವವರು ಅಧರ್ಮಿಗಳಾಗಿದ್ದಾರೆ."

(ಪವಿತ್ರ ಖುರ್‌ಆನ್ 2 : 255)

ಪ್ರತಿಯೊಬ್ಬ ಮುಸ್ಲಿಮನು ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ಅನುಸರಿಸಲು ಯಾವಾಗಲೂ ಪ್ರಯತ್ನಿಸುತ್ತಾ ಇರಬೇಕು. ಅವರು ಅರಬ್ ದೇಶದ ದೊರೆಯಾಗಿದ್ದರೂ ಅವರ ಜೀವನ ಶೈಲಿಯು ಬಹಳ ಸರಳವಾಗಿತ್ತು. ಈ ಸರಳ ಜೀವನ ಶೈಲಿಯು ಅತ್ಯುತ್ತಮವೂ ಅನುಸರಿಸಲು ಸುಲಭವೂ ಆಗಿದೆ. ಲೌಕಿಕ ಸಾಮಗ್ರಿಗಳ ಬಗ್ಗೆ ಹೇಳುವುದಾದರೆ ಅವುಗಳ ನಿಜವಾದ ಆವಶ್ಯಕತೆಗಳ ಬಗ್ಗೆ ನಾವು ಪ್ರಶ್ನಿಸಬೇಕು. ಸಾಲ ಪಡೆದು ಸುಖಭೋಗದ ವಸ್ತುಗಳನ್ನು ಖರೀದಿ ಮಾಡಿ ಅವುಗಳಿಗೆ ಬಡ್ಡಿ ಕೊಡುವುದು ಸರಿಯಾದುದಲ್ಲ. ನಾವು ಸಾಮಾನ್ಯ ಆಹಾರ ಪದಾರ್ಥಗಳನ್ನು ಭಕ್ಷಿಸಬೇಕು ಮತ್ತು ಆಹಾರವನ್ನು ಪೋಲು ಮಾಡಬಾರದು.

ಕ್ರಮಬದ್ಧವಾಗಿ ಉಪವಾಸವನ್ನು ಮಾಡುವುದರಿಂದ ಬಡವರ ಆವಶ್ಯಕತೆಗಳ ಕುರಿತು ನಿಜವಾದ ಅರಿವುಂಟಾಗುತ್ತದೆ ಮತ್ತು ಬಡವರಿಗೆ ಸಹಾಯ ಮಾಡುವ ಮತ್ತು ದಾರಿದ್ರ್ಯ ನಿವಾರಣೆಯ ಬಗ್ಗೆ ಪ್ರೋತ್ಸಾಹಿಸಲ್ಪಡುತ್ತದೆ. ನಾವು ಹೃತ್ಪೂರ್ವಕವಾಗಿ ದಾನ ಧರ್ಮಗಳನ್ನು ನೀಡಬೇಕು ಮತ್ತು ಆಯಾ ಕಾಲದ ನಮ್ಮ ಸಮುದಾಯದ ಖಲೀಫರು ನೀಡುವ ಕರೆಗಳಿಗೆ ಉತ್ತರ ನೀಡಬೇಕು. ದುಬಾರಿ ಹೋಟೆಲುಗಳನ್ನು, ಸಿನಿಮಾ ತಿಯೇಟರ್‌ಗಳನ್ನು ಮತ್ತು ಇತರ ಅಂತಹ ಸಂಸ್ಥೆಗಳನ್ನು ಸಂದರ್ಶಿಸುವುದಕ್ಕೆ ಪ್ರತಿಯಾಗಿ ನಾವು ಆಟೋಟಗಳಿಗೆ, ಇತರ ಹೊರವಲಯದ ಚಟುವಟಿಕೆಗಳಿಗೆ ಮತ್ತು ಇತರ ಹವ್ಯಾಸಗಳಿಗೆ ಪ್ರೋತ್ಸಾಹ ನೀಡಬೇಕು ಮತ್ತು ಆಟಗಾರಿಗೆ ಸಹಾಯಮಾಡಬೇಕು.

ನಾವು ಲೌಕಿಕ ಪರಿಶ್ರಮಗಳನ್ನು ಮಾಡಬಾರದೆಂದೂ ಜ್ಞಾನಗಳಿಸಬಾರದೆಂದೂ ಅಥವಾ ಸಂಪತ್ತನ್ನು ಗಳಿಸಬಾರದೆಂದೂ ವ್ಯಾಪಾರ ಮತ್ತು ಕೈಗಾರಿಕೆಗಳಲ್ಲಿ ನಿರತರಾಗಬಾರದೆಂದೂ ಇಸ್ಲಾಮ್ ನಮಗೆ ಉಪದೇಶಿಸುವುದಿಲ್ಲ. ಅದು ನಮ್ಮ ಮನೋಧರ್ಮವನ್ನು ಮಾತ್ರ ಬದಲಾಯಿಸುತ್ತದೆ. ಬೇರೆ ಎಲ್ಲಾ ವಿಷಯಗಳಿಗಿಂತ ದೈವಿಕ ಆಜ್ಞೆಗಳಿಗೆ ಆದ್ಯತೆ ನೀಡಬೇಕೆಂದು ಅದು ನಮಗೆ ಕಲಿಸುತ್ತದೆ. ಈ ರೀತಿ ನಾವು ಆಧ್ಯಾತ್ಮಿಕ ಅನುಗ್ರಹದೊಂದಿಗೆ ದೇವನ ತೃಪ್ತಿಯನ್ನು ಮತ್ತು ಪ್ರಾಪಂಚಿಕ ವಸ್ತುಗಳನ್ನು ಗಳಿಸುವೆವು. ದೇವನಿಗೆ ನಿಷ್ಠನಾಗಿ ವರ್ತಿಸುವುದರಿಂದ ನಾವು ಲೌಕಿಕ ಬಹುಮಾನಗಳಿಂದ ವಂಚಿತರಾಗಲಾರೆವು. ವಾಸ್ತವಿಕವಾಗಿ ಈ ಬಹುಮಾನಗಳು ಒಬ್ಬ ದಾಸನ ಹಾಗೆ ನಮ್ಮನ್ನು ಹಿಂಬಾಲಿಸುವುದು. ನಮ್ಮ ಉದ್ದೇಶಿತ ಲಕ್ಷ್ಯವು ದೇವನಾಗಿದ್ದಾನೆ. ನಾವು ನಮ್ಮ ಜೀವಿತದ ಪ್ರತಿಯೊಂದು ಕ್ಷಣದಲ್ಲಿಯೂ ಈ ಉದ್ದೇಶಿತ ಲಕ್ಷ್ಯವನ್ನು ನೆನಪಿನಲ್ಲಿಡಬೇಕು.

ಮಿತಿಮೀರಿದ ಲೌಕಿಕ ಲಾಲಸೆಯು ಅನೇಕ ಸಾಮಾಜಿಕ ಸಮಸ್ಯೆಗಳ ಮೂಲ ಕಾರಣವಾಗಿದೆ. ಜುಗಾರಿ ಆಟ, ಮಾದಕ ದ್ರವ್ಯ ಸೇವನೆ ಮತ್ತು ಅಪರಾಧ ಕೃತ್ಯಗಳಿಗೆ ಇದೇ ಕಾರಣವಾಗಿದೆ. ಕುಟುಂಬದ ಮತ್ತು ಸಮಾಜದ ಅಸ್ತವ್ಯಸ್ತತೆಗೆ ಅದು ಕೊಂಡೊಯ್ಯುತ್ತದೆ.

## ಮದ್ಯ

ಮದ್ಯವು ಹೆಚ್ಚು ಕೆಡುಕನ್ನುಂಟು ಮಾಡುವ ಪದಾರ್ಥವಾಗಿದೆ. ಅದು ಕುಟುಂಬದ ಜೀವಿತವನ್ನು ನಾಶಮಾಡುತ್ತದೆ. ಸಮಾಜದ ನಾಶಕ್ಕೆ ಮದ್ಯವು ಹೇತುವಾಗುತ್ತದೆ.

ವಾಗ್ದತ್ತ ಮಸೀಹ್‌ರವರು[ಅ] ಈ ಬಗ್ಗೆ ಹೀಗೆ ಹೇಳಿದ್ದಾರೆ:

"ಓ ಬುದ್ಧಿಶಾಲಿಗಳೇ, ಈ ಲೋಕವು ಶಾಶ್ವತ ವಾಸಸ್ಥಳವಲ್ಲ. ನೀವು ನಿಮ್ಮನ್ನು ನಿಯಂತ್ರಿಸಿಕೊಳ್ಳಿರಿ. ನೀವು ಪ್ರತಿಯೊಂದು ಅತಿರೇಕದ ಕೆಲಸವನ್ನು ಬಿಟ್ಟು ಬಿಡಿರಿ. ನೀವು ಪ್ರತಿಯೊಂದು ಮಾದಕದ್ರವ್ಯವನ್ನು ತ್ಯಜಿಸಿರಿ. ಮನುಷ್ಯನನ್ನು ನಾಶಮಾಡುವುದು ಕೇವಲ ಸರಾಯಿ ಮಾತ್ರವಲ್ಲ. ಅಫೀಮು, ಗಾಂಜಾ, ಚರಸ್, ಭಂಗ್, ಕಳ್ಳು ಮತ್ತು ಪ್ರತಿಯೊಂದು ಮತ್ತು ಬರಿಸುವ ವಸ್ತುವನ್ನು

ಯಾವಾಗಲೂ ಉಪಯೋಗಿಸುತ್ತಾ ಇದ್ದರೆ ಅವು ಬುದ್ಧಿಯನ್ನು ಕೆಡಿಸುತ್ತವೆ ಮತ್ತು ಕೊನೆಗೆ ನಿಮ್ಮನ್ನು ನಾಶ ಮಾಡುತ್ತವೆ. ಆದುದರಿಂದ ನೀವು ಅವುಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ." (ಕಿಶ್ತೀ ನೂಹ್ - 1902)

ಅನೇಕ ಸಮಾಜಗಳಲ್ಲಿ ಮದ್ಯಪಾನವು ಜನರ ಆಹಾರದ ಪ್ರಧಾನ ಘಟಕವಾಗಿ ಹೆಚ್ಚು ಹೆಚ್ಚಾಗಿ, ಮುಖ್ಯವಾಗಿ ಯುವಜನರಿಂದ ಬಳಸಲ್ಪಡುತ್ತದೆ. ಸಾಮಾಜಿಕ ಔತಣಕೂಟಗಳಲ್ಲಿ ಮತ್ತು ಇತರ ಸಮಾರಂಭಗಳಲ್ಲಿ ಅದು ಅನಿವಾರ್ಯವಾದ ಒಂದು ಆಹಾರ ಘಟಕವಾಗಿ ಉಪಯೋಗಿಸಲ್ಪಡುತ್ತದೆ. ಯಾವುದೇ ಸಾಮಾಜಿಕ ಸಮಾರಂಭವು ಮದ್ಯವನ್ನು ಅದರ ಆತ್ಮೀಯ ಸಂಗಾತಿಯನ್ನಾಗಿ ಮಾಡಿಕೊಳ್ಳದೆ ಪೂರ್ಣವಾಗಲಾರದೆಂದು ತೋರುತ್ತದೆ.

ವಾರಾಂತ್ಯದಲ್ಲಿ ಕೆಲವು ಜನರ ಮತ್ತು ವಿಶಿಷ್ಟವಾಗಿ ಯುವಕರ ಉದ್ದೇಶ ಲಕ್ಷ್ಯವು ವಿರಾಮವನ್ನು ಅನುಭವಿಸುವುದು ಎಂಬ ಹಿಂದಿನ ಕಾಲದ ರೂಢಿಗೆ ಪ್ರತಿಯಾಗಿ "ಹೊರಗೆ ಹೋಗಿ ಮದ್ಯಪಾನದಿಂದ ಮತ್ತನಾಗುವುದು" ಆಗಿದೆ. ಇದರ ಅರ್ಥ ಮಿತಿಮೀರಿದ ಮದ್ಯಪಾನ ಮಾಡಿ ಪ್ರಜ್ಞೆಯನ್ನೂ ಶಿಷ್ಟಾಚಾರವನ್ನೂ ನಾಚಿಕೆಯನ್ನೂ ಕಳೆದುಕೊಳ್ಳುವುದಾಗಿದೆ.

ದಿ ಇಂಡಿಪೆಂಡೆಂಟ್ ಪತ್ರಿಕೆಯ 2-11-2005ರ ಸಂಚಿಕೆಯಲ್ಲಿ ಹೀಗೆ ಬರೆಯಲಾಗಿದೆ:

"ಬಹುತೇಕ ಜನರು ಮದ್ಯಪಾನ ಮಾಡುತ್ತಾರೆ ಮತ್ತು ಅಂತಹ ಜನರಲ್ಲಿ ಹೆಚ್ಚು ಹೆಚ್ಚಾಗಿ ಜನರು ಮದ್ಯವ್ಯಸನಿಗಳಾಗುತ್ತಾರೆ. ಇಂಗ್ಲೆಂಡಿನ 1.1 ಮಿಲಿಯನ್ ವಯಸ್ಕರು ಮದ್ಯಪಾನದ ಅವಲಂಬನೆಯಿಂದ ಪೀಡಿತರಾಗಿದ್ದಾರೆ."

ಮದ್ಯಪಾನವು ಮದ್ಯಪಾನಿಯನ್ನು ಮಾತ್ರವಲ್ಲ ಅವನ ಕುಟುಂಬವನ್ನೂ ನಾಶಮಾಡುತ್ತದೆ. ಅವರ ಸಂಪತ್ತನ್ನೂ ಅವರ ಶಾರೀರಿಕ ಮತ್ತು ಮಾನಸಿಕ ಆರೋಗ್ಯವನ್ನೂ ಅದು ನಾಶಮಾಡುತ್ತದೆಯಲ್ಲದೆ ಕೊನೆಗೆ ಅದು ಸಮಾಜಕ್ಕೆ ಸಹ ಹಾನಿಕರವಾಗುತ್ತದೆ. ಮದ್ಯಪಾನದ ಕಾರಣದಿಂದ ನೈತಿಕತೆ ಮತ್ತು ಜವಾಬ್ದಾರಿಯ ಪ್ರಜ್ಞೆಯು ಮದ್ಯಪಾನಿಯ ಮೇಲೆ ಯಾವುದೇ ಪ್ರಭಾವ ಬೀರುವುದನ್ನು ತಡೆಯುತ್ತದೆ ಎಂದು ನಿಸ್ಸಂಶಯವಾಗಿ ಸಾಬೀತಾಗಿದೆ. ನಿಷ್ಕರುಣ ಅಪರಾಧಗಳು ಮದ್ಯಪಾನಿಗಳಿಂದ ನಡೆಸಲ್ಪಡುತ್ತವೆ. ಕಳವು, ದರೋಡೆ, ಹಿಂಸಾಚಾರ, ಗೃಹಗಳಲ್ಲಿ ಹಿಂಸೆ, ಮಕ್ಕಳ ಮೇಲೆ ಅತ್ಯಾಚಾರ, ಲೈಂಗಿಕ ಬಲಾತ್ಕಾರ, ಆತ್ಮಹತ್ಯೆಗಳು, ಅಪಾಯಕರವಾಗಿ ವಾಹನ ಚಲಾವಣೆ ಮಾಡಿ ಅಫಘಾತಗಳು ಇವುಗಳಲ್ಲಿ ಕೆಲವು ಆಗಿವೆ.

ಬ್ರಿಟಿಷ್ ಕ್ರೈಮ್ ಸರ್ವೇ 2004/2005 ಹೀಗೆ ವರದಿ ಮಾಡಿದೆ: ಎಲ್ಲಾ ಹಿಂಸಾಚಾರದ ಅಪರಾಧಗಳಲ್ಲಿ ಶೇಕಡಾ 48 ಮತ್ತು ಅಪರಿಚಿತರ ಮೇಲೆ ಹಿಂಸಾಚಾರ ಕೃತ್ಯಗಳಲ್ಲಿ ಶೇಕಡಾ 60 ಅಪರಾಧಿಗಳು ಮದ್ಯಪಾನ ಮಾಡಿದವರಾಗಿದ್ದರು.

ಆಲ್ಕೊಹಾಲ್ ಸ್ಟಡೀಸ್ ಇನ್ ಯು.ಕೆ. (2006) ಎಂಬ ವರದಿಯು "ಆಲ್ಕೊಹಾಲ್ ಇನ್ ಯುರೋಪ್" ಎಂಬ ಶೀರ್ಷಿಕೆಯಲ್ಲಿ ಹೀಗೆ ಬರೆದಿದೆ:

"ಬ್ರಿಟನ್‌ನಲ್ಲಿರುವ ನಾಲ್ವರಲ್ಲಿ ಒಬ್ಬನು ಮದ್ಯಪಾನ ಮಾಡಲು ಉತ್ಸುಕನಾಗಿರುತ್ತಾನೆ - ಪೂರ್ಣವಾಗಿ ಅಮಲೇರಿದವನಾಗುವ ಏಕಮಾತ್ರ ಉದ್ದೇಶದಿಂದ ಪಾನೋತ್ಸವದಲ್ಲಿ ಭಾಗವಹಿಸುವುದು ಈಗ ಪುರುಷರಿಗೆ ಮಾತ್ರ ಸೀಮಿತವಾಗಿಲ್ಲ. ಹದಿಹರೆಯದ ಹುಡುಗಿಯರೂ ತರುಣಿಯರೂ ಹೊರಗೆ ಹೋಗಿ ಮದ್ಯಪಾನ ಮಾಡಿ ಪುರುಷರಂತೆ ಅಮಲೇರಿದವರಾಗುತ್ತಾರೆ."

ಪಾನೋತ್ಸವಗಳನ್ನು ಮತ್ತು ಮದ್ಯವ್ಯಸನವನ್ನು ನಿಯಂತ್ರಿಸಲು ಬ್ರಿಟಿಷ್ ಸರಕಾರ ಕೈಗೊಂಡ ಕ್ರಮಗಳು, ನನ್ನ ಅಭಿಪ್ರಾಯದಲ್ಲಿ ತಪ್ಪಾಗಿವೆ. ಸರಕಾರದಿಂದ ಪರವಾನಿಗೆಯನ್ನು ಪಡೆದ ಮದ್ಯ ಮಾರಾಟ ಕೇಂದ್ರಗಳು ಮದ್ಯ ಮಾರಾಟ ಮಾಡುವ ಕಾಲವನ್ನು ಅದು ವರ್ಧಿಸಿದೆ. ಕೆಲವು ಪ್ರದೇಶಗಳಲ್ಲಿ 24 ಗಂಟೆಗಳಲ್ಲೂ ಮದ್ಯ ಮಾರಾಟ ಮಾಡಬಹುದಾಗಿದೆ.

ಈ ಬಗ್ಗೆ ಇಸ್ಲಾಮ್ ಧರ್ಮದ ಉಪದೇಶಗಳು ಪರಿಪೂರ್ಣ ಪರಿಹಾರ ಸೂಚಿಸಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಅವರು ನಿನ್ನೊಡನೆ ಮದ್ಯ ಮತ್ತು ಜೂಜಾಟದ ಬಗ್ಗೆ ಕೇಳುತ್ತಾರೆ. ಹೇಳು: ಅವೆರಡರಲ್ಲೂ ದೊಡ್ಡ ಪಾಪ (ದೋಷ)ವೂ ಜನರಿಗೆ (ಕೆಲವು) ಪ್ರಯೋಜನಗಳೂ ಇವೆ. ಆದರೆ ಅವುಗಳ ದೋಷವು ಗುಣಕ್ಕಿಂತ ಬಲು ಹೆಚ್ಚು."

(ಪವಿತ್ರ ಖುರ್‌ಆನ್ 2 : 220)

ಅನಸ್‌ರವರು[ರ] ಹೀಗೆ ವರದಿ ಮಾಡಿರುವರು. ಮುಹಮ್ಮದ್ ಪೈಗಂಬರರು[ಸ] ಹೇಳಿದರು:

"ಮದ್ಯಕ್ಕೆ ಸಂಬಂಧಿಸಿ ಕಾರ್ಯನಿರತರಾಗುವ ಹತ್ತು ಗುಂಪುಗಳ ಮೇಲೆ ಅಲ್ಲಾಹನ ಶಾಪವು ಬಂದೆರಗುತ್ತದೆ. ಮದ್ಯವನ್ನು ಭಟ್ಟಿ ಇಳಿಸುವವನ ಮೇಲೆ, ಯಾರಿಗಾಗಿ ಮದ್ಯವನ್ನು ಭಟ್ಟಿ ಇಳಿಸಲಾಯಿತೋ ಅವನ ಮೇಲೆ, ಅದನ್ನು ಕುಡಿಯುವನ ಮೇಲೆ, ಅದನ್ನು ಸಾಗಿಸುವವನ ಮೇಲೆ, ಯಾರಿಗಾಗಿ ಅದನ್ನು ಸಾಗಿಸಲಾಯಿತೋ ಅವನ ಮೇಲೆ, ಅದನ್ನು ಹೊಯ್ದು ಕೊಡುವವನ ಮೇಲೆ, ಅದನ್ನು ಮಾರುವವನ ಮೇಲೆ, ಅದರಿಂದ ದೊರಕುವ ಹಣವನ್ನು ಬಳಸುವವನ ಮೇಲೆ, ಅದನ್ನು ಕೊಂಡುಕೊಳ್ಳುವವನ ಮೇಲೆ ಮತ್ತು ಅದನ್ನು ಬೇರೆಯವನಿಗಾಗಿ ಖರೀದಿಸುವವನ ಮೇಲೆ." (ಇಬ್ನು ಮಾಜ: ಸಂಪುಟ - 3, ಅಧ್ಯಾಯ 30, ಹದೀಸು ಕ್ರಮಾಂಕ - 3380))

ಹಝ್‌ರತ್ ಮುಹಮ್ಮದ್ ಪೈಗಂಬರರು[ಸ] ಹೀಗೆಯೂ ಹೇಳಿದರು:

"ಮದ್ಯವು ಎಲ್ಲಾ ಕೆಡುಕುಗಳ ಮಾತೆಯಾಗಿದೆ. ಅದು ಅತ್ಯಂತ ನಾಚಿಕೆಗೇಡಿನ ಕೆಡುಕಾಗಿದೆ." (ಇಬ್ನು ಮಾಜ: ಸಂಪುಟ 3, ಅಧ್ಯಾಯ 30 ಹದೀಸು ಕ್ರಮಾಂಕ - 3371)

ನಾವು ನಮ್ಮ ಮಕ್ಕಳಿಗೆ ಮದ್ಯದ ಕೆಡುಕುಗಳನ್ನು ವಿವರಿಸಿ ಕೊಡಬೇಕು. ನಾವು ಮದ್ಯ ಸೇವನೆ ವರ್ಜಿಸಿ ಅವರಿಗೆ ಮಾದರಿಯಾಗಬೇಕು.

ನಮ್ಮ ಮುಸ್ಲಿಮೇತರ ಸ್ನೇಹಿತರು ಪಬ್‌ಗಳಿಗೂ ಬಾರ್‌ಗಳಿಗೂ ಆಗಾಗ ಹೋಗುತ್ತಿರುವರಾದರೂ ನಾವು ಅವುಗಳಿಗೆ ಎಂದೂ ಹೋಗಬಾರದು. ನಾವು ನಮ್ಮ ಸ್ನೇಹಿತರಿಗೆ ಯಾವಾಗಲೂ ಮದ್ಯರಹಿತ ಪಾನೀಯಗಳನ್ನು ಕೊಡಬೇಕು.

ಇನ್ನು ಮುಂದೆ ಜುಗಾರಿ ಬಗ್ಗೆ ಗಮನಿಸುವ.

## ಜುಗಾರಿ

ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಪ್ರಕಟವಾಗಿರುವ ಇಂಡಿಪೆಂಡೆಂಟ್ ವರ್ತಮಾನ ಪತ್ರಿಕೆಯ ದಿನಾಂಕ 25-5-2006ರ ಸಂಚಿಕೆಯಲ್ಲಿ ಜುಗಾರಿ ಬಗ್ಗೆ ಆಸಕ್ತಿದಾಯಕ ಹಾಗೂ ಆಘಾತಕರ ಅಂಕಿ ಅಂಶಗಳನ್ನು ಪ್ರಕಟಿಸಲಾಗಿದೆ. ಯುನೈಟೆಡ್ ಕಿಂಗ್‌ಡಮ್ 2005ರಲ್ಲಿ 50 ಬಿಲಿಯನ್ ಪೌಂಡ್‌ಗಳನ್ನು ಜುಗಾರಿಗಾಗಿ ಖರ್ಚುಮಾಡಿತು. 2001ರಿಂದ 700% ಹೆಚ್ಚು ಹಣ ಜುಗಾರಿಗಾಗಿ ಖರ್ಚು ಮಾಡಲಾಗುತ್ತಿದೆ. ಹೆಚ್ಚು ಭಯಾನಕವಾದ ಸಂಗತಿ ಏನೆಂದರೆ, : ಓನ್‌ಲೈನ್ (ಇಂಟರ್‌ನೆಟ್) ಬೆಟ್ಟಿಂಗ್ 23,000% ಹೆಚ್ಚಾಗಿದೆ. 3,70,000 ಜನರು ಜುಗಾರಿ ವ್ಯಸನಿಗಳಾಗಿದ್ದು ಅವರ ಸಂಖ್ಯೆ ಏಳು ಲಕ್ಷಕ್ಕೆ ಮುಂದಿನ ಐದು ವರ್ಷಗಳಲ್ಲಿ ಏರಲಿದೆ.

ಜುಗಾರಿ ವ್ಯಸನಿಗಳು ಹೆಚ್ಚಾಗುತ್ತಾ ಇದ್ದು ಅವರ ಕುಟುಂಬ ಜೀವಿತವು ನಾಶವಾಗುತ್ತಾ ಇದ್ದರೂ ಬ್ರಿಟಿಷ್ ಸರಕಾರ ಅದನ್ನು ಕಡೆಗಣಿಸಿ ಹೆಚ್ಚಿನ ತೆರಿಗೆಯ ಸಂಗ್ರಹದ ವ್ಯಾಮೋಹದಿಂದ ಈ ವರ್ಷ (2006ರಲ್ಲಿ) ಗ್ಯಾಂಬ್‌ಲಿಂಗ್ ಆ್ಯಕ್ಟ್ ಜಾರಿಗೊಳಿಸಿತು. ಎಂಟು ಚಿಕ್ಕ, ಎಂಟು ದೊಡ್ಡ ಮತ್ತು ಒಂದು ಪ್ರಾದೇಶಿಕ ಸುಪರ್ ಕ್ಯಾಸಿನೋ (ಜುಗಾರಿ ಆಟದ ಕೇಂದ್ರಗಳು) ಈ ಕಾನೂನಿನ ಬೆಂಬಲದಿಂದ ನಿರ್ಮಿಸಲ್ಪಡುವುವು.

ನಮ್ಮ ದೇಶದ ಎಲ್ಲಾ ನಿವಾಸಿಗಳನ್ನು ಜುಗಾರಿ ಆಡಲು ಪ್ರೋತ್ಸಾಹಿಸಲಾಗುತ್ತಿದ್ದು ಪ್ರತಿವಾರ ನ್ಯಾಷನಲ್ ಲಾಟರಿಯ ಬಹುಮಾನ ವಿತರಣೆ ನಡೆಸಲಾಗುತ್ತಿದ್ದು ಜುಗಾರಿ ಆಡುವವರು ದಿಢೀರ್ ಶ್ರೀಮಂತರಾಗಲು ಆಕರ್ಷಿಸಲ್ಪಡುತ್ತಿದ್ದಾರೆ. ಇದರ ಫಲಸ್ವರೂಪವಾಗಿ ದಾರಿದ್ರ್ಯದ ಪ್ರಪಾತದಿಂದ ಮೇಲೆ ಏರಿಹೋಗಲು ಬಯಸುವವರು ಬಹಳ ಹಣವನ್ನು ಲಾಟರಿಗಾಗಿ ವಿನಿಯೋಗಿಸುತ್ತಾರೆ. ಆದರೆ ಅವರ ಕನಸುಗಳು ಈಡೇರುವುದಿಲ್ಲ. ಅವರು ನಿರಾಶೆಹೊಂದಿ ಇನ್ನಷ್ಟು ದಾರಿದ್ರ್ಯಕ್ಕೆ ತಳ್ಳಲ್ಪಡುತ್ತಾರೆ.

ಮಿಸ್ಟರ್ ಮಾರ್ಕ್ ಗ್ರಿಫಿತ್ಸ್ (ಪ್ರೊಫೆಸರ್ ಆಫ್ ಗ್ಯಾಂಬ್ಲಿಂಗ್ - ನಾಟಿಂಗ್‌ಹ್ಯಾಮ್ ಟ್ರೆಂಟ್ ಯುನಿವರ್ಸಿಟಿ) ಹೀಗೆ ಹೇಳುತ್ತಾರೆ:

"ಜುಗಾರಿಯು ಸ್ವಯಂಪ್ರೇರಿತರಾಗಿ ಜನರು ನೀಡುವ ತೆರಿಗೆಯಾಗಿದೆ. ಆದರೆ ಜನರು ಅದನ್ನು ಹಾಗೆ ಕಾಣುವುದಿಲ್ಲ. ಜುಗಾರಿಯನ್ನು ವಿಸ್ತೃತವಾಗುವಂತೆ ಮಾಡಿ ಸರಕಾರವು ಹೆಚ್ಚು ತೆರಿಗೆ ಗಳಿಸಬಹುದು. ಅದನ್ನು ಮುಕ್ತಗೊಳಿಸಲು ಸಾರ್ವಜನಿಕ ಒತ್ತಡ ಪ್ರಾರಂಭವಾಗಿಲ್ಲ. ಅದಕ್ಕಾಗಿ ಒತ್ತಡ ಹೇರುವವರು ಜುಗಾರಿ ಸಂಘಟಕರು ಮತ್ತು ಸರಕಾರ. ಆದರೆ ನೀವು ಜುಗಾರಿ ಆಟವನ್ನು ರದ್ದುಗೊಳಿಸಿದರೆ ತೀವ್ರ ಪ್ರತಿಭಟನೆಯುಂಟಾಗುವುದು."

ಅನೇಕ ಜನರಿಗೆ ಜುಗಾರಿ ಆಡುವುದು ಒಂದು ಚಟವಾಗಿದೆ. ಇಂಟರ್‌ನೆಟ್ ಮೂಲಕ ಸುಲಭವಾಗಿ ಜುಗಾರಿ ಆಡಬಹುದಾದ ಕಾರಣ ಕೆಲವು ನಿರ್ದಿಷ್ಟ ಜನರಿಗೆ ಅದು ಸುಲಭಸಾಧ್ಯವಾಗುವಂತೆ ಮಾಡಿದೆ. ಒಂದು ಕಂಪ್ಯೂಟರ್ ಬಳಸಿ ಜುಗಾರಿ ಆಟದ ವೆಬ್‌ಸೈಟಿಗೆ ಸಂಪರ್ಕಹೊಂದಿರುವುದು ಸುಲಭಕರವಾಗಿದೆ. ಎಲ್ಲಾ ಕಡೆಗಳಲ್ಲಿ ಇಂಟರ್‌ನೆಟ್ ಬಳಕೆಗಾರರ ಕಥೆ ಹೇಗಿದೆ ಎಂದರೆ, ಅವರು ಮೊದಲು ಚಿಕ್ಕ ಚಿಕ್ಕ ಸಂಖ್ಯೆಯ ಹಣವನ್ನು ಜುಗಾರಿ ಆಟಕ್ಕಾಗಿ ಬಳಸಿದರು. ಕೊನೆಗೆ ಅವರು ತಮ್ಮ ಮನೆಗಳನ್ನು ಸಹ ಕಳೆದುಕೊಂಡರು. ಅವರು ತಮಗೆ ಮೊದಲು ಸಂಭವಿಸಿದ ನಷ್ಟವನ್ನು ಭರ್ತಿಮಾಡಲು ಪುನಃ ಪುನಃ ಜುಗಾರಿ ಆಟವಾಡಿದುದರಿಂದ ಹೀಗೆ ಸಂಭವಿಸಿತು. ಕೆಲವರು ತಮ್ಮ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಜುಗಾರಿ ಆಡುವುದರಿಂದ ಅವರು ಬಹಳ ಹೆಚ್ಚಿನ ಸಂಖ್ಯೆಯ ಹಣದ ಸಾಲಗಾರರಾಗುತ್ತಾರೆ. ಇದರ ಫಲಸ್ವರೂಪವಾಗಿ ಕಠಿಣ ಆರ್ಥಿಕ ಕಷ್ಟಗಳು ಉಂಟಾಗುತ್ತವೆ, ದಿವಾಳಿಕೋರರಾಗಬೇಕಾಗುತ್ತದೆ, ದಾಂಪತ್ಯ ಮತ್ತು ಕೌಟುಂಬಿಕ ಜೀವಿತದಲ್ಲಿ ಕಲಹಗಳು ತಲೆದೋರುತ್ತವೆ ಮತ್ತು ದುರದೃಷ್ಟಕರವಾಗಿ ಕೆಲವು ಸಂದರ್ಭಗಳಲ್ಲಿ ಆತ್ಮ ಹತ್ಯೆಗಳು ಸಹ ಸಂಭವಿಸುತ್ತವೆ.

ಇಸ್ಲಾಮ್ ಈ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತದೆ. ಮದ್ಯ, ಮಾದಕ ದ್ರವ್ಯಗಳು ಮತ್ತು ಜುಗಾರಿ ಆಟಗಳ ಹೆಚ್ಚುತ್ತಿರುವ ಹಾವಳಿಗಳ ಕುರಿತು ಇಸ್ಲಾಮ್ ಧರ್ಮವು ಹೀಗೆ ಆಜ್ಞಾಪಿಸುತ್ತದೆ "ನೀವು ರಕ್ಷಿಸಲ್ಪಡಲಿಕ್ಕಾಗಿ ಅವುಗಳನ್ನು ವರ್ಜಿಸಿರಿ."

ಈ ಹಾವಳಿಯಿಂದ ಬಿಡುಗಡೆಹೊಂದಲು ಬೇರೆ ಯಾವ ದಾರಿಯೂ ಇಲ್ಲ. ಕುಟುಂಬ ವ್ಯವಸ್ಥೆಯನ್ನು ಕಾಪಾಡಲು ಇಸ್ಲಾಮ್ ಧರ್ಮದ ಉಪದೇಶಗಳು ಬಹಳ ಪ್ರಮುಖ ಪಾತ್ರವಹಿಸುತ್ತವೆ.

ಈ ಅಪಾಯಕರ ಕೆಡುಕುಗಳು ನಮ್ಮನ್ನು ಅವುಗಳ ಪ್ರಾಪಂಚಿಕ ಲಾಭಗಳ ಕಾರಣದಿಂದ ಆಕರ್ಷಿಸುತ್ತವೆ. ಕೊನೆಗೆ ನಾವು ಚಟಗಳಿಗೆ ದಾಸರಾಗುತ್ತೇವೆ ಮತ್ತು ಅಂತಹ ಕೆಡುಕುಗಳಲ್ಲಿ ಭಾಗವಹಿಸುವುದರ ಕುರಿತು ನಮ್ಮನ್ನೇ ನಾವು ಸಮರ್ಥಿಸಿಕೊಳ್ಳುತ್ತೇವೆ. ಇದು ಬಹಳ ಜಾರುವ ಒಂದು ಇಳಿಜಾರವಾಗಿದೆ. ನಾವು ಪಾರಂಭ ಘಟ್ಟದಲ್ಲಿಯೇ ಅದರ ಬಗ್ಗೆ ಜಾಗರೂಕರಾಗಿರಬೇಕಾಗಿದೆ.

ಪತಿ ಮತ್ತು ಪತ್ನಿಯ ಮಧ್ಯೆ ಹಣಕಾಸಿನ ವ್ಯವಹಾರದಲ್ಲಿ ಪಾರದರ್ಶಕತೆ, ಅಧ್ಯಯನದ ಬಗ್ಗೆ ಆಸಕ್ತಿ ಹೊಂದುವುದು, ಕೈ ಕಸುಬುಗಳ ಹವ್ಯಾಸ, ಉತ್ತಮ ಉದ್ದೇಶಗಳಿಗಾಗಿ ಖರ್ಚು ಮಾಡುವುದು - ಇವುಗಳು ಮಾನವರ ನೈತಿಕ ಮತ್ತು ಆಧ್ಯಾತ್ಮಿಕ ಆರೋಗ್ಯಕ್ಕೆ ಉತ್ತಮ ಪರಿಹಾರ ಮಾರ್ಗಗಳಾಗಿವೆ.

## ಇಂಟರ್‌ನೆಟ್

ಇಂಟರ್‌ನೆಟ್‌ಗೆ ಸಂಬಂಧಿಸಿದ ಅನೇಕ ಅಪಾಯಗಳ ಬಗ್ಗೆ ನಾವೆಲ್ಲರೂ ಆಲಿಸಿದ್ದೇವೆ. ಕೆಲವು ಅಪಾಯಗಳ ಬಗ್ಗೆ ಉತ್ಪ್ರೇಕ್ಷೆಯಿಂದ ವಿವರಿಸಲಾಗುತ್ತಿದೆ ಯಾದರೂ ಒಂದು ಸಂಗತಿ ಸ್ಪಷ್ಟವಾಗುತ್ತದೆ: ಒಂದು ಕಂಪ್ಯೂಟರ್ ಮತ್ತು ಅದರ ನಿರ್ವಾಹಕನು ಇಂಟರ್‌ನೆಟ್ ಸಂಪರ್ಕ ಪಡೆದಿದ್ದರೆ ಅವನ ಆತ್ಮಸಾಕ್ಷಿ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ನಿಜವಾದ ಆಕ್ರಮಣಗಳಿಗೆ ಸುಲಭವಾಗಿ ಈಡಾಗುತ್ತದೆ. ಜ್ಞಾನವರ್ಧನೆಗೆ ಇಂಟರ್‌ನೆಟ್ ಉಪಕಾರ ಪ್ರದವಾದ ಉಪಕರಣವಾಗಿದೆಯಾದರೂ ಕೆಲವು ಜನರು ತಮಗೆ ಕಂಪ್ಯೂಟರ್ ಬಗ್ಗೆ ದೊರೆತ ಜ್ಞಾನವನ್ನು ಇತರರ ವ್ಯವಹಾರಗಳನ್ನು ಅನೈತಿಕವಾಗಿ ಮತ್ತು ಕಾನೂನಿಗೆ ವಿರುದ್ಧವಾಗಿ ತಿಳಿದುಕೊಳ್ಳಲು ಬಳಸುತ್ತಾರೆ. ಈ ಕಾರಣದಿಂದ ಇತರ ಇಂಟರ್‌ನೆಟ್ ಬಳಕೆದಾರರಿಗೆ ಜೀವಿತವನ್ನು ಕಷ್ಟಕರವನ್ನಾಗಿ ಮಾಡುತ್ತಾರೆ. ಇಂಟರ್‌ನೆಟ್ ವ್ಯವಸ್ಥೆಯನ್ನು ಮೇಲ್ವಿಚಾರಣೆ ಮಾಡುವ ಸರಿಯಾದ ಮತ್ತು ಸತ್ಯವಾದ ಯಾವುದೇ ಪೋಲೀಸು ವ್ಯವಸ್ಥೆಯು ಇಲ್ಲವಾದುದರಿಂದ ಅದನ್ನು ದುರುಪಯೋಗಪಡಿಸಿಕೊಳ್ಳಲು ಭ್ರಷ್ಟ ಕಂಪೆನಿಗಳಿಗೆ ಮತ್ತು ವ್ಯಕ್ತಿಗಳಿಗೆ ಸಾಧ್ಯವಿರುವುದರಿಂದ ಅವರು ವಿಪುಲ ಸಂಪತ್ತನ್ನು ಅಥವಾ ಜ್ಞಾನವನ್ನು ಗಳಿಸಲು ಅದನ್ನು ಬಳಸಿ ಅವರು ಉದ್ದೇಶಿಸುವ ಜನರ ನೈತಿಕ ಆರೋಗ್ಯವನ್ನು ಅಥವಾ ಅವರನ್ನು ಘಾಸಿಗೊಳಿಸುವುದನ್ನು ಕಡೆಗಣಿಸಿ ಕಾರ್ಯಪ್ರವೃತ್ತರಾಗುತ್ತಾರೆ.

ಇಂಟರ್‌ನೆಟನ್ನು ದುರುಪಯೋಗಪಡಿಸಲು ಅಪರಾಧಿಗಳಿಗೂ ಸಾಧ್ಯವಿದೆ. ಅದರಲ್ಲಿ ಸಲಿಂಗ ಕಾಮ ಮತ್ತು ವಿಕೃತ ಕಾಮಗಳ ದೃಶ್ಯ ವಿವರಣೆಗಳಿದ್ದು ಅವುಗಳಿಂದ ತರುಣರನ್ನು ಪಾಶದಿಂದ ಬಂಧಿಸಲು ಬಳಸಲಾಗುತ್ತಿದೆ ಮತ್ತು ಚ್ಯಾಟ್‌ರೂಮ್‌ಗಳಲ್ಲಿ ತರುಣರು ಅವುಗಳನ್ನು ನೋಡುತ್ತಾರೆ. ಇಂಟರ್‌ನೆಟ್‌ನ ಅನಾಮಕತೆಯಿಂದ ಚ್ಯಾಟ್‌ರೂಮಿನಲ್ಲಿ ಭಾಗವಹಿಸುವವರು ತಮಗೆ ಇಷ್ಟ ಬಂದಂತೆ ಮಾತನಾಡಲು ಹೆಚ್ಚು ಅನುಕೂಲ ಪಡೆಯುತ್ತಾರೆ ಮತ್ತು ಅವರ ಕುರಿತು ಯಾವುದೇ ತೀರ್ಮಾನ ಅನ್ಯರು ಕೈಗೊಳ್ಳುವ ಭಯವಿರುವುದಿಲ್ಲ.

ಇಂಟರ್‌ನೆಟ್ ಬಳಸುವ ಬಹುತೇಕ ಮಂದಿ ನಿಜವಾಗಿಯೂ ತಮ್ಮ ಸಮವಯಸ್ಕರನ್ನು ಮತ್ತು ಸಮಾನ ಅಭಿರುಚಿ ಹೊಂದಿದವರನ್ನು ಕಂಡುಹಿಡಿದು ಮಾತನಾಡಲು ಬಯಸುವವರಾಗಿರಬಹುದು. ಆದರೆ ಆ ಬಗ್ಗೆ ಅವರು ಹೇಗೆ ಹೇಳುವುದು? ಒಬ್ಬನ ನಿಜವಾದ ಪರಿಚಯ ಇಂಟರ್‌ನೆಟ್‌ನಲ್ಲಿ ಎಂದೂ ಪ್ರಕಟವಾಗುವುದಿಲ್ಲ. ಆದುದರಿಂದ ಅವನ ಸಂಕೋಚ ಮನೋಭಾವ ಮತ್ತು ಸಾಮಾಜಿಕ ಪ್ರಜ್ಞೆ ತಗ್ಗುತ್ತದೆ. ಚ್ಯಾಟ್ ರೂಮ್‌ಗಳ ಮಾತುಕತೆಗಳು ಮತ್ತು ಚರ್ಚಿಸುವ ವಿಷಯಗಳು ವಾಡಿಕೆಯ ಮಾತುಕತೆಗಳಿಗಿಂತ ಮತ್ತು ಚರ್ಚಿಸುವ ವಿಷಯಗಳಿಗಿಂತ ಬಹಳ ಭಿನ್ನವಾಗಿರುತ್ತವೆ ಮತ್ತು ಒಬ್ಬನ ಮುಖವನ್ನು ನೋಡಿ

ಎಂದೂ ಮಾತನಾಡಲಾರದಂತಹ ವಿಷಯಗಳನ್ನು ಒಳಗೊಂಡಿರುತ್ತದೆ. ಚ್ಯಾಟ್ ರೂಮ್‌ಗಳ ಚರ್ಚೆಗಳು ಹಿಂಸೆಯನ್ನು ಪ್ರಚೋದಿಸುವ, ನಿಂದಿಸುವ ಮತ್ತು ಇತರರ ವಿರುದ್ಧ ದ್ವೇಷವನ್ನುಂಟುಮಾಡುವ ವಿಷಯಗಳಾಗಲೂಬಹುದು.

ಇಂಟರ್‌ನೆಟ್ ಮಾರುಕಟ್ಟೆಗೆ, ಸಂಗೀತಕ್ಕೆ, ಆಟಗಳಿಗೆ, ಅಶ್ಲೀಲ ಚಿತ್ರಗಳಿಗೆ, ಸಿನಿಮಾ ಚಿತ್ರಗಳಿಗೆ ಅನಿಯಂತ್ರಿತ ಸಂಪರ್ಕ ಕಲ್ಪಿಸುತ್ತದೆ. ಚ್ಯಾಟ್ ರೂಮ್‌ಗಳಲ್ಲಿ ಗಂಟೆಗಟ್ಟಲೆ ಕಾಲ ಇವುಗಳನ್ನು ಮಾಡುತ್ತಾ ಕಾಲ ಕಳೆಯಬಹುದು. ಇವುಗಳು ನಿಷ್ಪ್ರಯೋಜಕ ಹವ್ಯಾಸಗಳಾಗಿದ್ದು ಆರೋಗ್ಯಪೂರ್ಣ ಸಾಮಾನ್ಯ ಜೀವಿತದಿಂದ ಗಮನ ತಿರುಗಿಸುವಂತೆ ಮಾಡುತ್ತದೆ. ಅಲ್ಲದೆ ಅದೊಂದು ಚಟವೂ ಆಗುತ್ತದೆ.

ಇಂಟರ್‌ನೆಟ್ ಉಪಯೋಗ ಅದೆಷ್ಟು ದೋಷರಹಿತ ಎಂದು ತೋರಿಕೆಯಾದರೂ ಅದೊಂದು ಚಟವಾಗಬಲ್ಲುದು ಮತ್ತು ಅದನ್ನು ಬಳಸುವವನನ್ನು ಸಮತೋಲನದ ಜೀವಿತದಿಂದ ತಳ್ಳಲೂಬಹುದಾಗಿದೆ.

ವ್ಯಕ್ತಿಯ ಏಕಾಂತದ ಹಕ್ಕಿಗೆ ಭಂಗಪಡಿಸದೆ ಒಬ್ಬನು ಇಂಟರ್‌ನೆಟನ್ನು ಹೇಗೆ ಬಳಸುತ್ತಾನೆ ಎಂಬುದರ ಕುರಿತು ಮೇಲ್ವಿಚಾರಣೆ ನಡೆಸುವುದು ಹೆಚ್ಚು ಹೆಚ್ಚಾಗಿ ಪಂಥಾಹ್ವಾನಕರವಾಗಿ ಪರಿಣಮಿಸುತ್ತಾ ಇದೆ. ಇಂಟರ್‌ನೆಟ್ ಬಳಸುವ ಮಕ್ಕಳ ಹೆತ್ತವರು ತಮ್ಮ ಮಕ್ಕಳು ಅವರಿಗೆ ಹಾನಿಯನ್ನುಂಟು ಮಾಡುವವರ ಸಂಪರ್ಕವನ್ನು ಪಡೆಯಬಹುದೆಂದು ಭಯಪಡುತ್ತಾ ಇರುತ್ತಾರೆ. ಮಕ್ಕಳು ಇಂಟರ್‌ನೆಟನ್ನು ಹೆಚ್ಚು ಹೆಚ್ಚಾಗಿ ಬಳಕೆ ಮಾಡಿದರೆ ಅವರು ನಗ್ನ ಚಿತ್ರಗಳು, ಜಾತೀಯ ವಿದ್ವೇಷ ಮತ್ತು ಹಿಂಸಾಚಾರ ಮೊದಲಾದ ಅನುಯೋಜ್ಯವಲ್ಲದ ವಿಷಯಗಳ ಸಂಪರ್ಕಕ್ಕೆ ಬರುತ್ತಾರೆ.

ದೈನಂದಿನ ಜೀವಿತದಲ್ಲಿ ಒಂದು ಮಗುವಿನ ಸಂರಕ್ಷಣೆಯು ಕಷ್ಟಕರವಾಗಿರುವಾಗ ಇಂಟರ್‌ನೆಟ್ ಹಾಗಿರುವ ವಿಸ್ತೃತ ಕ್ಷೇತ್ರದಲ್ಲಿ ಅವರ ಸಂರಕ್ಷಣೆ ಇನ್ನಷ್ಟು ಕಷ್ಟಕರವಾಗುತ್ತದೆ. ಮಕ್ಕಳು ಇಂಟರ್‌ನೆಟನ್ನು ತಮ್ಮ ವಿದ್ಯಾಭ್ಯಾಸಕ್ಕೆ ಅಗತ್ಯವಿರುವ ಜ್ಞಾನವನ್ನು ಗಳಿಸಲು ಮತ್ತು ತಮ್ಮ ಸ್ನೇಹಿತರೊಂದಿಗೆ ಮಾತ್ರ ಮಾತನಾಡಲು ಬಳಸುವಂತೆ ನಿಯಂತ್ರಿಸಬೇಕು. ಕಂಪ್ಯೂಟರನ್ನು ಮಕ್ಕಳ ತಂದೆ ತಾಯಂದಿರು ತಮ್ಮ ನಿಯಂತ್ರಣದಲ್ಲಿರುವ ಕೋಣೆಯಲ್ಲಿರಿಸಬೇಕು. ಮಕ್ಕಳು ಜ್ಞಾನವರ್ಧನೆಗೆ ಪುಸ್ತಕಗಳನ್ನು ಮತ್ತು ಇತರ ಸಾಹಿತ್ಯಗಳನ್ನು ಹೆಚ್ಚು ಹೆಚ್ಚಾಗಿ ಬಳಸಲು ಪ್ರೋತ್ಸಾಹಿಸಬೇಕು.

ನಾನು ಚರ್ಚಿಸಲು ಬಯಸುವ ಐದನೆಯ ಅಪಾಯ ಪುರುಷರು ಮತ್ತು ಮಹಿಳೆಯರು ಯಾವುದೇ ನಿಯಂತ್ರಣವಿಲ್ಲದೆ ಸಾಮೂಹಿಕವಾಗಿ ಬೆರೆಯುವುದರ ಕುರಿತಾಗಿದೆ.

## ಸ್ತ್ರೀ-ಪುರುಷರ ಅನಿಯಂತ್ರಿತ ಸಾಮೂಹಿಕ ಬೆರೆಯುವಿಕೆ

ಪ್ರಾಪ್ತವಯಸ್ಕರಾದ ಮಹಿಳೆಯರು ಮತ್ತು ಪುರುಷರು ಸಾಮೂಹಿಕವಾಗಿ ಬೆರೆಯುವುದನ್ನು ಇಸ್ಲಾಮ್ ಧರ್ಮದಲ್ಲಿ ನಿಷಿದ್ಧಗೊಳಿಸಲಾಗಿದೆ. ಇದನ್ನು ಮೇಲಿಂದ ಮೇಲೆ ನೋಡಿದರೆ ಕರ್ಕಶ ಆಜ್ಞೆ ಎಂದು ತೋರಬಹುದಾದರೂ ಅದರ ಬಗ್ಗೆ ಪರಿಶೀಲಿಸಿದರೆ ಅನಿಯಂತ್ರಿತ ಬೆರೆಯುವಿಕೆಯ ಕೆಟ್ಟ ಪರಿಣಾಮಗಳು ಗೋಚರಿಸುವುವು ಮತ್ತು ಈ ಆಜ್ಞೆಯು ಬುದ್ಧಿಗೆ ಅನುಯೋಜ್ಯವಾಗಿದೆ ಎಂದು ತಿಳಿಯುವುದು.

ಸ್ತ್ರೀ ಪುರುಷರ ಅನಿಯಂತ್ರಿತ ಬೆರೆಯುವಿಕೆಯ ಕಾರಣದಿಂದ ಉಂಟಾಗಬಹುದಾದ ಅಪರಾಧ ಕೃತ್ಯಗಳು ಇಂದಿನ ಕಾಲದಲ್ಲಿ ಪ್ರಪಂಚದಾದ್ಯಂತ ಹೆಚ್ಚಾಗುತ್ತಾ ಹೋಗುತ್ತಿವೆ ಮತ್ತು ಅದರೊಂದಿಗೆ ನೈತಿಕ ಮೂಲ್ಯಗಳು ಅಧಃಪತನಗೊಳ್ಳುತ್ತಿವೆ. ನೈತಿಕತೆಯು ಅವನತಿಹೊಂದುತ್ತಾ ಇರುವಾಗ ನಾಚಿಕೆಯಿಲ್ಲದಿರುವಿಕೆ ಮತ್ತು ಅನಾಚಾರಗಳು ಹೆಚ್ಚುತ್ತಾ ಹೋಗುತ್ತಿದ್ದು ಅದು ಆಧುನಿಕ ಸಮಾಜಕ್ಕೆ ಹೆಚ್ಚು ಸ್ವೀಕಾರಾರ್ಹವಾಗುತ್ತಾ ಇದೆ.

ಪಾಶ್ಚಿಮಾತ್ಯ ದೇಶಗಳಲ್ಲಿ ಸ್ತ್ರೀ ಪುರುಷರು ಬಹಿರಂಗವಾಗಿ ಅರ್ಧ ನಗ್ನರಾಗಿ ನಡೆಯುತ್ತಾ ಹೋಗುತ್ತಾರೆ, ಎದೆ ಮುಚ್ಚದೆ ಈಜಾಡುತ್ತಾರೆ, ಮದ್ಯ ಕುಡಿದು ಬಾರ್‌ಗಳಲ್ಲಿಯೂ ಕ್ಲಬ್‌ಗಳಲ್ಲಿಯೂ ನೃತ್ಯ ಮಾಡುತ್ತಾರೆ ಮತ್ತು ತಾವು ಇಷ್ಟಪಡುವವರೊಂದಿಗೆ ಲೈಂಗಿಕ ಸಂಬಂಧ ಸಾಂದರ್ಭಿಕವಾಗಿ ಸ್ಥಾಪಿಸುವ ಬಗ್ಗೆ ಸ್ವತಂತ್ರರೆಂದು ಗಣಿಸುತ್ತಾರೆ.

ಅಶ್ಲೀಲ ಸಾಹಿತ್ಯ, ಸೂಳೆಗಾರಿಕೆ, ಹಾದರ, ವಿವಾಹ ವಿಚ್ಛೇದನೆ, ಪಿತೃ ರಹಿತ ಸಂತಾನದ ಕುಟುಂಬ, ಗರ್ಭಪಾತ ಮಾಡುವಿಕೆ, ವಿವಾಹವಾಗದ ಸ್ತ್ರೀ ಪುರುಷರ ಸಹವಾಸ, ಸ್ವವರ್ಗ ರತಿ, ನಿರ್ಲಜ್ಜೆಯ ಪೋಷಾಕು ಮತ್ತು ಮಾತು - ಇವುಗಳು ಇಂದಿನ ಸಮಾಜಕ್ಕೆ ಹಿಂದೆ ಇದ್ದುದಕ್ಕಿಂತ ಹೆಚ್ಚು ಮೆಚ್ಚಿಕೆಯಾಗಿವೆ. ಇದರ ಪರಿಣಾಮವು ಸಮಾಜವನ್ನು ಹಾಳಗೆಡುವುದಾಗಿದೆ.

ನಾವು ಇಂದು ಜೀವಿಸುತ್ತಿರುವ ತಥಾ ಕಥಿತ ಪರ್ಮಿಸ್ಸಿವ್ ಸೊಸೈಟಿ (ಅನುಮೋದಕ ಸಮಾಜ - ಸ್ವತಂತ್ರ ಸಮಾಜ) ಕುಟುಂಬದ ಐಕ್ಯತೆ, ಮಾನವೀಯ ಗೌರವ ಮತ್ತು ಆತ್ಮಾಭಿಮಾನಗಳಿಗೆ ಅತ್ಯಂತ ಹಾನಿಕರವಾಗಿದೆ. ಕುಟುಂಗಳು ಹರಿಹಂಚಾಗುತ್ತಾ ಇವೆ; ರೋಗಗಳು ಹಬ್ಬುತ್ತಾ ಇವೆ; ಜನರ ಸ್ವಭಾವಗುಣಗಳು ವಿಕೃತವಾಗುತ್ತಾ ಇವೆ.

ಇಂದಿನ ಆಧುನಿಕ ಸಮಾಜದ ಕೆಲವು ನಡೆವಳಿಕೆಗಳಿಂದ ಮುಸ್ಲಿಮ್ ಮಹಿಳೆಯರಿಗೆ ಮತ್ತು ಪುರುಷರಿಗೆ ಪರದಾ ಸಂಪ್ರದಾಯವು ಮೆಲ್ಲಮೆಲ್ಲಗೆ ಅಂಗೀಕೃತವಾಗದಿರುವ ಸ್ಥಿತಿಗೆ ತಲಪಿದೆ. ಇಸ್ಲಾಮಿನ ಪರದಾ ಸಂಪ್ರದಾಯದ ಉಪಯುಕ್ತತೆ ಮುಸ್ಲಿಮ್ ಪುರುಷರಿಗೂ ಸ್ತ್ರೀಯರಿಗೂ ಸ್ಪಷ್ಟವಾಗಿ ತಿಳಿಯದಿದ್ದರೆ ಈ ಸಂಪ್ರದಾಯವು ಕಣ್ಮರೆಯಾಗುವುದು.

ಪುರುಷರೂ ಮಹಿಳೆಯರೂ ಮಕ್ಕಳೂ ಸಾಮೂಹಿಕವಾಗಿ ನಮಾಝ್ ಮಾಡುವುದರ ಬಗ್ಗೆ ಕಾಳಜಿ ವಹಿಸಬೇಕಲ್ಲದೆ ಸಾತ್ವಿಕ ಜನರ ಸಹವಾಸದಲ್ಲಿರಲು ನಮ್ಮ ಜಮಾಅತ್ ಏರ್ಪಡಿಸುವ ಸಮಾರಂಭಗಳಲ್ಲಿ ಭಾಗವಹಿಸಲು ನಿಗಾ ವಹಿಸಬೇಕು ಮತ್ತು ಇಸ್ಲಾಮಿಕ ಮೌಲ್ಯಗಳಿಂದ ತಮ್ಮನ್ನು ದೂರಸರಿಸದಿರಲು ಪ್ರಯತ್ನಿಸುತ್ತಾ ಇರಬೇಕು.

ಪುರುಷರು ಮತ್ತು ಮಹಿಳೆಯರು ಒಟ್ಟಿಗೆ ಬೆರೆಯುವುದನ್ನು ಇಸ್ಲಾಮ್ ನಿಷಿದ್ಧಗೊಳಿಸಿದೆ.

ಉಮ್ಮು ಸಲ್ಮಾ(ರ) ವರದಿ ಮಾಡುತ್ತಾರೆ. ಅವರು ಮತ್ತು ಮೈಮೂನ(ರ) (ಇವರಿಬ್ಬರೂ ಪ್ರವಾದಿಯವರ ಪತ್ನಿಯರು) ಪ್ರವಾದಿಯವರೊಂದಿಗೆ ಇದ್ದಾಗ ಉಮ್ಮು ಮಕ್ತೂಮ್‌ರವರ ಕುರುಡನಾದ ಪುತ್ರ ಅಲ್ಲಿಗೆ ಬಂದನು. ಪ್ರವಾದಿಯವರು ತನ್ನ ಪತ್ನಿಯರೊಂದಿಗೆ ಆತನು ಮುಂದೆ ಇರುವಾಗ ಪರದೆ ಧರಿಸಲು ಹೇಳಿದರು. ಆಗ ಉಮ್ಮು ಸಲ್ಮಾ(ರ) ಹೇಳಿದರು: "ಆತನು ಕುರುಡ ನಾಗಿದ್ದಾನೆ ನಮ್ಮನ್ನು ಆತನು ನೋಡಲಾರನು." ಆಗ ಪ್ರವಾದಿ(ಸ) ಹೇಳಿದರು: "ಆತನು ಕುರುಡನಾದರೂ ನೀವು ಕುರುಡರಲ್ಲ. ನೀವು ಆತನನ್ನು ನೋಡುತ್ತಾ ಇಲ್ಲವೆ?" (ಅಬೂದಾವೂದ್ ಪುಸ್ತಕ 32, ಹದೀಸು ಕ್ರಮಾಂಕ 4100)

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಪರದಾ ಆಚರಣೆಯ ಮುಖ್ಯ ಅಂಶಗಳನ್ನು ವಿವರಿಸಿದ್ದಾನೆ. ಪರದಾ ಸಂಪ್ರದಾಯವು ಪುರುಷರ ಮತ್ತು ಮಹಿಳೆಯರ ಮನೋಭಾವವನ್ನು ಪ್ರಕಟಿಸುತ್ತದೆ. ಪೋಷಾಕು ಮತ್ತು ಸ್ವಭಾವದಲ್ಲಿ ಅದರ ಪ್ರತಿಬಿಂಬ ಕಾಣಿಸಿಕೊಳ್ಳುತ್ತದೆ.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಸತ್ಯವಿಶ್ವಾಸಿಗಳೊಡನೆ ಹೇಳು: ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲಿ ಮತ್ತು ತಮ್ಮ ಗುಪ್ತಾಂಗಗಳನ್ನು ಕಾಪಾಡಿಕೊಳ್ಳಲಿ. ಅದು ಅವರಿಗೆ ಪರಿಶುದ್ಧಮಾರ್ಗವಾಗಿದೆ.....

"ಸತ್ಯವಿಶ್ವಾಸಿನಿಯರೊಡನೆ ಹೇಳು: ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲಿ ಮತ್ತು ಗುಪ್ತಾಂಗಗಳನ್ನು ಕಾಪಾಡಲಿ......" (ಪವಿತ್ರ ಖುರ್‌ಆನ್ 24 : 31-32)

ತಮಗೆ ಅಪರಿಚಿತರಾದ ಪುರುಷರ ಮುಂದೆ ಮಹಿಳೆಯರು ಪರದಾ ಆಚರಿಸಬೇಕಲ್ಲದೆ ಅವರು ತಮ್ಮ ದೃಷ್ಟಿಯನ್ನು ತಗ್ಗಿಸಬೇಕು. ಪುರುಷರನ್ನೂ ಈ ಬಗ್ಗೆ ತಾಕೀತು ಮಾಡಲಾಗಿದೆ. ಅವರನ್ನು ನೈತಿಕ ತಪ್ಪುಗಳಿಂದ ರಕ್ಷಿಸಲು ಹೀಗೆ ಮಾಡಲಾಗಿದೆ.

ಪರದಾವನ್ನು ಸರಿಯಾದ ರೀತಿಯಲ್ಲಿ ಪಾಲಿಸಬೇಕು. ನಾವು ನಮ್ಮ ಮೌಲ್ಯಗಳನ್ನು ಕಾಯ್ದುಕೊಳ್ಳುವ ವಿಷಯದಲ್ಲಿ ಸಡಿಲು ಆಗಬಾರದು. ನಾವು ಇತರರೊಂದಿಗೆ ಕೆಲಸ ಮತ್ತು ಸಾಮಾಜಿಕ ಸಮಾರಂಭಗಳಲ್ಲಿ ಭಾಗವಹಿಸುತ್ತಾ ಇರುವಾಗ ಈ ಬಗ್ಗೆ ನಿಗಾ ವಹಿಸಬೇಕು. ನಾವು ಪರದೆಯ ಮೂಲಸತ್ವವನ್ನು ಗಮನದಲ್ಲಿರಿಸಿ ವರ್ತಿಸಬೇಕು. ಮದ್ಯ, ಸಂಗೀತ, ಹಾಡುಗಾರಿಕೆ ಮತ್ತು ನೃತ್ಯದ ಕಾರ್ಯಕ್ರಮಗಳಿರುವ ಸಮಾರಂಭಗಳಿಗೆ ನಾವು ಹೋಗದಿರಲು ಪ್ರಯತ್ನಿಸಬೇಕು. ಸ್ತ್ರೀ ಪುರುಷರು ಹಸ್ತ ಲಾಘವ ಮಾಡುವುದನ್ನು ಬಿಟ್ಟು ಬಿಡಬೇಕು ಮತ್ತು ನಮಗೆ ವಂದಿಸುವವರಿಗೆ ಈ ಕಾರಣದಿಂದ ಪೇಚಾಟವಾಗದಂತೆ ನಿಗಾ ವಹಿಸಬೇಕು.

ಪುರುಷರು ಮತ್ತು ಮಹಿಳೆಯರು ಪದೇ ಪದೇ ಭೇಟಿಯಾಗುವಾಗ ಅವರ ಮಧ್ಯೆ ದೇವನಿರಿಸಿದ ಸಹಜವಾದ ಆಕರ್ಷಣೆಯ ಕಾರಣದಿಂದ ಅವರು ನಿಕಟ ಸಂಬಂಧ ಹೊಂದಿ ಸಮಾಜದ ನೈತಿಕ ಸ್ಥಿತಿಯನ್ನು ಕೆಡಿಸಲು ಸಾಧ್ಯತೆಗಳಿವೆ.

ಏಯ್ಡ್ಸ್ ಮೊದಲಾದ ಭೀಕರ ರೋಗಗಳು ಅನಿಯಂತ್ರಿತ ಲೈಂಗಿಕ ಸಂಪರ್ಕಗಳ ಫಲವಾಗಿ ಉಂಟಾಗುತ್ತವೆ.

ನೈತಿಕ ಮತ್ತು ಆಧ್ಯಾತ್ಮಿಕ ಅವನತಿಯ ಕಾರಣದಿಂದ ಶರೀರದ ಆರೋಗ್ಯವು ಅನಿವಾರ್ಯವಾಗಿ ಕೆಟ್ಟುಹೋಗುತ್ತದೆ.

ಲೈಂಗಿಕ ರೋಗಗಳು, ನರಸಂಬಂಧಿ ರೋಗಗಳು, ಮಾನಸಿಕ ರೋಗಗಳು ಲಕ್ಷಾಂತರ ಜನರನ್ನು ಬಾಧಿಸುತ್ತಾ ಇವೆ. ಇದರ ಮೂಲ ಕಾರಣ ಲೈಂಗಿಕ ಅರಾಜಕತೆಯಾಗಿದೆ.

ಅತ್ಯಂತ ಅಪಾಯಕಾರಿ ರೋಗ ಏಯ್ಡ್ಸ್ ಆಗಿದೆ. ಎಚ್.ಐ.ವಿ. ವೈರಸ್‌ನಿಂದ ಇದು ಉಂಟಾಗುತ್ತದೆ. ಈ ವೈರಸ್ ಶರೀರದ ರೋಗ ನಿರೋಧಕ ಶಕ್ತಿಯನ್ನು ನಾಶಮಾಡುತ್ತದೆ ಮತ್ತು ಶರೀರವನ್ನು ರೋಗಗಳ ನೆಲೆವೀಡಾಗಿ ಮಾಡುತ್ತದೆ. ಈ ರೋಗ ಭೂಲೋಕದ ಎಲ್ಲಾ ಖಂಡಗಳನ್ನು ಪ್ರವೇಶಿಸಿದೆ. ಈ ರೋಗವನ್ನು ಬಾಧಿಸಿದವರ ಆಯುಷ್ಕಾಲವನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸುವ ಔಷಧಿಗಳ ಹೊರತು ರೋಗನಿವಾರಕ ಔಷಧಿಗಳು ಇನ್ನೂ ಕಂಡು ಹಿಡಿಯಲ್ಪಟ್ಟಿಲ್ಲ. ಈ ರೋಗ ಲೋಕದಾದ್ಯಂತ ಹರಡುತ್ತಾ ಇದೆ.

ಮಿಲಿಯಗಟ್ಟಲೆ ಜನರು ಈ ರೋಗಕ್ಕೆ ತುತ್ತಾಗಿದ್ದಾರೆ. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ನುಡಿದ ಮಾತಿಗೆ ಇದು ಸಾಕ್ಷ್ಯವಾಗಿದೆ. ಅವರು ಹೀಗೆಂದರು:

"ಅಶ್ಲೀಲ ಕೃತ್ಯಗಳು ವರ್ಧಿಸಿ ಜನರು ತಮ್ಮ ಕೃತ್ಯಗಳನ್ನು ನಾಚಿಕೆಯಿಲ್ಲದೆ ಬಹಿರಂಗವಾಗಿ ಮಾಡುವಾಗ ದೇವನು ಅವರನ್ನು ಶಿಕ್ಷಿಸದೆ ಎಂದೂ ಬಿಡುವುದಿಲ್ಲ. ಅಂತಹ ಜನರಲ್ಲಿ ವಿಪತ್ತು ಬಂದೆರಗುವುದು ಮತ್ತು ಅವರ ತಂದೆ ತಾತಂದಿರು ಕಂಡಿರದ ಸಾಂಕ್ರಾಮಿಕ ರೋಗಗಳು ಅವರನ್ನು ಬಾಧಿಸುವುವು. (ಇಬ್ನು ಮಾಜ - ಕಿತಾಬುಲ್ ಫಿತನ್)

ನಾವು ಆಟೋಟಗಳನ್ನು ಪ್ರೋತ್ಸಾಹಿಸಬೇಕು. ಟಿ.ವಿ.ಯಲ್ಲಿ ಅಶ್ಲೀಲ ಮತ್ತು ಹಿಂಸೆಭರಿತ ಕಾರ್ಯಕ್ರಮಗಳನ್ನೂ ಚಲನಚಿತ್ರಗಳನ್ನೂ ನೋಡುವುದಕ್ಕೆ ಪ್ರತಿಯಾಗಿ ಮತ್ತು ಟಾಕೀಸುಗಳಿಗೆ ಹೋಗುವುದಕ್ಕೆ ಬದಲಾಗಿ ನಾವು ಕೃಷಿಗೂ ತೋಟಗಾರಿಕೆಗೂ ಗಮನಹರಿಸಬೇಕು.

ನಾನು ಇನ್ನು ಮುಂದೆ ವಿಶ್ವಾಸದ್ರೋಹ ಮತ್ತು ಅಪ್ರಾಮಾಣಿಕತೆಯ ಕುರಿತು ವಿವರಿಸುವೆನು.

## ವಿಶ್ವಾಸದ್ರೋಹ ಮತ್ತು ಅಪ್ರಾಮಾಣಿಕತೆ

ಸುಳ್ಳು ಹೇಳುವುದು ಬಹುತೇಕ ಪಾಪಕೃತ್ಯಗಳ ಅಸ್ತಿಭಾರವೂ ಅದರ ಉಗಮ ಸ್ಥಳವೂ ಆಗಿದೆ. ಇಂದಿನ ಕಾಲದಲ್ಲಿ ಯಾವುದೇ ವಿನಾಯಿತಿಯಿಲ್ಲದೆ ಸುಳ್ಳನ್ನು ಲೋಕದಾದ್ಯಂತ ಕಾಣಬಹುದಾಗಿದೆ. ಎಲ್ಲಾ ನೈತಿಕ ಕೆಡುಕುಗಳಲ್ಲಿ ಸುಳ್ಳು ಹೇಳುವುದು ಅತ್ಯಂತ ಹೆಚ್ಚು ಕೆಡುಕಿನದಾಗಿದೆ ಮತ್ತು ಅದಕ್ಕೆ ಅನೇಕ ಜಟಿಲ ಕಾರಣಗಳಿವೆ. ಬಹುತೇಕ ಜನರು ತಥಾಕಥಿತ 'ಬಿಳಿ ಸುಳ್ಳು' ಹೇಳಬಹುದೆಂಬ ಅಭಿಪ್ರಾಯಹೊಂದಿದ್ದಾರೆ. ಸುಳ್ಳಿಗೆ ನೀವು ಹೇಗೆ ಬಣ್ಣ ಹಚ್ಚಿದರೂ ಅದು ಜನರಿಗೆ ಎಷ್ಟು ಸ್ವೀಕಾರಾರ್ಹವಾಗಿದ್ದರೂ ಅದು ಸುಳ್ಳೇ ಆಗಿರುತ್ತದೆ.

ಲೋಕದಲ್ಲಿ ತಲೆದೋರುವ ಅನೇಕ ನೈತಿಕ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಸತ್ಯ, ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆಯನ್ನು ಕೈಬಿಟ್ಟ ಕಾರಣದಿಂದ ಉದ್ಭವಿಸುತ್ತವೆ. ಸತ್ಯವಿಲ್ಲದಿದ್ದರೆ ಸರಿಯಾದ ನ್ಯಾಯಪಾಲನೆ ಆಗಲಾರದು. ನ್ಯಾಯಪಾಲನೆ ಆಗದಿದ್ದರೆ ದ್ವೇಷ ಮತ್ತು ಪ್ರತ್ಯಾರೋಪಣೆ ತಲೆದೋರುತ್ತವೆ. ಮನುಷ್ಯನು ತನ್ನ ಸಹಜೀವಿಗಳಿಗೆ ತೋರಿಸುವ ಮನುಷ್ಯತ್ವಹೀನವಾದ ನಡೆವಳಿಕೆ ಕೊನೆಗೆ ನಿಷ್ಕರುಣ ಮತ್ತು ಅತ್ಯಂತ ಹಾನಿಕಾರಕ ಕೃತ್ಯಗಳಲ್ಲಿ ಕೊನೆಗೊಳ್ಳುತ್ತದೆ.

ನಾವು ನಮ್ಮ ದೈನಂದಿನ ಜೀವಿತವನ್ನು ಲೌಕಿಕ ಮೌಲ್ಯಗಳು ಪ್ರವೇಶಿಸುವಂತೆ ಮಾಡಿ ಸುಳ್ಳನ್ನು ಅವಲಂಬಿಸಿದರೆ ಆಗ ನಾವು ಬೇಜವಾಬ್ದಾರಿ ಜನರಿಂದ ಸುತ್ತುವರಿಯಲ್ಪಡುತ್ತೇವೆ ಹಾಗೂ ನಾವು ವಂಚನೆ ಮತ್ತು ವಿಶ್ವಾಸಘಾತಕರ ಸುರುಳಿಯಲ್ಲಿ ಸಿಕ್ಕಿಕೊಳ್ಳುತ್ತೇವೆ.

ಸತ್ಯ ಹೇಳುವುದು ಬಹಳ ಶ್ರೇಷ್ಠ ಸದ್ಗುಣವಾಗಿದೆ. ಅದನ್ನು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಮಗುವಿನ ಮನಸ್ಸಿನಲ್ಲಿ ತುಂಬಿಸಬೇಕು. ಅದು ಶರೀರದ ಒಂದು ಅಂಗವಾಗಿದ್ದು ಅದಿಲ್ಲದೆ ಶರೀರ ಚಲಿಸದು ಎಂದು ಅವರಿಗೆ ಮನಗಾಣಿಸಬೇಕು.

ಸತ್ಯವಂತರು ತಮ್ಮ ಸ್ವಂತ ಆಶೆ ಮತ್ತು ಆಸಕ್ತಿಗಳನ್ನು ಕಡೆಗಣಿಸಿ ಸತ್ಯವನ್ನೇ ಅನುಸರಿಸುವುದು ಮುಖ್ಯವಾಗಿದೆ. ತಮ್ಮ ಜೀವ, ಗೌರವ ಮತ್ತು ಸ್ವತ್ತು ಅಪಾಯದಲ್ಲಿರುವಾಗ ಕೂಡ ಸತ್ಯವನ್ನು ನುಡಿಯುವವರು ಮಾತ್ರ ನಿಜವಾಗಿಯೂ ಸತ್ಯವಂತರಾಗಿದ್ದಾರೆ.

ಒಮ್ಮೆ ಒಬ್ಬನು ಹಝ್ರತ್ ಪ್ರವಾದಿಯವರ ಸಮೀಪಕ್ಕೆ ಬಂದು ಹೇಳಿದನು: "ನಾನು ಅನೇಕ ಕೆಟ್ಟ ಸ್ವಭಾವಗಳನ್ನು ಹೊಂದಿದ್ದೇನೆ. ಅವುಗಳಲ್ಲಿ ಒಂದು ಸುಳ್ಳು ಹೇಳುವುದಾಗಿದೆ. ಈ ಪಾಪ ಭರಿತ ಜೀವಿತದಿಂದ ನನಗೆ ಬಿಡುಗಡೆ ಹೇಗೆ ದೊರಕುವುದು?" ಪ್ರವಾದಿ(ಸ) ಹೇಳಿದರು: "ನೀನು ಯಾವಾಗಲೂ ಸತ್ಯ ಹೇಳು. ನೀನು ಎಲ್ಲಾ ದುರ್ಗುಣಗಳಿಂದ ಮುಕ್ತನಾಗುವೆ."

ತನ್ನ ದೈನಂದಿನ ಜೀವಿತದ ಕುರಿತು ಯಾರಾದರೂ ಪ್ರಶ್ನಿಸಿದರೆ ತಾನು ಸತ್ಯವನ್ನೇ ಹೇಳಬೇಕಾಗಿದೆ ಎಂದು ಅವನು ತಿಳಿದುಕೊಂಡನು. ಅವನು ಸತ್ಯವನ್ನು ಅವಲಂಬಿಸಿದುದರಿಂದ ಅವನ ಕೆಟ್ಟ ಸ್ವಭಾವಗಳಿಗೆ ಅದು

ಅನುಯೋಜ್ಯವಾದ ಒಂದು ಔಷಧಿಯಾಯಿತು. ಅವನು ದುರ್ಗುಣಗಳಿಂದ ಮುಕ್ತನಾದನು.

ಸತ್ಯ ನುಡಿಯುವವರ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಸತ್ಯವಂತರೂ ಸತ್ಯವತಿಯರೂ... ಅಲ್ಲಾಹನ ಮಹತ್ವದ ಪ್ರತಿಫಲವನ್ನು ಪಡೆಯುವರು." (ಪವಿತ್ರ ಖುರ್‌ಆನ್ 33 : 36)

ಈ ವಚನದಲ್ಲಿ ಸತ್ಯದ ವಾಸ್ತವಿಕ ಸ್ಥಿತಿ ಮತ್ತು ದಾರ್ಶನಿಕ ವಿವರಣೆ ನೀಡಲಾಗಿದೆ. ಸತ್ಯವನ್ನು ದೇವನ ತೃಪ್ತಿಗಳಿಸಲು ಹೇಳಬೇಕು. ನಾವು ಏನನ್ನೂ ಅವನಿಂದ ಮರೆಮಾಡಲಾರೆವು. ದೇವನು ಎಲ್ಲವನ್ನೂ ಬಲ್ಲವನೆಂದು ನಾವು ನಿಜವಾಗಿ ನಂಬುವುದಾದರೆ ನಮಗೆ ಸುಳ್ಳಿನ ಹಿಂದುಗಡೆ ಅಡಗಿ ಕುಳಿತುಕೊಳ್ಳಲು ಸಾಧ್ಯವಾಗದು.

ನಾವು ಪ್ರತಿದಿನ ನಮ್ಮ ಕೆಲಸಗಳನ್ನು ಆತ್ಮಪರಿಶೋಧನೆ ಮಾಡಬೇಕು. ನಾವು ಇಸ್ಲಾಮ್ ಧರ್ಮ ತತ್ವಗಳಿಗನುಸಾರವಾಗಿ ಅವುಗಳನ್ನು ಪರಿಷ್ಕರಿಸಲು ಪ್ರಯತ್ನಿಸಬೇಕು.

ಉನ್ನತ ನೈತಿಕ ಮೌಲ್ಯಗಳನ್ನು ರಕ್ಷಿಸಲು ಮತ್ತು ಕೆಟ್ಟ ಪ್ರಭಾವಗಳಿಂದ ಪಾರಾಗಲು ಪವಿತ್ರ ಖುರ್‌ಆನಿನ ಒಂದು ವಚನ ಮಾನವರಿಗೆ ಹೀಗೆ ಮಾರ್ಗದರ್ಶನವನ್ನು ಸಾರಾಂಶ ರೂಪದಲ್ಲಿ ನೀಡುತ್ತದೆ:

"ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ.(ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ಅಸಭ್ಯತೆಯನ್ನೂ ದುಷ್ಕೃತ್ಯವನ್ನೂ ನಿಯಮೋಲ್ಲಂಘನೆಯನ್ನೂ ಅವನು ನಿಷಿದ್ಧಗೊಳಿಸಿದ್ದಾನೆ. ಈ ಬಗ್ಗೆ ಲಕ್ಷ್ಯಗೊಡಲಿಕ್ಕೆ ಅವನು ಉಪದೇಶ ನೀಡುತ್ತಾನೆ."

(ಪವಿತ್ರ ಖುರ್‌ಆನ್ 16 : 91)

ಪವಿತ್ರ ಖುರ್‌ಆನಿನ ಈ ವಚನ ಸರಳವಾಗಿದ್ದು ಎಲ್ಲರೂ ಅರ್ಥಮಾಡಿಕೊಳ್ಳಬಹುದಾಗಿದೆ. ಈ ವಚನ ನ್ಯಾಯ ನಿಷ್ಠೆಯ ಕುರಿತು, ಇತರರಿಗೆ ಒಳಿತನ್ನು ಮಾಡುವ ಕುರಿತು, ಸಹೋದರರ ಮಧ್ಯೆ ಇರುವ ಕರುಣೆಯ ಹಾಗೆ ಕರುಣೆದೋರುವ ಕುರಿತು ಪ್ರತಿಪಾದಿಸಿ ಅಸಭ್ಯತೆ, ದುಷ್ಕೃತ್ಯ ಮತ್ತು ನಿಯಮೋಲ್ಲಂಘನೆಯನ್ನು ನಿಷಿದ್ಧಗೊಳಿಸುತ್ತದೆ.

ಪವಿತ್ರ ಖುರ್‌ಆನಿನ ಈ ವಚನ ಒಂದು ಪರಿಪೂರ್ಣ ಉಪದೇಶದ ಎಲ್ಲಾ ಮೂಲತತ್ವಗಳನ್ನೊಳಗೊಂಡಿದೆ. ಇದು ನೈತಿಕ ಮತ್ತು ಆಧ್ಯಾತ್ಮಿಕ ವಿಕಾಸಕ್ಕೆ ಪೂರ್ಣವಾದೊಂದು ಪದ್ಧತಿಯನ್ನು ರೂಪಿಸುತ್ತದೆ. ಇಂತಹ ದೈವಿಕ ಮಾರ್ಗದರ್ಶನವನ್ನು ಅನುಸರಿಸಿ ನಡೆಯುವ ಸತ್ಯವಿಶ್ವಾಸಿಗೆ ಎಲ್ಲಾ ವಿಧ ಪಾಪಕೃತ್ಯಗಳಿಂದ ವಿಮೋಚನೆಯನ್ನು ಪಡೆಯುವ ಭರವಸೆಯು ನೀಡಲ್ಪಟ್ಟಿದೆ.

ಅಹ್ಮದೀ ಮುಸ್ಲಿಮರಾದ ನಾವು ಆಯಾ ಕಾಲದ ಖಲೀಫರೊಂದಿಗೆ ಸಾಧ್ಯವಿರುವಷ್ಟು ನಿಕಟ ಸಂಬಂಧ ಹೊಂದಿರಬೇಕು. ನಾವು ಅವರ ಮಾರ್ಗದರ್ಶನಗಳನ್ನು ಪಾಲಿಸುತ್ತಾ ಇದ್ದರೆ ನಾವು ಈ ಕಾಲದ ಕೆಡುಕುಗಳಿಂದ ರಕ್ಷಣೆಯನ್ನು ಪಡೆಯುವೆವು. ಖಿಲಾಫತ್ ಒಂದು ಅನುಗ್ರಹಿಸಲ್ಪಟ್ಟ ವ್ಯವಸ್ಥೆಯಾಗಿದೆ. ಅದು ಅಲ್ಲಾಹನ ಒಂದು ಪಾರಿತೋಷಕವಾಗಿದೆ. ನಾವು ಅದನ್ನು ಆದರಭಾವದಿಂದ ಕಾಣಬೇಕು. ಆ ವ್ಯವಸ್ಥೆ ಇಸ್ಲಾಮಿಕ ಮೌಲ್ಯಗಳನ್ನು ಕಾಪಾಡಲು ಸಹಾಯಕವಾಗಿದೆ. ನಾವು ಖಲೀಫರವರ ಉಪದೇಶಗಳನ್ನು ಕಡೆಗಣಿಸಿದರೆ ನಮ್ಮ ನೈತಿಕ ಅಧಃಪತನಕ್ಕೆ ಅದು ಹೇತುವಾಗಬಲ್ಲುದು.

ಆಧುನಿಕ ಕಾಲದ ಕೆಡುಕುಗಳಿಂದ ದೂರ ಸರಿಯುವುದೇ ಇಂದಿನ ಕಾಲದಲ್ಲಿ ನಾವು ಮಾಡಬಹುದಾದ ಜಿಹಾದ್ ಆಗಿದೆ. ಇದು ನಮ್ಮ ಆತ್ಮೋನ್ನತಿಗೆ ಮಾಡುವ ಪರಿಶ್ರಮವಾಗಿದೆ. ನಾವು ದೇವ ಸಾಮೀಪ್ಯಗಳಿಸಲು ಒಳಿತನ್ನು ಮಾಡುವುದರಲ್ಲಿ ಪರಸ್ಪರ ಸ್ಪರ್ಧಿಸಬೇಕು. ನಾವು ನಮ್ಮಿಂದ ಈ ಕಾಲದ ಕೆಡುಕುಗಳನ್ನು ಹೋಗಲಾಡಿಸದಿದ್ದರೆ ನಾವು ಅಲ್ಲಾಹನ ಸಾಮೀಪ್ಯವನ್ನು ಗಳಿಸಲಾರೆವು. ನಾವು ಧರ್ಮವನ್ನು ಅನುಸರಿಸದಿದ್ದರೆ ಆ ಪರಿಪೂರ್ಣ ಧರ್ಮದ ಸೌಂದರ್ಯವನ್ನು ಅನ್ಯರಿಗೆ ತೋರಿಸಿಕೊಡುವುದು ಅಸಾಧ್ಯವಾಗುವುದು.

ಲೌಕಿಕ ಸುಖದ ಬಗ್ಗೆ ಸ್ವತಃ ಸಿದ್ಧಾಂತವನ್ನು ರೂಪಿಸಿ ಸ್ವಾರ್ಥ ಮಾರ್ಗವನ್ನು ಅವಲಂಬಿಸಿದ ಮನುಷ್ಯನು ಜೀವಿತದ ನಿಜವಾದ ಉದ್ದೇಶ ಲಕ್ಷ್ಯವನ್ನು ಕಡೆಗಣಿಸುತ್ತಾನೆ. ಅಲ್ಲಾಹನ ಸಾಮೀಪ್ಯಗಳಿಸಿ ನಿಜವಾದ ಸುಖ ಮತ್ತು ನೆಮ್ಮದಿಯ ದಾರಿಯಲ್ಲಿ ಸಾಗುವುದೇ ಜೀವಿತದ ಉದ್ದೇಶ ಲಕ್ಷ್ಯವಾಗಿದೆ.

ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳಿದೆ:

"ಅವರು ವಿಶ್ವಾಸಿಗಳೂ ಅಲ್ಲಾಹನ ಸ್ಮರಣೆಯಿಂದ ಮನಶ್ಶಾಂತಿ ಗಳಿಸಿದವರೂ ಆಗಿದ್ದಾರೆ. ತಿಳಿದುಕೊಳ್ಳಿರಿ, ಅಲ್ಲಾಹನ ಸ್ಮರಣೆಯಿಂದ ಮಾತ್ರ ಮನಶ್ಶಾಂತಿ ಪ್ರಾಪ್ತಿಯಾಗುವುದು."

(ಪವಿತ್ರ ಖುರ್‌ಆನ್ 13 : 29)

"ಈ ಸುಂದರ ವಚನ ಒಂದು ಪರಮ ಸತ್ಯವನ್ನು ಒಳಗೊಂಡಿದೆ. ಇಹಲೋಕದ ಸಾಮಗ್ರಿಗಳನ್ನು ಗಳಿಸಿದವರು ಇನ್ನಷ್ಟು ಗಳಿಸುವ ಹಸಿವನ್ನು ಹೊಂದಿದವರೂ ಆ ಕಾರಣದಿಂದ ಹೃದಯದ ಸುಡುವಿಕೆಗೆ ತುತ್ತಾಗುವವರೂ ಆಗುತ್ತಾರೆ. ಆದರೆ ದೇವನ ಸಾನ್ನಿಧ್ಯ ಬಯಸುವವರು ಅವನ ಕಡೆಗೆ ಹೆಚ್ಚು ಹೆಚ್ಚಾಗಿ ಬಾಗಿದ ಹಾಗೆ ಹೆಚ್ಚು ಮನಶ್ಶಾಂತಿ ಗಳಿಸುತ್ತಾರೆ. ದೇವನಿಗಾಗಿ ಅನ್ವೇಷಣೆ ಮಾಡುವುದು ಮನುಷ್ಯನ ಪ್ರಕೃತಿಯ ಆಂತರಿಕ ಹಂಬಲವಾಗಿರುತ್ತದೆ ಮತ್ತು ಅದು ಅವನ ನಿಜವಾದ ಜೀವಿತ ಲಕ್ಷ್ಯವಾಗಿರುತ್ತದೆ ಎಂದು ಇದರಿಂದ ತಿಳಿಯುತ್ತದೆ. ಈ ಉದ್ದೇಶದಲ್ಲಿ ಸಾಫಲ್ಯವನ್ನು ಪಡೆದರೆ ಮನುಷ್ಯನು ಪರಿಪೂರ್ಣ ಮನಶ್ಶಾಂತಿಯನ್ನು ಪಡೆಯುತ್ತಾನೆ." (ಮಲಿಕ್ ಗುಲಾಮ್ ಫರೀದ್ ಸಾಹೆಬರು ಇಂಗ್ಲಿಷ್‌ನಲ್ಲಿ ಬರೆದ ಖುರ್‌ಆನ್ ವ್ಯಾಖ್ಯಾನ ಗ್ರಂಥ - ಪುಟ 1212)

ಕೊನೆಯದಾಗಿ ಹೀಗೆ ಹೇಳ ಬಯಸುತ್ತೇನೆ: ಇಂದಿನ ಕಾಲದಲ್ಲಿ ಮಾನವರು ಎದುರಿಸುತ್ತಿರುವ ಅನೇಕ ಅಪಾಯಗಳಲ್ಲಿ ಕೆಲವನ್ನು ಮಾತ್ರ ನಿಮ್ಮ ಮುಂದಿರಿಸಿದ್ದೇನೆ. ನಮ್ಮ ಕೌಟುಂಬಿಕ ಜೀವಿತದ ಐಕ್ಯಕ್ಕೆ ಮತ್ತು ಸ್ಥಿರತೆಗೆ ಇವು ಅಪಾಯಕಾರಿಗಳಾಗಿವೆ. ಪವಿತ್ರ ಖುರ್‌ಆನಿನ ಉಪದೇಶಗಳನ್ನು ಮತ್ತು ಪ್ರವಾದಿ ಮುಹಮ್ಮದ್ ಮುಸ್ತಫಾರವರ(ಸ) ನಡೆವಳಿಕೆಗಳನ್ನು ಪ್ರಾಮಾಣಿಕವಾಗಿ ಅನುಸರಿಸಿದರೆ ಮಾತ್ರ ಮುಸ್ಲಿಮರಾದ ನಾವು ಇಸ್ಲಾಮಿಕ ನೈತಿಕ ಮೌಲ್ಯಗಳನ್ನು ಸಂರಕ್ಷಿಸಬಲ್ಲೆವು. ನಾವು ಇಸ್ಲಾಮಿಕ ಮೌಲ್ಯಗಳನ್ನು ಪ್ರಾಮಾಣಿಕವಾಗಿ ಅನುಸರಿಸುತ್ತಾ ಇದ್ದಲ್ಲಿ ಅವುಗಳನ್ನು ಮುಂದಿನ ಪೀಳಿಗೆಗೆ ನಾವು ಸಂರಕ್ಷಿಸಬಲ್ಲೆವು. ಮುಸ್ಲಿಮರು ಮತ್ತು ವಿಶಿಷ್ಟವಾಗಿ ಅಹ್ಮದೀ ಮುಸ್ಲಿಮರು ನೈತಿಕ ಮೌಲ್ಯಗಳ ದೀವಟಿಗೆಗಳನ್ನು ಹಿಡಿಯುವವರಾಗಿ ಸುಲಭವಾಗಿ ಆಧುನಿಕ ಸಮಾಜದಲ್ಲಿ ಗುರುತಿಸಲ್ಪಡುವವರಾಗಬೇಕು. ಹೀಗೆ ಆದರೆ ಮಾತ್ರ ನೈತಿಕ ಮೌಲ್ಯಗಳನ್ನು ಹೊಂದಿದ ನ್ಯಾಯನಿಷ್ಠೆಯ ಸಮಾಜವನ್ನು ಈಗ ಮತ್ತು ಮುಂದಿನ ಕಾಲದಲ್ಲಿ ನಮ್ಮ ಮಕ್ಕಳಿಗಾಗಿ ರೂಪಿಸಲು ಸಾಧ್ಯ.

**(Ahmadiyya Gazette U.S.A. : September-October 2006)**

ಕನ್ನಡ ಭಾಷಾಂತರ : ಎಂ. ಉಬೈದುಲ್ಲಾ

★

ಮಕ್ಕಳ ಪಂಕ್ತಿ

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎಲ್ಲಾ ಪ್ರವಾದಿಗಳ ನೇತಾರರಾಗಿದ್ದಾರೆ. ಅವರು ಅರಬ್ ದೇಶದ ಪವಿತ್ರ ಮಕ್ಕ ಪಟ್ಟಣದಲ್ಲಿ ದಿನಾಂಕ 12 ರಬೀ ಉಲ್ ಅವ್ವಲ್ (ಕ್ರಿ.ಶ. 570 ಎಪ್ರಿಲ್ ತಿಂಗಳು ದಿನಾಂಕ 20) ಜನ್ಮ ತಾಳಿದರು. ಮಕ್ಕ ನಗರದ ಶ್ರೇಷ್ಠ ಗೋತ್ರವಾದ ಖುರೈಶಿ ವಂಶಕ್ಕೆ ಸೇರಿದ ಬನೂಹಾಶಿಮ್ ಕುಟುಂಬದಲ್ಲಿ ಒಬ್ಬ ಮಾನ್ಯ ವ್ಯಕ್ತಿಯಾಗಿದ್ದ ಅಬ್ದುಲ್ಲಾ ಅವರ ತಂದೆಯಾಗಿದ್ದರು. ಅಬ್ದುಲ್ಲಾರವರು ತಮ್ಮ ಮಗನ ಜನನಕ್ಕೆ ಕೆಲವು ತಿಂಗಳು ಮೊದಲೇ ಮೃತರಾಗಿದ್ದರು. ಪ್ರವಾದಿಯವರ ತಾಯಿಯ ಹೆಸರು ಆಮಿನ ಎಂದಾಗಿತ್ತು. ಪ್ರವಾದಿಯವರಿಗೆ ಆರು ವರ್ಷ ಪ್ರಾಯವಾದಾಗ ಅವರ ತಾಯಿ ಸಹ ಮೃತರಾದರು. ಅನಂತರ ತನ್ನ ತಾತ ಅಬ್ದುಲ್ ಮುತ್ತಲಿಬ್‌ರವರ ಸಂರಕ್ಷಣೆಯಲ್ಲಿ ಅವರು ಬೆಳೆದರು. ಪ್ರವಾದಿಯವರಿಗೆ ಎಂಟು ವರ್ಷ ಪ್ರಾಯವಾದಾಗ ಅವರ ತಾತ ಸಹ ಮೃತರಾದರು. ಅನಂತರ ಪ್ರವಾದಿಯವರ ಪಿತೃ ಸಹೋದರ ಅಬೂತಾಲಿಬ್‌ರವರು ಅವರ ಸಂರಕ್ಷಕರಾದರು.

ಹಝ್ರತ್ ಪೈಗಂಬರರು(ಸ) ಬಾಲ್ಯ ಕಾಲದಿಂದಲೇ ಸುಶೀಲರೂ ವಿಶ್ವಾಸಯೋಗ್ಯರೂ ಆಗಿದ್ದರು. ಅವರು ಒಮ್ಮೆಯೂ ಸುಳ್ಳು ಹೇಳಿರಲಿಲ್ಲ ಮತ್ತು ಕೆಟ್ಟ ಮಾತು ಆಡಿರಲಿಲ್ಲ. ಬಡವರಿಗೆ ಸಹಾಯ ಮಾಡುವುದು, ದೌರ್ಜನ್ಯ ಪೀಡಿತರಿಗೆ ರಕ್ಷಣೆ ನೀಡುವುದು ಅವರ ವಿಶಿಷ್ಟ ಸ್ವಭಾವಗುಣಗಳಾಗಿದ್ದುವು. ಅವರು ಶಾಂತಿ ಸಮಾಧಾನಗಳನ್ನು ಆಶಿಸುವವರೂ ಸುಸ್ವಭಾವಿಯೂ ಸರ್ವರಿಂದಲೂ ಆದರಿಸಲ್ಪಡುವವರೂ ಆಗಿದ್ದರು. ಹಝ್ರತ್ ಪೈಗಂಬರರು(ಸ) ಎಂದೂ ಬಹುದೇವಾರಾಧನೆ ಮಾಡಿರಲಿಲ್ಲ. ಅವರ ಜೀವಿತ ಬಹಳ ಪರಿಶುದ್ಧವೂ ಅತ್ಯಂತ ಅನುಕರಣೀಯವೂ ಆಗಿತ್ತು.

ಹಝ್ರತ್ ಪೈಗಂಬರರಿಗೆ(ಸ) ನಲ್ವತ್ತು ವರ್ಷ ವಯಸ್ಸು ಪೂರ್ಣಗೊಂಡಾಗ ಅಲ್ಲಾಹನು ಅವರನ್ನು ಲೋಕಕ್ಕೆ ಮಾರ್ಗದರ್ಶನ ನೀಡಲು ನಬಿಯಾಗಿಯೂ ರಸೂಲರನ್ನಾಗಿಯೂ ಮಾಡಿ ನೇಮಿಸಿದನು. ಹಾಗೆ ಅಲ್ಲಾಹನ ದಿವ್ಯ ಸಂದೇಶಗಳು ಅವತೀರ್ಣವಾಗತೊಡಗಿದುವು. ಅಲ್ಲಾಹನನ್ನು ಮಾತ್ರ ಆರಾಧಿಸಬೇಕೆಂದೂ ಮೂರ್ತಿಪೂಜೆ ಮಾಡುವುದನ್ನು ತ್ಯಜಿಸಬೇಕೆಂದೂ ಅವರು ಜನರಿಗೆ ಉಪದೇಶ ನೀಡಿದರು. ಮನುಷ್ಯರನ್ನು ಪ್ರೀತಿಸಬೇಕೆಂದೂ ಲೋಕದಲ್ಲಿ ನ್ಯಾಯ ಮತ್ತು ಧರ್ಮವನ್ನು ಪುನಃ ಸ್ಥಾಪಿಸಬೇಕೆಂದೂ ಅವರು ಉಪದೇಶಿಸಿದರು.

ಆದರೆ ಮೂರ್ತಿಪೂಜೆಯಲ್ಲೂ ಅನೇಕ ತರದ ಅಂಧವಿಶ್ವಾಸಗಳಲ್ಲೂ ಅಂಧ ಆಚರಣೆಗಳಲ್ಲೂ ಮುಳುಗಿದ್ದ ಅಂದಿನ ಕಾಲದ ಅರಬಿಗಳಿಗೆ ಈ ಉಪದೇಶ ಅಸಹನೀಯವಾಗಿತ್ತು. ಅವರು ಪೈಗಂಬರರನ್ನು(ಸ) ಕಠಿಣವಾಗಿ ವಿರೋಧಿಸಿದರು. ಆದರೆ ಕೆಲವು ವರ್ಷಗಳೊಳಗೆ ಒಂದು ಚಿಕ್ಕ ಗುಂಪು ಒಳ್ಳೆಯ ಜನರು ಹಝ್ರತ್ ಪೈಗಂಬರರ(ಸ) ಉಪದೇಶಗಳನ್ನು ಸ್ವೀಕರಿಸಿ ಮುಸ್ಲಿಮರಾದರು. ಆದರೆ ಬಹುಸಂಖ್ಯಾತರಾದ ಶತ್ರುಗಳು ಹಝ್ರತ್ ಪೈಗಂಬರರನ್ನೂ(ಸ) ಅನುಯಾಯಿಗಳನ್ನೂ ಹಲವು ರೀತಿಗಳಲ್ಲಿ ಪೀಡಿಸುತ್ತಾ ಇದ್ದರು. ಸತ್ಯದ ಪ್ರಚಾರವನ್ನು ತಡೆಯಲು ಶತ್ರುಗಳು ತಮಗೆ ಸಾಧ್ಯವಿರುವಷ್ಟು ಪ್ರಯತ್ನಿಸಿದರು. ಹಝ್ರತ್ ಪೈಗಂಬರರು(ಸ) ತಂದ ದೈವಿಕ ಪ್ರಕಾಶ ಹಬ್ಬದಂತೆ ತಡೆಯಲು ಶತ್ರುಗಳು ಎಲ್ಲಾ ವಿಧದ ಅನ್ಯಾಯದ ಅಸ್ತ್ರಗಳನ್ನು ಪ್ರಯೋಗಿಸಿದರು. ಶತ್ರುಗಳ ದೌರ್ಜನ್ಯಗಳನ್ನು ಪೈಗಂಬರರೂ ಶಿಷ್ಯರೂ ಸಹಿಸಿದರು. ಬಡಮುಸ್ಲಿಮರಲ್ಲಿ ಹಲವರನ್ನು ಶತ್ರುಗಳು ಕೊಂದರು. ಕೆಲವು ಮಹಿಳೆಯರು ಸಹ ಅವರ ಮೃಗೀಯ ಆಕ್ರಮಣಗಳಿಗೆ ತುತ್ತಾಗಿದ್ದರು. ಕೊನೆಗೆ ಹಝ್ರತ್ ಪ್ರವಾದಿಯನ್ನು ವಧಿಸಲು ಶತ್ರುಗಳು ಸನ್ನದ್ಧರಾದರು. ಆಗ ಅಲ್ಲಾಹನ ಆಜ್ಞೆಯ ಪ್ರಕಾರ ಹಝ್ರತ್ ಪೈಗಂಬರರು(ಸ) ಸ್ವಂತ ನಗರವಾದ ಮಕ್ಕವನ್ನು ಬಿಟ್ಟು ಮದೀನಕ್ಕೆ ಹಿಜರತ್ (ವಲಸೆ) ಹೋದರು. ಆಗ ಹಝ್ರತ್‌ರವರಿಗೆ 53 ವರ್ಷ ಪ್ರಾಯವಾಗಿತ್ತು. ಹಝ್ರತ್ ಪೈಗಂಬರರ(ಸ) ಮಕ್ಕದ ನಿವಾಸಿಗಳಾದ ಶಿಷ್ಯರು ಸಹ ಅನಂತರ ಮಕ್ಕದಿಂದ ಮದೀನಕ್ಕೆ ವಲಸೆ ಹೋದರು. ಮದೀನದ ನಿವಾಸಿಗಳು ಹಝ್ರತ್ ಪೈಗಂಬರರನ್ನೂ(ಸ) ಅವರ ಶಿಷ್ಯರನ್ನೂ ಸ್ನೇಹದಿಂದ ಸ್ವಾಗತಿಸಿ ಆದರದಿಂದ ವರ್ತಿಸಿ ಬೇಕಾದ ಸಹಾಯಗಳನ್ನು ನೀಡಿದರು. ಸ್ವಲ್ಪ ಕಾಲದ ಅವಧಿಯೊಳಗಾಗಿ ಇಸ್ಲಾಮ್ ಧರ್ಮ ನಾನಾ ಭಾಗಗಳಲ್ಲಿ ಪ್ರಚಾರಗೊಂಡು ಶಕ್ತಿಯನ್ನು ಗಳಿಸಲು ತೊಡಗಿತು. ಮಕ್ಕದ ನಿವಾಸಿಗಳಾದ ಶತ್ರುಗಳು ಇಸ್ಲಾಮ್ ಧರ್ಮವನ್ನು ನಾಶಗೊಳಿಸಲು ಹಝ್ರತ್ ಪೈಗಂಬರರ(ಸ) ವಿರುದ್ಧ ಹೋರಾಡಲು ಹೊರಟರು. ಆದರೆ ಅಲ್ಲಾಹನ ಸಹಾಯದಿಂದ ಪ್ರವಾದಿಯವರೂ ಅವರ ಅನುಯಾಯಿಗಳೂ ಎಲ್ಲಾ ಯುದ್ಧಗಳಲ್ಲಿಯೂ ಜಯಶಾಲಿಗಳಾದರು. ಶತ್ರುಗಳು ಸಂಪೂರ್ಣವಾಗಿ ಸೋಲಿಸಲ್ಪಟ್ಟರು. ಹಝ್ರತ್ ಪೈಗಂಬರರು(ಸ) ಆ ಶತ್ರುಗಳಿಗೆ ಕ್ಷಮಾಪಣೆ ನೀಡಿದರು. ಅನಂತರ ಜನರು ಗುಂಪು ಗುಂಪಾಗಿ ಹಝ್ರತ್ ಪೈಗಂಬರರನ್ನು(ಸ) ಅನುಸರಿಸಿ ಇಸ್ಲಾಮ್ ಧರ್ಮ ಸ್ವೀಕರಿಸಿದರು. ಹಝ್ರತ್ ಪೈಗಂಬರರ(ಸ) ಉತ್ತಮ ಗುಣಗಳೂ ಉಪದೇಶಗಳೂ ಎಲ್ಲರನ್ನು ಆಕರ್ಷಿಸಿದುವು. ಹಾಗೆ ಇಸ್ಲಾಮ್ ಧರ್ಮ ಲೋಕದಲ್ಲೆಲ್ಲಾ ವ್ಯಾಪಿಸಲು ತೊಡಗಿತು.

ಹಝ್ರತ್ ಪೈಗಂಬರರು[ಸ] ಜನರ ಧಾರ್ಮಿಕ ನಂಬಿಕೆಗಳಲ್ಲಿ ಪ್ರಮುಖ ಪರಿವರ್ತನೆಗಳನ್ನುಂಟುಮಾಡಿ ಅವರನ್ನು ಆಧ್ಯಾತ್ಮಿಕವಾದ ಉನ್ನತ ಸ್ಥಾನಕ್ಕೇರಿಸಿದರು. ಹಝ್ರತ್ ಪೈಗಂಬರರು[ಸ] ರಾತ್ರಿ ಹಗಲು ಜನರ ಒಳಿತಿಗಾಗಿ ಕಾರ್ಯಮಗ್ನರಾಗಿರುತ್ತಿದ್ದರು. ಹಝ್ರತ್ ಮುಹಮ್ಮದ್ ಪೈಗಂಬರರು[ಸ] 63 ವರ್ಷ ಪ್ರಾಯದಲ್ಲಿ ಮೃತರಾದರು. ಅವರ ಗೋರಿ ಮದೀನದಲ್ಲಿದೆ. ಅಲ್ಲಾಹನ ಅಪಾರ ಅನುಗ್ರಹಗಳು ಹಝ್ರತ್ ಪೈಗಂಬರರ[ಸ] ಮೇಲೆ ಮತ್ತು ಅವರ ಯಥಾರ್ಥ ಅನುಯಾಯಿಗಳ ಮೇಲೆ ಸುರಿಸಲ್ಪಡಲಿ - ಆಮೀನ್.

ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಲೋಕಕ್ಕೆ ಅನುಗ್ರಹವಾಗಿರುವರು. ಅವರು ಮಾಡಿದಂತಹ ಮಹತ್ಕಾರ್ಯಗಳನ್ನು ಬೇರೆ ಯಾವ ಪ್ರವಾದಿಯೂ ಮಾಡಿಲ್ಲ. ಹಝ್ರತ್‌ರವರಿಗೆ ದೊರೆತಷ್ಟು ದೈವಿಕ ಸಹಾಯ ಬೇರೆ ಯಾವ ಪ್ರವಾದಿಗೂ ಲಭಿಸಿರಲಿಲ್ಲ. ಹಝ್ರತ್ ಪೈಗಂಬರರಿಗೆ[ಸ] ಅವತೀರ್ಣಗೊಳಿಸಲ್ಪಟ್ಟ ಪವಿತ್ರ ಖುರ್‌ಆನಿನಂತಹ ವಿಶಿಷ್ಟವೂ ಪರಿಪೂರ್ಣವೂ ಆಗಿರುವ ಗ್ರಂಥ ಬೇರೆ ಯಾವ ಪ್ರವಾದಿಗೂ ಅವತೀರ್ಣಗೊಳಿಸಲ್ಪಟ್ಟಿಲ್ಲ. ಹಝ್ರತ್ ಪೈಗಂಬರರಿಗೆ[ಸ] ಸಮಾನವಾದ ಆಧ್ಯಾತ್ಮಿಕ ಸ್ಥಾನವನ್ನು ಪಡೆದ ಒಬ್ಬ ಪ್ರವಾದಿ ಹಿಂದೆ ಜನಿಸಿಲ್ಲ; ಮುಂದೆ ಜನಿಸಲಿಕ್ಕಿಲ್ಲ.

ಹಝ್ರತ್ ಪೈಗಂಬರರ[ಸ] ಉತ್ತಮ ಗುಣಗಳು ಮತ್ತು ಸುಸ್ವಭಾವಗಳು ಶತ್ರುಗಳನ್ನು ಕೂಡ ಆಕರ್ಷಿಸುವಂತಹದ್ದಾಗಿದ್ದುವು. ಅವರು ಅನಾಥರ ಸಂರಕ್ಷಕರೂ ನಿರಾಶ್ರಿತರ ಸಹಾಯಕರೂ ಆಗಿದ್ದರು. ಅವರು ಮನುಷ್ಯರನ್ನು ಅತ್ಯಂತ ಹೆಚ್ಚು ಪ್ರೀತಿಸುವವರೂ ಅಲ್ಲಾಹನನ್ನು ಅತ್ಯಧಿಕ ಆರಾಧಿಸುವವರೂ ಆಗಿದ್ದರು.

ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಖಾತಮುನ್ನಬಿಯ್ಯೀನ್ ಆಗಿರುವರು. ಅಂದರೆ, ಪ್ರವಾದಿಗಳಿಗೆ ಲಭಿಸಬಹುದಾದ ಎಲ್ಲಾ ವಿಧದ ಅನುಗ್ರಹಗಳು ಪರಿಪೂರ್ಣವಾಗಿ ಹಝ್ರತ್ ಮುಹಮ್ಮದ್ ಪೈಗಂಬರರಿಗೆ[ಸ] ಅಲ್ಲಾಹನು ನೀಡಿರುವನು. ಅವರನ್ನು ಪರಿಪೂರ್ಣವಾಗಿ ಅನುಸರಿಸುವ ಮುಖಾಂತರ ಹೊರತು ಯಾರಿಗೂ ಪ್ರವಾದಿಯ ಅಥವಾ ಅದಕ್ಕಿಂತ ಕೆಳಮಟ್ಟದ ಆಧ್ಯಾತ್ಮಿಕ ಸ್ಥಾನ ಕೂಡ ಲಭಿಸಲಾರದು. ಹಝ್ರತ್ ಪೈಗಂಬರರ ಮುಖಾಂತರ ಪ್ರಚಾರಗೊಳಿಸಲಾದ ಇಸ್ಲಾಮ್ ಧರ್ಮ ಲೋಕದ ಎಲ್ಲಾ ಜನರಿಗಾಗಿ ಇದೆ. ಆ ಧರ್ಮ ಲೋಕದ ಅಂತ್ಯದವರೆಗೆ ನೆಲೆನಿಲ್ಲುವುದು. ಹಝ್ರತ್ ಪೈಗಂಬರರಿಗೆ ಮುಂಚಿತವಾಗಿ ಆಗಮಿಸಿದ ಪ್ರವಾದಿಗಳು ಒಂದೊಂದು ನಿರ್ದಿಷ್ಟ ದೇಶಕ್ಕೋ, ಜನಾಂಗಕ್ಕೋ, ಕಾಲಕ್ಕೋ ಬಂದವರಾಗಿದ್ದು ಅವರ ಉದ್ದೇಶ ಲಕ್ಷ್ಯ ಸೀಮಿತವಾಗಿತ್ತು. ಅವರ ಪ್ರವಾದಿತ್ವದ ಕಾಲಾವಧಿ ಕೊನೆಗೊಂಡಿದ್ದು, ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಸರ್ವ ಜನರಿಗೂ ಸರ್ವ ದೇಶಗಳಿಗೂ ಸರ್ವ ಕಾಲಕ್ಕೂ ಪ್ರವಾದಿಯಾಗಿ ನೇಮಿಸಲ್ಪಟ್ಟಿರುವರು. ಅವರು ಬೋಧಿಸಿದ ಇಸ್ಲಾಮ್ ಧರ್ಮ ಎಲ್ಲಾ ಮನುಷ್ಯರಿಗಾಗಿ ಲೋಕದ ಅಂತ್ಯದ ತನಕ ನೆಲೆ ನಿಲ್ಲುವುದು.

ಹಝ್ರತ್ ಮುಹಮ್ಮದ್ ಪೈಗಂಬರರ[ಸ] ನಂತರ ಒಂದು ಹೊಸ ಧರ್ಮವನ್ನು ಉಪದೇಶಿಸುವ ಯಾವ ಪ್ರವಾದಿಯೂ ಬಂದಿಲ್ಲ ಮತ್ತು ಅಂತಹ ಪ್ರವಾದಿ ಬರಲಿಕ್ಕಿಲ್ಲ. ಆದರೆ ಹಝ್ರತ್ ಪೈಗಂಬರರ[ಸ] ಆಧ್ಯಾತ್ಮಿಕ ಶಿಷ್ಯತ್ವವನ್ನು ಪಡೆದು ಪವಿತ್ರ ಖುರ್‌ಆನಿನ ನಿಯಮಗಳನ್ನು ಜಾರಿಗೊಳಿಸಲು ಮತ್ತು ಇಸ್ಲಾಮ್ ಧರ್ಮವನ್ನು ಪುನರುದ್ಧರಿಸಲಿಕ್ಕಾಗಿ ಒಬ್ಬ ಪ್ರವಾದಿ ಬಂದಿರುವರು. ಅಹ್ಮದಿಯಾ ಜಮಾಅತಿನ ಪರಿಶುದ್ಧ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್ ಅಂತಹ ಒಬ್ಬ ಉಮ್ಮತೀ ನಬೀ (ಶಿಷ್ಯ ಪ್ರವಾದಿ) ಆಗಿರುವರು. ಅಂತಹ ಪ್ರವಾದಿ ಬರಬಹುದೆಂದು ಪವಿತ್ರ ಖುರ್‌ಆನ್‌ನಿಂದ ಸ್ಪಷ್ಟವಾಗುತ್ತದೆ.

**ನಿಧನವಾರ್ತೆ**



## ಎ.ಜೆ. ಅಬ್ದುಲ್ಲಾ ಸಾಹೇಬ್

ದೇಲಂಪಾಡಿ: ಮೊಗ್ರಾಲ್ ಅಹ್ಮದಿಯಾ ಮುಸ್ಲಿಂ ಜಮಾಅತಿನ ಅಗಸ್ಟಿನ್ ಜೋಸೆಫ್ ಅಬ್ದುಲ್ಲಾ ಸಾಹೇಬರು ದಿನಾಂಕ 28-04-2008ರಂದು ಶಾಂತಿಮಲೆಯಲ್ಲಿರುವ ಸ್ವಗೃಹದಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.") ಅವರಿಗೆ ಸುಮಾರು 85 ವರ್ಷ ಪ್ರಾಯವಾಗಿತ್ತು.

ಕೇರಳ ರಾಜ್ಯದ ಕೋಟ್ಟಯಮ್‌ನ ಕ್ರೈಸ್ತ ಕುಟುಂಬದಲ್ಲಿ ಜನಸಿದ ಅಗಸ್ಟಿನ್ ಜೋಸೆಫ್ ಇಸ್ಲಾಂ ಧರ್ಮ ಸ್ವೀಕರಿಸಿ ಅಬ್ದುಲ್ಲಾ ಆದರು. 1963ರಲ್ಲಿ ಅವರು ಅಹ್ಮದಿಯಾ ಜಮಾಅತಿಗೆ ಸೇರಿದರು. ಉತ್ತಮ ಕೃಷಿಕರಾಗಿದ್ದ ಅವರು ಬಹಳ ಶ್ರಮಜೀವಿಯಾಗಿದ್ದರು. ಅವರು ಪತ್ನಿಯನ್ನೂ ಓರ್ವ ಪುತ್ರನನ್ನೂ ನಾಲ್ವರು ಪುತ್ರಿಯರನ್ನೂ ಅನೇಕ ಬಂಧು ಮಿತ್ರಾದಿಗಳನ್ನೂ ಅಗಲಿದ್ದಾರೆ.

ಪತ್ನಿ : ಫಾತಿಮಾ. ಪುತ್ರ : ಆಸಿಫ್. ಪುತ್ರಿಯರು : ಹಾಜಿರ, ತಾಹಿರ, ಬುಶ್ರಾ, ಝೊಹರಾ. ಅಳಿಯಂದಿರು : ಮುಬಾರಕ್ ಅಹ್ಮದ್, ಅಬ್ದುಲ್ ಘನಿ, ರಶೀದ್ ಅಹ್ಮದ್, ಝುಫರ್ ಅಹ್ಮದ್.

ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮಿನ್.

# ಜಾಗತಿಕ ಅಹ್ಮದಿಯಾ ಮುಸ್ಲಿಂ ಬುಕ್ ಸೆಂಟರ್

ಮಂಗಳೂರು ನಗರದ ಮಂಗಳಾ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದ ಕರಾವಳಿ ಉತ್ಸವ ವಸ್ತು ಪ್ರದರ್ಶನದಲ್ಲಿ "ಅಹ್ಮದಿಯಾ ಮುಸ್ಲಿಂ ಜಮಾಅತ್ ಮಂಗಳೂರು" ಮತ್ತು "ಝೋನಲ್ ಖುದ್ದಾಮುಲ್ ಅಹ್ಮದಿಯಾ ಬೆಂಗಳೂರು" ಸಹಯೋಗದಲ್ಲಿ ಜನವರಿ 1ರಿಂದ ಫೆಬ್ರವರಿ 10ರ ತನಕ 'ಜಾಗತಿಕ ಅಹ್ಮದಿಯಾ ಮುಸ್ಲಿಂ ಬುಕ್ ಸೆಂಟರ್" ಮಳಿಗೆಯನ್ನು ತೆರೆಯಲಾಗಿತ್ತು. ಇದರ ಉದ್ಘಾಟನೆಯನ್ನು ಡಾ। ಸಿದ್ದೀಖ್ ಅಶ್ರಫ್ ಅಲಿ ಸಾಹೇಬ್ ನೆರವೇರಿಸಿದರು. ಮೌಲವಿ ಎಸ್. ನಾಸಿರ್ ಅಹ್ಮದ್ ಸಾಹೇಬ್ ಖುರ್‌ಆನ್ ಪಾರಾಯಣ ಮಾಡಿದರು.




ಜಾಗತಿಕ ಅಹ್ಮದಿಯಾ ಮುಸ್ಲಿಂ ಜಮಾಅತ್ ಕನ್ನಡ ಸಹಿತ 60 ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಅನುವಾದಗಳನ್ನು ಪ್ರಕಟಗೊಳಿಸಿದ್ದು ಮಳಿಗೆಯಲ್ಲಿ ಅವುಗಳನ್ನು ಪ್ರದರ್ಶನಕ್ಕಿಡಲಾಗಿತ್ತು.

ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಮಲಯಾಳಂ, ತಮಿಳು, ತೆಲುಗು, ಪಂಜಾಬಿ ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಭಾಷಾಂತರಗಳು ಮತ್ತು ಇಸ್ಲಾಂ ಧರ್ಮದ ಬಗ್ಗೆ ಸಾಹಿತ್ಯಗಳು ಧಾರಾಳವಾಗಿ ಮಳಿಗೆಯಲ್ಲಿ ಮಾರಾಟವಾದವು. ಹಲವಾರು ಕಿರುಕೃತಿಗಳನ್ನು ಉಚಿತವಾಗಿ ಹಂಚಲಾಯಿತು. ಅನೇಕ ಫಲಕಗಳನ್ನು ಪ್ರದರ್ಶಿಸಲಾಗಿತ್ತು. 'ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ'ದ ಕೆಲವು ಕಾರ್ಯಕ್ರಮಗಳನ್ನು ಟಿ.ವಿ.ಯಲ್ಲಿ ತೋರಿಸಲಾಗಿತ್ತು.




ವಿವಿಧ ಧರ್ಮೀಯರಾದ ಸಾವಿರಾರು ಮಂದಿ ಮಳಿಗೆಗೆ ಭೇಟಿ ನೀಡಿ ಮಾತು ಮತ್ತು ಬರಹ ಮೂಲಕ ಅಹ್ಮದಿಯಾ ಮುಸ್ಲಿಂ ಜಮಾಅತ್ ಸಲ್ಲಿಸುತ್ತಿರುವ ಧರ್ಮ ಸೇವೆಯ ಬಗ್ಗೆ ಶ್ಲಾಘಿಸಿದ್ದಾರೆ.

## ಪ್ರತಿಕ್ರಿಯೆ

## ಅಹ್ಮದಿಯರು ಯಥಾರ್ಥ ಮುಸ್ಲಿಮರು

ದಿನಾಂಕ ಜನವರಿ 1ರ ಉದಯವಾಣಿಯಲ್ಲಿ 'ಕದಿಯಾನಿ ಸಮುದಾಯದ ಸದಸ್ಯರು ಇಸ್ಲಾಂ ಮತಾವಲಂಬಿಗಳಲ್ಲ' ಎಂದು ಮಕ್ಕಾ ಮಸೀದಿಯ ಇಮಾಂ ಹೊರಡಿಸಿರುವ ಫತ್ವಾವನ್ನು ದಾರುಲ್ ಉಲೂಂ ದೇವಬಂದ್ ಎತ್ತಿ ಹಿಡಿದಿದೆ ಎಂಬ ವಾರ್ತೆ ಪ್ರಕಟವಾಗಿತ್ತು.

ಯಾರನ್ನೂ ಅಡ್ಡ ಹೆಸರಿನಿಂದ ಕರೆಯಬಾರದೆಂದು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಆಜ್ಞಾಪಿಸಿದ್ದರೂ ಅದನ್ನು ಧಿಕ್ಕರಿಸಿ ಇತರ ಮುಸ್ಲಿಮರು ಅಹ್ಮದೀ ಮುಸ್ಲಿಮರನ್ನು "ಕಾದಿಯಾನಿ" ಎಂದು ಕರೆಯುತ್ತಾರೆ.

ಒಬ್ಬನು "ಮುಸ್ಲಿಂ" ಎಂದು ಪರಿಗಣಿಸಲ್ಪಡಬೇಕಾದರೆ ಇಸ್ಲಾಮಿನ ಮೂಲಭೂತ ಆರು ವಿಶ್ವಾಸಗಳನ್ನು ಹೊಂದಬೇಕಲ್ಲದೆ ಐದು ಅನುಷ್ಠಾನಕರ್ಮಗಳನ್ನು ಪಾಲಿಸಬೇಕು. ಅಹ್ಮದಿಯರು ಎಲ್ಲ ಆರು ಮೂಲಭೂತ ವಿಶ್ವಾಸಗಳನ್ನು ದೃಢವಾಗಿ ಹೊಂದಿರುವರಲ್ಲದೆ ಐದು ಅನುಷ್ಠಾನ ಕರ್ಮಗಳನ್ನೂ ನಿಷ್ಠೆಯಿಂದ ಪಾಲಿಸುವವರಾಗಿದ್ದಾರೆ. ಹಾಗಿರುವಾಗ, ಅಹ್ಮದಿಯರು ಮುಸ್ಲಿಮರು ಎಂಬುದಕ್ಕೆ ನಮಗೆ ಅಲ್ಲಾಹನ ಸಾಕ್ಷ್ಯ ಸಾಕು. ಬೇರೊಬ್ಬ ಮುಲ್ಲಾ ಅಥವಾ ಮುಫ್ತಿಯ ಪ್ರಮಾಣ ಪತ್ರ ಅಹ್ಮದಿಯರಿಗೆ ಅಗತ್ಯವಿಲ್ಲ.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) "ಮುಸ್ಲಿಂ" ಪದಕ್ಕೆ ವಿವರಣೆ ನೀಡಿದ್ದಾರೆ. ಮದೀನ ನಗರದಲ್ಲಿ ನಡೆಸಿದ ಪ್ರಥಮ ಜನಗಣತಿಯ ಸಂದರ್ಭದಲ್ಲಿ ಅವರು ಹೀಗೆಂದರು: "ತಾನು ಮುಸ್ಲಿಂ ಎಂದು ಹೇಳುವ ಪ್ರತಿಯೊಬ್ಬನ ಹೆಸರನ್ನು ಬರೆದು ನನಗೆ ಕೊಡಿರಿ." (ಸಹೀಹ್ ಬುಖಾರಿ)

ಯಾರಿಗೂ ಒಬ್ಬ ಮುಸ್ಲಿಮನನ್ನು "ಮುಸ್ಲಿಂ ಅಲ್ಲ" ಎಂದು ಹೇಳುವ ಅಧಿಕಾರವಿಲ್ಲ. ಹಾಗೆ ಯಾರಾದರೂ ಹೇಳಿದರೆ, ಹಾಗೆ ಹೇಳಿದವನು ಮುಸ್ಲಿಮನಲ್ಲದವನಾಗುತ್ತಾನೆ ಎಂದು ಸಹ ಹಝ್ರತ್ ಪೈಗಂಬರರು(ಸ) ಹೇಳಿದ್ದಾರೆ.

ಮಕ್ಕಾ ಮಸೀದಿಯ ಇಮಾಮರ ಫತ್ವಾವನ್ನು ಮಂಗಳೂರಿನ ಸಲಫಿಗಳು ಸ್ವಾಗತಿಸಿದ್ದಾರೆ. ದೇವಬಂದಿಗಳು ಮತ್ತು ಸಲಫಿಗಳು ನೈಜ ಮುಸ್ಲಿಮರಲ್ಲ; ಅವರು ಕಾಫಿರ್ ಎಂದು ಸುನ್ನಿ ಮತ್ತು ಇತರ ಮುಸ್ಲಿಂ ಧರ್ಮ ಪಂಡಿತರು ಫತ್ವಾ ಹೊರಡಿಸಿದ್ದಾರೆ. ಆ ಬಗ್ಗೆ ದೇವಬಂದಿಗಳ ಮತ್ತು ಸಲಫಿಗಳ ಪ್ರತಿಕ್ರಿಯೆ ಏನು? ತಿಳಿಯಲು ಕುತೂಹಲವಿದೆ.

-ಮುಹಮ್ಮದ್ ಯೂಸುಫ್

ಕಾರ್ಯದರ್ಶಿ,

ಅಹ್ಮದಿಯಾ ಮುಸ್ಲಿಂ ಜಮಾಅತ್, ಮಂಗಳೂರು

## ಧಾರ್ಮಿಕ ಸೌಹಾರ್ದ ಅಭಿಯಾನ ನಾಟಕ!

ಜಮಾಅತೆ ಇಸ್ಲಾಮೀ ಹಿಂದ್ ದ.ಕ. ಮಂಗಳೂರು ಮಾರ್ಚ್ 16ರಿಂದ 30ರ ತನಕ ಧಾರ್ಮಿಕ ಸೌಹಾರ್ದ ಅಭಿಯಾನ ನಡೆಸಿದ್ದು ಹಾಸ್ಯಾಸ್ಪದವಾಗಿದೆ.

ಜಮಾಅತೆ ಇಸ್ಲಾಮೀ ಸಂಘಟನೆಯ ಸ್ಥಾಪಕ ಮೌಲಾನ ಅಬುಲ್ ಆಲಾ ಮೌದೂದಿ ಓರ್ವ ಉಗ್ರವಾದಿ ಮುಲ್ಲಾ ಆಗಿದ್ದಾರೆ. ಯಾವುದೇ ಇಸ್ಲಾಮೇತರ ಸರಕಾರಕ್ಕೆ ವಿಧೇಯರಾಗಬಾರದೆಂದು ಅವರು ಉಪದೇಶಿಸುತ್ತಾ ಇಸ್ಲಾಮೇತರ ಸರಕಾರವನ್ನು ಉರುಳಿಸಿ ಇಸ್ಲಾಮಿಕ ಆಡಳಿತವನ್ನು ಸ್ಥಾಪಿಸಲು ನಡೆಸುವ ಹೋರಾಟವನ್ನು 'ಜಿಹಾದ್' ಎಂದು ಹೆಸರಿಸಿ, ಈ ಹೋರಾಟಕ್ಕಾಗಿ ಸರ್ವ ಸಿದ್ಧತೆ ನಡೆಸಬೇಕೆಂದು ಅವರು 'ಮುಸ್ಲಿಮರಿಗೆ' ಬೋಧಿಸುತ್ತಾರೆ. ಅವರ 'ಹಖೀಖತೆ ಜಿಹಾದ್', 'ಅಲ್ ಜಿಹಾದ್ ಫಿಲ್ ಇಸ್ಲಾಂ' ಎಂಬೀ ಕೃತಿಗಳಲ್ಲಿ ಈ ವಿಚಾರವನ್ನು ಪ್ರತಿಪಾದಿಸಿ ಜನರನ್ನು ಅವರು ಭಯೋತ್ಪಾದನ ಚಟುವಟಿಕೆಗಳಿಗೆ ಪ್ರಚೋದಿಸಿದ್ದಾರೆ.

ಮುಲ್ಲಾ ಮೌದೂದಿಯವರ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡಿರುವ ಜಮಾಅತೆ ಇಸ್ಲಾಮೀ ಸಂಘಟನೆಗೆ ಪ್ರಾಮಾಣಿಕವಾದ ಧಾರ್ಮಿಕ ಸೌಹಾರ್ದ ಅಭಿಯಾನ ನಡೆಸಲು ಅಸಾಧ್ಯ. ಅವರ ಈ ಅಭಿಯಾನ ಸರಕಾರ ಮತ್ತು ಜನತೆಯ ಕಣ್ಣಿಗೆ ಮಣ್ಣೆರಚಲು ಮಾಡುವ ನಾಟಕವಾಗಿದೆ! ಆಡಳಿತಾರೂಢರು ಮತ್ತು ಜನರು ಇದನ್ನು ತಿಳಿಯದಿರುವುದು ದುರದೃಷ್ಟಕರ.

-ಐ.ಎ. ರಶೀದ್, ಮಂಗಳೂರು

ಓದಿದ್ದು

# ಭುಟ್ಟೋ ಕುಟುಂಬದ ಅಧಃಪತನ

ದುರಂತಗಳ ಸರಮಾಲೆಯೇ ಭುಟ್ಟೋ ಕುಟುಂಬವನ್ನು ಆವರಿಸಿಕೊಂಡಿದೆ. ಕುಟುಂಬದಲ್ಲಿ ದುರಂತ ಅಂತ್ಯ ಕಂಡವರಲ್ಲಿ ಇಂದು ಹತ್ಯೆಗೀಡಾದ ಬೆನಜೀರ್ ಭುಟ್ಟೋ ಅವರು ನಾಲ್ಕನೇ ವ್ಯಕ್ತಿ.

1979ರ ಎಪ್ರಿಲ್ 4ರಂದು ಬೆನಜೀರ್ ತಂದೆ ಜುಲ್ಫೀಕರ್ ಅಲಿ ಭುಟ್ಟೋ ಅವರನ್ನು ನೇಣಿಗೆ ಹಾಕುವುದರೊಂದಿಗೆ ಭುಟ್ಟೋ ಕುಟುಂಬಕ್ಕೆ ಸೇರಿದ ಮೊದಲ ವ್ಯಕ್ತಿ ದುರಂತ ಅಂತ್ಯವನ್ನು ಕಂಡಿದ್ದರು.

ಕೇವಲ ಒಂದು ವರ್ಷದ ಅವಧಿಯಲ್ಲಿಯೇ ಭುಟ್ಟೋ ಕುಟುಂಬ ಮತ್ತೊಂದು ದುರಂತ ಸಾವನ್ನು ಎದುರಿಸಿತು. ಫ್ರಾನ್ಸಿನಲ್ಲಿ ಬೆನಜೀರ್ ಭುಟ್ಟೋ ಅವರ ಸಹೋದರ ಶಹನವಾಜ್ ಅವರು ಸಂಶಯಾಸ್ಪದ ರೀತಿಯಲ್ಲಿ ಸಾವನ್ನಪ್ಪಿದರು.

1996ರಲ್ಲಿ ಬೆನಜೀರ್ ಭುಟ್ಟೋ ಅವರ ಇನ್ನೋರ್ವ ಸಹೋದರ ಮಿರ್ ಮುರ್ತಾಜ ಅವರು ಹತ್ಯೆಗೀಡಾಗಿದ್ದರು. ಅಂದಿನ ಈ ದುರ್ಘಟನೆ ಬೆನಜೀರ್ ಭುಟ್ಟೋ ಅವರ ಸರಕಾರವನ್ನೇ ಅಸ್ಥಿರಗೊಳಿಸಿತ್ತು.

ಬೆನಜೀರ್ ಭುಟ್ಟೋ ಹತ್ಯೆಯೊಂದಿಗೆ ಭುಟ್ಟೋ ಕುಟುಂಬದಲ್ಲಿ ನಾಲ್ವರು ವ್ಯಕ್ತಿಗಳು ದುರಂತ ಅಂತ್ಯ ಕಂಡಂತಾಗಿದೆ.

- ಉದಯವಾಣಿ, ಮಣಿಪಾಲ
28-12-2007

## ಸಂಪಾದಕರಿಗೆ ಪತ್ರ

ನಾನು "ಯುಗರಶ್ಮಿ" ಪತ್ರಿಕೆಯನ್ನು ನಿರಂತರ ಓದಲು ಇಚ್ಛಿಸಿದ್ದೇನೆ.... ಜೀವನದಲ್ಲಿ ಒಮ್ಮೆಯಾದರೂ ಓದಲೇಬೇಕಾದ, ಆ ಮೂಲಕ ಸ್ವರ್ಗದ ಬಾಗಿಲು ತಟ್ಟಬಹುದಾದ ಕೀಲಿ ಕೈ, ಉದಾತ್ತ ಪತ್ರಿಕೆಯಾದ "ಯುಗರಶ್ಮಿ" ನಮ್ಮ ಮನೆ ಮತ್ತು ಮನಸ್ಸನ್ನು ಬೆಳಸಲಿ ಎಂಬುದೇ ನನ್ನ ಆಸೆ.

ಡಿಸೆಂಬರ್ 2007ರ "ಯುಗರಶ್ಮಿ" ಪತ್ರಿಕೆ ಓದಿ ಬಹಳ ಸಂತೋಷವೆನಿಸಿತು. ಮುಸ್ಲಿಮರ ಬಗ್ಗೆ ನನ್ನಲ್ಲಿದ್ದ ತಿರಸ್ಕಾರ ಭಾವನೆ ನಿಮ್ಮ ಪತ್ರಿಕೆಯನ್ನು ನಿರಂತರವಾಗಿ ಓದುತ್ತಾ ಬಂದ ಮೇಲೆ ದೂರವಾಗಿದೆ. ಇಸ್ಲಾಂ ಧರ್ಮದ ಬಗ್ಗೆ ಗೌರವ, ಪ್ರೀತಿ ಇಮ್ಮಡಿಸಿದೆ. ಎಂಥವರಿಗೂ ಅರ್ಥವಾಗುವಂತೆ ಇಸ್ಲಾಂ ಧರ್ಮದ ಸಾರವನ್ನು ಉಣಬಡಿಸುತ್ತಿರುವ ಸರಳ ಶೈಲಿಯ ಉದಾತ್ತ ಪತ್ರಿಕೆ ನಿಮ್ಮ ಈ "ಯುಗರಶ್ಮಿ". ಇಸ್ಲಾಂ ಬಗೆಗಿನ ಪೂರ್ವಗ್ರಹ ಕಡಿಮೆಯಾಗಲು ಕಾರಣವಾದ "ಯುಗರಶ್ಮಿ" ಪತ್ರಿಕೆಗೆ ಮತ್ತು ಗುರುಗಳಾದ ಸಂಪಾದಕರಿಗೆ ನಾನು ಅತ್ಯಂತ ಋಣಿಯಾಗಿದ್ದೇನೆ.

"ಜಿಹಾದ್" ಕುರಿತ ಲೇಖನ ಅದ್ಭುತವಾಗಿದೆ. ಇದೇ ರೀತಿ ಪತ್ರಿಕೆ ಉತ್ತಮವಾದ ಲೇಖನಗಳೊಂದಿಗೆ ಸರಳ ಶೈಲಿ, ಅಂದವಾದ ಮುದ್ರಣದೊಂದಿಗೆ ನಿರಂತರವಾಗಿ ಪ್ರಕಟವಾಗುತ್ತಿರಲಿ. ಇದು ನನ್ನ ಹಾರೈಕೆ.

ಎನ್.ಬಿ. ಜಯಣ್ಣ
ಕನ್ನಡ ಅಧ್ಯಾಪಕರು,
ಸ.ಪ.ಪೂ. ಕಾಲೇಜು,
ತಿತಿಮತಿ

# ಇಸ್ಲಾಂ ಧರ್ಮ ತತ್ವಜ್ಞಾನ

ಗ್ರಂಥಕರ್ತ : ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

*ಈ ಐದು ಪ್ರಶ್ನೆಗಳಿಗೆ ಇಸ್ಲಾಮಿಕ ದೃಷ್ಟಿಯ ಉತ್ತರ :*

1. ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು.
2. ಮಾನವನ ಮರಣಾನಂತರದ ಸ್ಥಿತಿ.
3. ಮಾನವನ ಐಹಿಕ ಜೀವಿತೋದ್ದೇಶ ಮತ್ತು ಅದನ್ನು ಗಳಿಸುವ ಮಾರ್ಗಗಳು.
4. ಧರ್ಮ ನಿಯಮಾನುಸರಣೆ ಇಹಪರ ಜೀವಿತದಲ್ಲಿ ಉಂಟುಮಾಡುವ ಫಲಗಳು.
5. ದೈವಿಕ ಜ್ಞಾನ ಸಿದ್ಧಿಯ ಮಾರ್ಗಗಳು.

ಬೆಲೆ : ರೂ. 25/-

# ಸನ್ಮಾರ್ಗ ದರ್ಶಕ

ಗ್ರಂಥಕರ್ತ : ಹಝ್ರತ್ ಮಿರ್ಝಾ ಬಶೀರ್ ಅಹ್ಮದ್

ಅಹ್ಮದಿಯಾ ಜಮಾಅತಿನ ವಿಶ್ವಾಸಾದರ್ಶಗಳ ಬಗ್ಗೆ ತಿಳಿಯಲು ಒಂದು ಉತ್ತಮ ಕೃತಿ.

ಬೆಲೆ : ರೂ. 65/-

ಮೇಲಿನ ಎರಡೂ ಪುಸ್ತಕಗಳಿಗೋಸ್ಕರ ಸಂಪರ್ಕಿಸಿರಿ :

**Ahmaddiya Muslim Mission**
**No. 1, 3rd Cross Road**
**Wilson Garden**
**Bangalore - 560 027**


**"LOVE FOR ALL**

**HATRED FOR NONE"**

"ಎಲ್ಲರೊಡನೆಯೂ ಪ್ರೀತಿ

ಯಾರೊಡನೆಯೂ ದ್ವೇಷವಿಲ್ಲ"

# ಧರ್ಮದ ನಾಮದಲ್ಲಿ ರಕ್ತಪಾತ

ಪುಸ್ತಕ ವಿಭಾಗ

ಅಧ್ಯಾಯ - 7

- ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್

## ಧರ್ಮತ್ಯಾಗಕ್ಕೆ ಶಿಕ್ಷೆ

ಇಸ್ಲಾಮ್ ಧರ್ಮವು ಧರ್ಮತ್ಯಾಗಿಗೆ ಶಾರೀರಿಕವಾದ ದಂಡನೆ ನೀಡುತ್ತದೆ ಎಂಬ ಕಲ್ಪನೆಯು ತಪ್ಪಾದುದೆಂದು ಸಾಬೀತುಗೊಳಿಸಲು ನಾವು ಪವಿತ್ರ ಖುರ್‌ಆನ್‌ನಿಂದಲೂ ಇಸ್ಲಾಮಿನ ಚರಿತ್ರೆಯಿಂದಲೂ ಅನೇಕ ಉದ್ಧರಣೆಗಳನ್ನು ಇದರ ಮೊದಲಿನ ಅಧ್ಯಾಯಗಳಲ್ಲಿ ನೀಡಿದ್ದೇವೆ. ಇಕ್ರಿಮರವರು ನೀಡಿದ ವರದಿ ಮತ್ತು ಅಬೂಬಕರ್‌ರವರ[ರ] ಕಾಲದಲ್ಲಿ ನಡೆದ ಝಕಾತ್ ವಿರುದ್ಧ ವಿದ್ರೋಹದ ಉದಾಹರಣೆ ನೀಡಿ ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ಪ್ರತಿಪಾದಿಸುವವರ ವಾದವನ್ನು ನಾವು ಸವಿಸ್ತಾರವಾಗಿ ಪರಿಶೀಲಿಸಿದ್ದೇವೆ. ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ಪ್ರತಿಪಾದಿಸುವವರ ಬೇರೆ ಕೆಲವು ವಾದಗಳನ್ನು ನಾವು ಈ ಅಧ್ಯಾಯದಲ್ಲಿ ಪರಿಶೀಲಿಸಲಿದ್ದೇವೆ.

ಇಸ್ಲಾಮ್ ಧರ್ಮದಲ್ಲಿ ಬಲಾತ್ಕಾರವಿದೆ ಎಂಬ ಪರಿಕಲ್ಪನೆ ಹುಟ್ಟಿದುದು ಇಸ್ಲಾಮಿನ ನೆಲದಲ್ಲಿಯೋ ಅಥವಾ ಅದು ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು (Orientalists) ಜನ್ಮ ನೀಡಿದ ಕೂಸಾಗಿದ್ದು ಅದನ್ನು ಇಸ್ಲಾಮಿನ ಮಡಿಲಿಗೆ ವರ್ಗಾಯಿಸಲಾಯಿತೋ ಎಂಬುದರ ಬಗ್ಗೆ ನಿಖರವಾಗಿ ತೀರ್ಪು ನೀಡುವುದು ಕಷ್ಟಕರವಾಗಿದೆ. ಇಸ್ಲಾಮಿನ ಚರಿತ್ರೆಯ ಬೆಳಕಿನಲ್ಲಿ ಇದನ್ನು ಪರಿಶೀಲಿಸಿದಾಗ ನಾನು ಪ್ರಾಮಾಣಿಕವಾಗಿ ನಂಬುವುದೇನೆಂದರೆ, ಈ ವಿಚಾರವು ಮೊಟ್ಟ ಮೊದಲು ಇಸ್ಲಾಮೀ ಜಗತ್ತಿನಲ್ಲಿಯೇ ಹುಟ್ಟಿತು. ಇದನ್ನು ಪ್ರಾರಂಭಿಸಿದವರು ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರೆಂದು ಆರೋಪಿಸುವುದು ತಪ್ಪಾಗಿದೆ. ಅವರು ಈ ವಿಚಾರವನ್ನು ಮುಸ್ಲಿಮರಿಂದಲೇ ಎತ್ತಿಕೊಂಡರು. ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು ಹುಟ್ಟುವ ಮೊದಲೇ ಇಸ್ಲಾಮಿನಲ್ಲಿ ಈ ವಿಚಾರವು ಮಧ್ಯಕಾಲದಿಂದಲೇ ಅಸ್ತಿತ್ವದಲ್ಲಿತ್ತು. ಉಮವೀ ಸಾಮ್ರಾಜ್ಯದ ಕೊನೆಯ ಘಟ್ಟದಲ್ಲಿ ಈ ವಿಚಾರ ತಲೆದೋರಿತು. ಅಬ್ಬಾಸೀ ವಂಶದ ದೊರೆತನದ ಕಾಲದಲ್ಲಿ ಈ ವಿಚಾರ ಬೆಳವಣಿಗೆ ಪಡೆಯಿತು ಮತ್ತು ಶಕ್ತಿಗಳಿಸಿತು. ಅಬ್ಬಾಸೀ ವಂಶದ ದೊರೆಗಳು ಇಸ್ಲಾಮಿನ ಶತ್ರುಗಳ ವಿರುದ್ಧ ಮಾತ್ರವಲ್ಲ ತಮ್ಮ ಸ್ವಂತ ಜನರ ಮೇಲೆಯೂ ಬಲಪ್ರಯೋಗ ಮಾಡಬಯಸುತ್ತಿದ್ದರು. ಅವರ ಪ್ರಭಾವಕ್ಕೆ ಅಧೀನರಾದ ಮುಸ್ಲಿಮ್ ಮತಪಂಡಿತರಿಂದ ಇದಕ್ಕಾಗಿರುವ ಅನುಮತಿಯನ್ನು ಅವರು ಆಗಾಗ ದೊರಕಿಸಿಕೊಳ್ಳುತ್ತಿದ್ದರು. ಇಸ್ಲಾಮಿನ ಪ್ರಥಮ ನಾಲ್ಕು ಖಲೀಫರ ನಂತರ (ಖಿಲಾಫತುರ್ರಾಶಿದ) ಅಧಿಕಾರಕ್ಕೆ ಬಂದ ಬಗ್ದಾದಿನ ಮುಸ್ಲಿಮ್ ಸರಕಾರದ ನಡವಳಿಕೆ ಮತ್ತು ಧೋರಣೆಗಳಿಂದ ಈ ಪರಿಕಲ್ಪನೆ ಮೇಲೆದ್ದಿತು.

ಈ ಸಂಭವವನ್ನು ಹೊರಗಿನಿಂದ ವೀಕ್ಷಿಸಿದ ಪಾಶ್ಚಿಮಾತ್ಯ ವಿದ್ವಾಂಸರು ಇದನ್ನು ಇಸ್ಲಾಮಿನ ಉಪದೇಶಗಳ ಭಾಗ ಎಂದು ನಂಬಿದರು. ಆದರೆ ಈ ವಿಚಾರ ಇಸ್ಲಾಮಿನ ಭಾಗವಾಗಿರಲಿಲ್ಲ. ಕೆಲವು ಮುಸ್ಲಿಮ್ ಸರಕಾರಗಳ ವರ್ತನೆಯ ಮೂಲಾಧಾರ ಈ ವಿಚಾರವಾಗಿತ್ತು. ಈ ವಿಚಾರ ಜನ್ಮತಾಳಿದ ಕಾಲವನ್ನು ಸಹ ನಾವು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಪ್ರಭಾವವನ್ನು ಮತ್ತು ತತ್ವಶಾಸ್ತ್ರವನ್ನು ಹರಡಲು ಬಲಪ್ರಯೋಗವು ಸಾಮಾನ್ಯವಾಗಿ ಲೋಕದಾದ್ಯಂತ ರೂಢಿಯಲ್ಲಿದ್ದ ಕಾಲವು ಅದಾಗಿತ್ತು. ಅದರ ಪ್ರಭಾವಕ್ಕೆ ಈ ವಿಚಾರವೂ ಪಾತ್ರವಾಯಿತು.

ಇಸ್ಲಾಮ್ ಧರ್ಮವು ತನ್ನ ತತ್ವ ಪ್ರಸಾರಕ್ಕೆ ಬಲಪ್ರಯೋಗವನ್ನು ಪ್ರತಿಪಾದಿಸುತ್ತದೆ ಎಂಬ ಆರೋಪವು ಇಸ್ಲಾಮಿನ ಪಾಠಗಳನ್ನು ಅಧ್ಯಯನ ಮಾಡುವುದರಿಂದ ಉದ್ಭವಿಸುವುದಿಲ್ಲ. ಆದರೆ ಕೆಲವು ಮುಸ್ಲಿಮ್ ದೇಶಗಳ ವರ್ತನೆಯ ಕಾರಣದಿಂದ ಈ ಆರೋಪವು ಉಂಟಾಗಿದೆ.

ಈಗ ಹೊಸದಾದೊಂದು ಯುಗವು ಉದಿಸಿದೆ. ಈಗ ಎಲ್ಲಾ ವಿಧಗಳ ಇಸ್ಲಾಮೀ ಸಾಹಿತ್ಯಗಳು ಲಭಿಸುತ್ತಿವೆ. ಪವಿತ್ರ ಖುರ್‌ಆನ್ ಅನೇಕ ಭಾಷೆಗಳಿಗೆ ಭಾಷಾಂತರಿಸಲ್ಪಟ್ಟಿದೆ. ಪಾಶ್ಚಿಮಾತ್ಯ ವಿದ್ವಾಂಸರಿಗೆ ಇಸ್ಲಾಮಿನ ತತ್ವಗಳನ್ನು ವಿವರಿಸುವ ಸಾಹಿತ್ಯಗಳಿಗೆ ನೇರವಾಗಿ ಸಂಪರ್ಕ ಉಂಟಾಗಿದೆ. ಹೀಗಿರುವಾಗ ಅವರು ಇಸ್ಲಾಮಿನ ವಿರುದ್ಧ ಆಕ್ಷೇಪಗಳನ್ನು ಮುಂದುವರಿಸುತ್ತಾ ಇರುವುದು ಅನ್ಯಾಯಕರವಾಗಿದೆ. ಅವರು ಇಸ್ಲಾಮಿನ ಮೂಲತತ್ವಗಳ ಕಡೆಗೆ ಹೋಗಬೇಕು. ಅವರು ಪವಿತ್ರ ಖುರ್‌ಆನ್, ಹದೀಸ್ ಮತ್ತು ಮುಹಮ್ಮದ್ ಪೈಗಂಬರರ[ಸ] ನಡವಳಿಕೆಗಳನ್ನು ಪರಿಶೀಲಿಸಬೇಕು.

ನಾವು ಈ ಗ್ರಂಥದಲ್ಲಿ ಈ ವಿಷಯಕ್ಕೆ ಸಂಬಂಧಿಸಿ ಪರಿಶೀಲನೆ ಮಾಡುವ ಪ್ರಯತ್ನ ಮಾಡಿದ್ದೇವೆ. ಆದರೆ ನಮ್ಮ ಪರಿಶೀಲನೆ ಪವಿತ್ರ ಖುರ್‌ಆನಿನ ಮೂಲ ತತ್ವಗಳಿಗೆ ಮತ್ತು ಆ ತತ್ವಗಳನ್ನು ಪ್ರವಾದಿಯವರ[ಸ] ನಡೆ-ನುಡಿಗಳ ಮೂಲಕ ವ್ಯಾಖ್ಯಾನಿಸಿದುದಕ್ಕೆ ಸೀಮಿತವಾಗಿರುವುದು. ಒಂದು ಕಾಲಘಟ್ಟದಲ್ಲಿ ಮುಸ್ಲಿಮರು ಹೇಗೆ ವರ್ತಿಸಿದರು ಎಂಬುದನ್ನು ನಾವು ಇಲ್ಲಿ ಗಣನೆಗೆ ತೆಗೆದುಕೊಂಡಿಲ್ಲ.

ಒಂದು ಧರ್ಮದ ಉಪದೇಶಗಳನ್ನು ಆ ಧರ್ಮದ ಅನುಯಾಯಿಗಳ ನಡವಳಿಕೆಯನ್ನು ಪರಿಶೀಲಿಸಿ ತೀರ್ಮಾನಿಸುವ ಪ್ರವೃತ್ತಿಯು ಜನರನ್ನು ಆ ಧರ್ಮದ ನಿಜವಾದ ತತ್ವಗಳ ಬಗ್ಗೆ ತಪ್ಪುಗ್ರಹಿಕೆಗೆ ಗುರಿಪಡಿಸುತ್ತದೆ. ಒಂದು ಸಂಗತಿ ಸಾರ್ವತ್ರಿಕವಾಗಿ ಕಂಡುಬರುತ್ತದೆ - ಎಲ್ಲಾ ಧರ್ಮಗಳು ತಮ್ಮ ಅನುಯಾಯಿಗಳ ಮೇಲೆ ಬೀರುವ ಪ್ರಭಾವವು ಒಂದು ಕಾಲಾವಧಿಯ ನಂತರ ಕಡಿಮೆಯಾಗುತ್ತದೆ. ಇದಕ್ಕೆ ಉದಾಹರಣೆಗೆ ಬೇಕಾಗಿ ನೀವು ಇಂದಿನ ಬುದ್ಧ ಮತಾವಲಂಬಿಗಳನ್ನು ಮತ್ತು ಹಿಂದಿನ ಕಾಲದ ಬುದ್ಧ ಮತಾನುಯಾಯಿಗಳನ್ನು ಪರಿಶೀಲಿಸಿರಿ. ಹಿಂದೂ ಸರಕಾರಗಳ ಧೋರಣೆಗಳನ್ನು ಪರಿಶೀಲಿಸಿರಿ. ಹೀಗೆಯೇ ಬೇರೆಯವರನ್ನೂ. ಈ ಧರ್ಮಗಳ ಹಿಂದಿನ ತತ್ವಗಳಿಗೂ ಇಂದಿನ ನಡವಳಿಕೆಗಳಿಗೂ ಯಾವ ಸಂಬಂಧವೂ ಇರುವುದಿಲ್ಲ. ಮುಖ್ಯವಾಗಿ ಗಮನಿಸ ಬೇಕಾದುದೇನೆಂದರೆ, ರಾಜಕೀಯವಾದ ಒಂದು ನಡವಳಿಕೆಯನ್ನು ಧರ್ಮಕ್ಕೆ ಹೊಂದಿಸಿ ಹೇಳಬಾರದು. ಒಂದು ಜನಾಂಗದ ರಾಜಕೀಯ ನಡವಳಿಕೆಯನ್ನು ಆ ಜನಾಂಗ ನಂಬುವ ಧರ್ಮದ ತತ್ವಗಳ ಪ್ರತಿಬಿಂಬ ಎಂಬಂತೆ ಗಣಿಸಬಾರದು.

ಈ ಹಿನ್ನೆಲೆಯಲ್ಲಿ ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ಪ್ರತಿಪಾದಿಸುವವರ ವಾದವನ್ನು ಪರಿಶೀಲಿಸುತ್ತೇವೆ.

### ಧರ್ಮತ್ಯಾಗಿ ಯಾರು?

ಪವಿತ್ರ ಖುರ್‌ಆನ್ ಹೀಗೆನ್ನುತ್ತದೆ:

"ಅವರಿಗೆ ಸಾಧ್ಯವೆಂದಾದರೆ ನಿಮ್ಮ ಧರ್ಮದಿಂದ ನಿಮ್ಮನ್ನು ಮರಳಿಸುವ ವರೆಗೆ ಅವರು ನಿಮ್ಮೊಡನೆ ಯುದ್ಧ

ಮಾಡುತ್ತಲೇ ಇರುವರು. ನಿಮ್ಮ ಪೈಕಿ ಯಾರಾದರೂ ತನ್ನ ಧರ್ಮದಿಂದ ವಿಮುಖವಾಗಿ ಅವಿಶ್ವಾಸಿಯಾಗಿದ್ದುಕೊಂಡು ಮೃತಪಟ್ಟರೆ ಅಂಥವರ ಕರ್ಮಗಳು ಇಹದಲ್ಲೂ ಪರದಲ್ಲೂ ನಿಷ್ಫಲವಾಗುವುವು. ಅವರೇ ನರಕವಾಸಿಗಳು. ಅಲ್ಲಿ ಅವರು ದೀರ್ಘ ಕಾಲ ನೆಲಸುವರು." (2 : 218)

ಈ ವಚನದಿಂದ ಹೀಗೆ ತಿಳಿದು ಬರುತ್ತದೆ: ಒಬ್ಬನು ಖಡ್ಗಕ್ಕೆ ಭಯಪಟ್ಟು (ಅಥವಾ ದಂಡನೆಯ ನೋವಿಗೆ ಹೆದರಿ) ಇಸ್ಲಾಮ್ ಧರ್ಮವನ್ನು ತ್ಯಜಿಸಲು ತೀರ್ಮಾನಿಸುವುದಾದರೆ ಅವನಿಗೆ ಹಾಗೆ ಮಾಡಲು ಮೂಲಭೂತ ಹಕ್ಕಿದೆ. ಆದರೆ ಒಬ್ಬನನ್ನು ಧರ್ಮತ್ಯಾಗಿ ಎಂದು ಘೋಷಿಸುವ ಹಕ್ಕು ಅನ್ಯನಿಗಿಲ್ಲ. ತಾನು ಧರ್ಮವನ್ನು ತ್ಯಜಿಸಿದ್ದೇನೆ ಎಂದು ಹೇಳುವ ಹಕ್ಕು ಧರ್ಮವನ್ನು ತ್ಯಜಿಸುವವನಿಗೆ ಮಾತ್ರವಿದೆ. ಈ ಹಕ್ಕನ್ನು ಪವಿತ್ರ ಖುರ್‌ಆನ್ ಬೇರೆ ಯಾರಿಗೂ ನೀಡಿಲ್ಲ. ಇದರ ಅರ್ಥವೇನೆಂದರೆ, ಒಬ್ಬನಿಗೆ ತನ್ನ ಧರ್ಮವನ್ನು ತ್ಯಜಿಸುವ ಸ್ವಾತಂತ್ರ್ಯವಿದೆ. ಆದರೆ ಇನ್ನೊಬ್ಬನನ್ನು ಧರ್ಮತ್ಯಾಗಕ್ಕೆ ಒಳಪಡಿಸುವ ಹಕ್ಕು ಅವನಿಗಿರುವುದಿಲ್ಲ. ಇಸ್ಲಾಮ್ ಧರ್ಮತತ್ವಗಳ ಪ್ರಕಾರ ಹೀಗೆ ಹೇಳಬಹುದು: ಧಾರ್ಮಿಕ ವಿದ್ವಾಂಸರು, ಪುರೋಹಿತರು ಅಥವಾ ಅಸಹಿಷ್ಣು ವ್ಯಕ್ತಿ ಅಥವಾ ಸರಕಾರಕ್ಕೆ ಧರ್ಮತ್ಯಾಗಿಗಳನ್ನು ಉತ್ಪಾದಿಸಲು ಸಾಧ್ಯವಿಲ್ಲ.

ಪವಿತ್ರ ಖುರ್‌ಆನ್ ಈ ಕೆಳಗಿನಂತೆಯೂ ಹೇಳುತ್ತದೆ:

"ಸತ್ಪಥ ದರ್ಶನ ಸ್ಪಷ್ಟಗೊಂಡ ಬಳಿಕ ಯಾರು ಬೆನ್ನು ತಿರುಗಿಸಿ ಹೋಗುತ್ತಾರೋ ಅವರಿಗೆ (ಅವರ ಕೃತ್ಯಗಳನ್ನು) ಶೈತಾನನು ಸುಂದರಗೊಳಿಸಿ ತೋರಿಸುತ್ತಾನೆ ಹಾಗೂ ಸುಳ್ಳು ಭರವಸೆಗಳನ್ನು ನೀಡುತ್ತಾನೆ." (47 : 26)

## ಧರ್ಮತ್ಯಾಗದ ಕುರಿತು ಪವಿತ್ರ ಖುರ್‌ಆನ್‌ನಲ್ಲಿರುವ ಬೇರೆ ವಚನಗಳು :

"ಓ ವಿಶ್ವಾಸಿಗಳೇ, ನಿಮ್ಮಿಂದ ಯಾರಾದರೂ ತನ್ನ ಧರ್ಮವನ್ನು ತೊರೆದು ಹೊರಗೆ ಹೋದರೆ, ಅಲ್ಲಾಹನು ತಾನು ಪ್ರೀತಿಸುವ ಜನರ ಒಂದು ಕೋಮನ್ನು ಬದಲಿಗೆ ತರುವನು. ಅವರು ಅವನನ್ನೂ ಪ್ರೀತಿಸುವರು. ಅವರು ಸತ್ಯ ವಿಶ್ವಾಸಿಗಳೊಂದಿಗೆ ವಿನಯಾನ್ವಿತರೂ ಅವಿಶ್ವಾಸಿಗಳ ವಿರುದ್ಧ ದೃಢಚಿತ್ತರೂ ಆಗಿರುವರು. ಅವರು ಅಲ್ಲಾಹನ ಮಾರ್ಗದಲ್ಲಿ ತೀವ್ರ ಪ್ರಯತ್ನ ಮಾಡುವರು. ಯಾವನೇ ಆಕ್ಷೇಪಕನ ಆಕ್ಷೇಪಕ್ಕೂ ಅವರು ಭಯಪಡಲಾರರು. ಇದು ಅಲ್ಲಾಹನ ಅನುಗ್ರಹವಾಗಿದೆ. ತಾನಿಚ್ಛಿಸುವವರಿಗೆ ಅವನು ಅದನ್ನು ನೀಡುತ್ತಾನೆ. ಅಲ್ಲಾಹನು ಅತಿ ಉದಾರಿಯೂ ಎಲ್ಲವನ್ನು ಚೆನ್ನಾಗಿ ತಿಳಿಯುವವನೂ ಆಗಿದ್ದಾನೆ." (5 : 55)

"ಅಲ್ಲಾಹನನ್ನು ನಂಬಿದ ಬಳಿಕ ಅವಿಶ್ವಾಸ ಹೊಂದುವವನು -ಹೃದಯವು ಸತ್ಯ ವಿಶ್ವಾಸದಿಂದ ನೆಮ್ಮದಿ ಹೊಂದಿದ್ದು ಕೂಡ ನಿರ್ಬಂಧಕ್ಕೊಳಗಾದವನ ಹೊರತು - ಅಂದರೆ ತೆರೆದ ಹೃದಯದಿಂದ ಯಾರು ಸತ್ಯವನ್ನು ಅಲ್ಲಗಳೆಯುತ್ತಾರೋ ಅವರ ಮೇಲೆ ಅಲ್ಲಾಹನ ಕ್ರೋಧ ಎರಗುವುದು. ಅವರಿಗೆ ಕಠಿಣವಾದ ಶಿಕ್ಷೆ ಇದೆ." (16 : 107)

"ವಿಶ್ವಾಸವನ್ನು ಹೊಂದಿದ ಬಳಿಕ ಅವಿಶ್ವಾಸವನ್ನು ತಾಳಿ, ಪುನಃ ವಿಶ್ವಾಸಹೊಂದಿ, ಪುನಃ ಅವಿಶ್ವಾಸ ತಾಳಿ, ಅವಿಶ್ವಾಸದಲ್ಲೇ ಇನ್ನಷ್ಟು ಮುಂದುವರಿಯುವವರನ್ನು ಅಲ್ಲಾಹನು ಎಂದೂ ಕ್ಷಮಿಸಲಾರ. ಅವರಿಗೆ ಅವನು (ಮೋಕ್ಷ) ಮಾರ್ಗವನ್ನು ತೋರಿಸಿ ಕೊಡಲಾರ." (4 : 138)

"ಮುಹಮ್ಮದ್ ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರೂ ಗತಿಸಿದ್ದಾರೆ. ಒಂದು ವೇಳೆ ಅವರು (ಮುಹಮ್ಮದ್) ಮೃತಪಟ್ಟರೆ ಅಥವಾ ಹತ್ಯೆಗೀಡಾದರೆ ನೀವು ಹಿಂತಿರುಗಿ ಹೋಗುವಿರಾ? ಹಿಂತಿರುಗಿ ಹೋಗುವವನು ಅಲ್ಲಾಹನಿಗೆ ಏನೂ ಹಾನಿಯುಂಟು ಮಾಡಲಾರ. ಕೃತಜ್ಞತೆ ಸೂಚಿಸುವವರಿಗೆ ಅಲ್ಲಾಹನು ಖಂಡಿತವಾಗಿಯೂ ಪ್ರತಿಫಲ ನೀಡುತ್ತಾನೆ." (3 : 145)

ಮೇಲೆ ಉಲ್ಲೇಖಿಸಲಾದ ಪವಿತ್ರ ಖುರ್‌ಆನ್ ವಚನಗಳಲ್ಲಿ ಧರ್ಮತ್ಯಾಗಿಗೆ ಶಾರೀರಿಕ ದಂಡನೆ ವಿಧಿಸಿರುವುದಾಗಿ ಗ್ರಹಿಸುವುದು ಊಹಾತೀತವಾದ ಸಂಗತಿಯಾಗಿದೆ.

## ಸೂರಃ ಅತ್ತೌಬ

ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆಯನ್ನು ವಿಧಿಸುವುದನ್ನು ಅನುಮತಿಸುವ ಒಂದಾದರೂ ವಚನವನ್ನು ಕಂಡುಹಿಡಿಯುವ ನಿರಾಶದಾಯಕವಾದ ಪರಿಶ್ರಮದ ಅಂತಿಮ ಪರಿಣಾಮವಾಗಿ ಪವಿತ್ರ ಖುರ್‌ಆನ್ ಅಧ್ಯಾಯ - 9ರ (ಎಂದರೆ ಸೂರಃ ಅತ್ತೌಬದ) ವಚನ 12 ಮತ್ತು 13ನ್ನು ಈ ಬಗ್ಗೆ ಸಾಕ್ಷ್ಯವಾಗಿ ನೀಡಲು ಪ್ರಯತ್ನಿಸಲಾಗುತ್ತದೆ. ನಾವು ಆ ಅಧ್ಯಾಯದ 3 ರಿಂದ 14ರ ತನಕದ ವಚನಗಳನ್ನು ಈ ಕೆಳಗೆ ಉಲ್ಲೇಖಿಸುತ್ತೇವೆ. ಈ ವಚನಗಳು ಸ್ವತಃ ಪ್ರತಿಪಾದಿಸುವ ವಿಷಯವನ್ನು ವಿವರಿಸುತ್ತವೆ. ಅವುಗಳಿಗೆ ಬೇರೆಯೇ ಅರ್ಥ ಕೊಡುವುದನ್ನು ಅವು ವಿರೋಧಿಸುತ್ತವೆ. ಸೂರಃ ಅತ್ತೌಬದ ಆ ವಚನಗಳು ಹೀಗಿವೆ:

3. "ಮಹತ್ತರ ಹಜ್ಜ್ ದಿನದಂದು ಅಲ್ಲಾಹ್ ಮತ್ತು ಅವನ ಸಂದೇಶವಾಹಕನ ಕಡೆಯಿಂದ ಸಕಲ ಜನರಿಗೋಸ್ಕರ ಇದೊಂದು ಘೋಷಣೆಯಾಗಿದೆ: 'ಖಂಡಿತವಾಗಿಯೂ ಅಲ್ಲಾಹ್ ಮತ್ತು ಅವನ ಸಂದೇಶವಾಹಕ ಬಹುದೇವಾರಾಧಕರಿಂದ (ಅವರೊಡನೆ ಮಾಡಿಕೊಂಡಿರುವ ಕರಾರು ಶರ್ತಗಳಿಂದ) ವಿಮುಕ್ತರು.' ಆದ್ದರಿಂದ ನೀವು ಪಶ್ಚಾತ್ತಾಪಪಟ್ಟು ಮರಳಿದರೆ ನಿಮಗೆ ಅದು ಗುಣಕರವಾಗುವುದು. ನೀವು ವಿಮುಖರಾದರೆ ಖಂಡಿತವಾಗಿಯೂ ನಿಮಗೆ ಅಲ್ಲಾಹನ ಯೋಜನೆಗಳನ್ನು ಪರಾಜಿತಗೊಳಿಸಲು ಸಾಧ್ಯವಾಗದೆಂದು ತಿಳಿದುಕೊಳ್ಳಿರಿ. ಹಾಗೂ ನೀನು ಅವಿಶ್ವಾಸಿಗಳಿಗೆ ಮುನ್ನೆಚ್ಚರಿಕೆ ನೀಡು - ಯಾತನಾಮಯವಾದ ಶಿಕ್ಷೆ ಅವರಿಗಿದೆ."

4. "ಬಹುದೇವಾರಾಧಕರ ಪೈಕಿ ನಿಮ್ಮೊಂದಿಗೆ ಒಪ್ಪಂದ ಮಾಡಿಕೊಂಡು (ಅನಂತರ ಅದರಲ್ಲಿ) ನಿಮಗೆ ಲೋಪವನ್ನೇನೂ ಮಾಡದೆಯೂ ನಿಮಗೆದುರಾಗಿ ಯಾರಿಗೂ ನೆರವಾಗದೆಯೂ ಇರುವವರನ್ನು ಹೊರತು. ಅವರೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು (ಅದರ) ಕಾಲಾವಧಿವರೆಗೆ ನೀವು ಸಂಪೂರ್ಣವಾಗಿ ಪೂರ್ತಿಗೊಳಿಸಿರಿ. ಖಂಡಿತವಾಗಿಯೂ ಅಲ್ಲಾಹನು ಭಯಭಕ್ತಿ ತೋರಿಸುವವರನ್ನು ಪ್ರೀತಿಸುತ್ತಾನೆ."

5. "ಹಾಗೆ (ಆ ನಾಲ್ಕು) ಆದರಣೀಯ ಮಾಸಗಳು ಕಳೆದರೆ (ಒಪ್ಪಂದ ಉಲ್ಲಂಘಿಸಿದ) ಆ ಬಹುದೇವಾರಾಧಕರನ್ನು ನೀವು ಕಂಡರೆ ಅವರನ್ನು ಕೊಲ್ಲಿರಿ; ಅವರನ್ನು ಬಂಧನದಲ್ಲಿಡಿರಿ; ಅವರಿಗೆ ಮುತ್ತಿಗೆ ಹಾಕಿರಿ; ಆಯಕಟ್ಟಿನ ಸ್ಥಳಗಳಲ್ಲೆಲ್ಲ ಅವರಿಗಾಗಿ ಹೊಂಚುಹಾಕಿರಿ. ಆದರೆ, ಅವರು ಪಶ್ಚಾತ್ತಾಪಟ್ಟು

ನಮಾಝನ್ನು ಕ್ರಮಬದ್ಧವಾಗಿ ಅನುಷ್ಠಿಸಿದರೆ ಹಾಗೂ ಝಕಾತ್ ನೀಡಿದರೆ ಅವರನ್ನು ಅವರ ದಾರಿಯಲ್ಲಿ ಬಿಟ್ಟುಬಿಡಿರಿ. ಖಂಡಿತವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ."

6. "ಬಹುದೇವಾರಾಧಕರಲ್ಲಿ ಯಾರಾದರೂ ನಿನ್ನೊಡನೆ ಅಭಯ ಯಾಚಿಸಿದರೆ, ಅವನಿಗೆ ಆಶ್ರಯ ನೀಡು. ಹಾಗೆ ಅವನು ಅಲ್ಲಾಹನ ವಚನ ಆಲಿಸುವಂತಾಗಲಿ. ಅನಂತರ ಅವನನ್ನು ಅವನ ಸುರಕ್ಷಿತ ಸ್ಥಳಕ್ಕೆ ತಲಪಿಸು. ಇದು (ಈ ರಿಯಾಯಿತಿ) ಅವರು ತಿಳುವಳಿಕೆ ಇಲ್ಲದ ಜನರಾದುದರಿಂದಾಗಿದೆ."

7. "ಮಸ್‌ಜಿದುಲ್ ಹರಾಮಿನ ಸಮೀಪ ನಿಮ್ಮೊಂದಿಗೆ ಒಪ್ಪಂದ ಮಾಡಿಕೊಂಡವರನ್ನು ಹೊರತು ಇತರ ಬಹುದೇವಾರಾಧಕರಿಗೆ ಅಲ್ಲಾಹನ ಮತ್ತು ಅವನ ಸಂದೇಶ ವಾಹಕನ ಜೊತೆ ಒಂದು ಒಪ್ಪಂದವಾಗಿರುವುದಾದರೂ ಹೇಗೆ? ಅವರು ಎಷ್ಟರ ತನಕ ನಿಮ್ಮೊಡನೆ ನೇರವಾಗಿರುತ್ತಾರೋ ನೀವು ಸಹ ಅವರೊಡನೆ ನೇರವಾಗಿರಿ. ಖಂಡಿತವಾಗಿಯೂ ಅಲ್ಲಾಹನು ಭಯಭಕ್ತಿ ತೋರಿಸುವವರನ್ನು ಪ್ರೀತಿಸುತ್ತಾನೆ."

8. "(ಆ ಬಹುದೇವಾರಾಧಕರಿಗೆ ರಿಯಾಯಿತಿ ನೀಡುವುದಾದರೆ ಹೇಗೆ?) ಅವರು ನಿಮ್ಮ ಮೇಲೆ ವಿಜಯ ಗಳಿಸಿದರೆ ನಿಮ್ಮೊಂದಿಗಿನ ಕುಟುಂಬ ಸಂಬಂಧವನ್ನಾಗಲೀ ಒಪ್ಪಂದವನ್ನಾಗಲೀ ಪರಿಗಣಿಸಲಾರರು. ಅವರು ಬಾಯಿಮಾತಿನಿಂದ ನಿಮ್ಮನ್ನು ಸಂತೋಷಪಡಿಸಲು ಪ್ರಯತ್ನಿಸುತ್ತಾರೆ. ಅವರ ಹೃದಯಗಳು ಅದನ್ನು ಒಪ್ಪುವುದಿಲ್ಲ. ಅವರಲ್ಲಿ ಹೆಚ್ಚಿನವರು ವಿಶ್ವಾಸಘಾತಕರಾಗಿದ್ದಾರೆ."

9. "ಅಲ್ಲಾಹನ ವಚನಗಳಿಗೆ ಪ್ರತಿಯಾಗಿ ಅವರು ಅಲ್ಪ ಬೆಲೆ ಪಡೆದುಕೊಂಡಿದ್ದಾರೆ ಹಾಗೂ ಅವನ ಮಾರ್ಗದಿಂದ ಅವರು (ಜನರನ್ನು) ತಡೆದಿದ್ದಾರೆ. ಅವರು ಗೈದ ಕೃತ್ಯಗಳು ಬಹಳ ಕೆಟ್ಟದ್ದಾಗಿವೆ."

10. "ಯಾವ ವಿಶ್ವಾಸಿಯ ವಿಚಾರದಲ್ಲೂ ಕುಟುಂಬ ಸಂಬಂಧವನ್ನಾಗಲಿ, ಒಪ್ಪಂದವನ್ನಾಗಲಿ ಅವರು ಗಮನಿಸುವುದಿಲ್ಲ. ಅವರೇ ಹದ್ದು ಮೀರಿದವರಾಗಿದ್ದಾರೆ."

11. "ಆದರೆ ಅವರು ಪಶ್ಚಾತ್ತಾಪಪಟ್ಟು ನಮಾಝನ್ನು ನಿಷ್ಠೆಯಿಂದ ನಿರ್ವಹಿಸಿ ಝಕಾತ್ ನೀಡಿದರೆ ಅವರು ನಿಮ್ಮ ಧಾರ್ಮಿಕ ಸಹೋದರರಾಗುತ್ತಾರೆ. ನಾವು ನಮ್ಮ ದೃಷ್ಟಾಂತಗಳನ್ನು ತಿಳುವಳಿಕೆಯುಳ್ಳ ಜನರಿಗೋಸ್ಕರ ವಿವರಿಸಿಕೊಡುತ್ತೇವೆ."

12. "ಇನ್ನು ಅವರು ಒಡಂಬಡಿಕೆಯ ಬಳಿಕ ತಮ್ಮ ವಚನ ಪಾಲಿಸದಿದ್ದರೆ ಮತ್ತು ನಿಮ್ಮ ಧರ್ಮವನ್ನು ಅವಹೇಳಿಸಿದರೆ ನೀವು ಅವಿಶ್ವಾಸಿಗಳ ಮುಖಂಡರ ವಿರುದ್ಧ ಸಮರ ಹೂಡಿರಿ - ಅವರು (ದ್ರೋಹವೆಸಗುವುದನ್ನು) ನಿಲ್ಲಿಸಲಿಕ್ಕಾಗಿ. ಖಂಡಿತವಾಗಿಯೂ ಅವರ ಪ್ರತಿಜ್ಞೆಗಳಿಗೆ ಏನೂ ಬೆಲೆಯಿಲ್ಲ."

13. "(ಸತ್ಯವಿಶ್ವಾಸಿಗಳೇ,) ತಮ್ಮ ಪ್ರತಿಜ್ಞೆಗಳನ್ನು ಉಲ್ಲಂಘಿಸಿದ ಮತ್ತು ಪ್ರವಾದಿಯನ್ನು ಹೊರ ಅಟ್ಟಲು ತೀರ್ಮಾನಿಸಿದ ಒಂದು ಜನತೆಯೊಡನೆ ನೀವು ಯುದ್ಧ ಮಾಡಲಾರಿರಾ? ನಿಮ್ಮೊಡನೆ ಮೊದಲು ಯುದ್ಧ ಆರಂಭಿಸಿದುದು ಅವರು ತಾನೆ? ನೀವು ಅವರಿಗೆ ಭಯಪಡುತ್ತೀರಾ? ನೀವು ಸತ್ಯವಿಶ್ವಾಸಿಗಳೆಂದಾದರೆ ಭಯಪಡಲು ಅತ್ಯಂತ ಅರ್ಹನು ಅಲ್ಲಾಹನಾಗಿದ್ದಾನೆ."

14. "ನೀವು ಅವರೊಡನೆ ಯುದ್ಧ ಮಾಡಿರಿ. ನಿಮ್ಮ ಕೈಗಳಿಂದ ಅಲ್ಲಾಹನು ಅವರನ್ನು ಶಿಕ್ಷಿಸುವನು ಹಾಗೂ ಅಪಮಾನಿಸುವನು. ಅವರ ಮೇಲೆ (ವಿಜಯ ಸಾಧಿಸಲಿಕ್ಕಾಗಿ) ಅವನು ನಿಮಗೆ ನೆರವಾಗುವನು. ಹಾಗೆ ವಿಶ್ವಾಸಿಗಳಾದ ಜನರ ಹೃದಯಗಳಿಗೆ ಅವನು ನೆಮ್ಮದಿ ನೀಡುವನು."

ವಚನ 12 ಮತ್ತು 13ನ್ನು ಧರ್ಮತ್ಯಾಗಕ್ಕೆ ಮರಣದಂಡನೆ ವಿಧಿಸಲಿಕ್ಕೆ ಆಧಾರವಾಗಿ ನೀಡುವವರು, ಅವರು ನೀಡುವ ವಿವರಣೆ ಬೇರೆ ವಚನಗಳಿಗೆ ವಿರುದ್ಧವಾಗಿರುವುದನ್ನು ಸಮರ್ಪಕವಾಗಿ ವಿವರಿಸಿಕೊಡಲಾರರು. ಮೇಲೆ ಉಲ್ಲೇಖಿಸಿದ ವಚನಗಳು ಮಕ್ಕದಿಂದ ಮುಸ್ಲಿಮರು ಮದೀನಕ್ಕೆ ವಲಸೆ ಹೋದ ಕಾಲಕ್ಕೆ ಸಂಬಂಧಿಸಿವೆ (ವಚನ 3 ನೋಡಿರಿ). ಆ ಕಾಲದಲ್ಲಿ ಮಕ್ಕದ ಖುರೈಶರು ಇಸ್ಲಾಮನ್ನು ಬಲಾತ್ಕಾರದಿಂದ ಅಳಿಸಿ ಬಿಡಲು ಹೋರಾಟ ಮಾಡುತ್ತಿದ್ದರು.

ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆ ಇದೆ ಎಂದು ವಾದಿಸುವವರು ಗಮನಿಸಬೇಕಾದ ಸಂಗತಿಯೇನೆಂದರೆ, ಈ ವಚನಗಳಲ್ಲಿ ಒಪ್ಪಂದವನ್ನು ಮುರಿದ ಮತ್ತು ಧರ್ಮವನ್ನು ನಿಂದಿಸಿದ ಬಹುದೇವಾರಾಧಕರ ಕುರಿತು ಪ್ರಸ್ತಾಪಿಸಲಾಗಿದೆ. ಧರ್ಮತ್ಯಾಗ ಮಾಡುವವರ ಕುರಿತು ಈ ವಚನಗಳಲ್ಲಿ ಹೇಳಿಲ್ಲ. ಈ ವಚನಗಳಲ್ಲಿ ಹೀಗೆ ಹೇಳಲಾಗಿದೆ: ಅವರು ತಮ್ಮ ದೃಢವಾದ ಬದ್ಧತೆಯನ್ನು ಘೋಷಿಸಿದ ನಂತರ ತಮ್ಮ ಒಪ್ಪಂದಗಳನ್ನು ಮುರಿದಿದ್ದಾರೆ. ನಿಮ್ಮ ಧರ್ಮಕ್ಕೆ ವಿರುದ್ಧವಾಗಿರುವವರು ನಿಮ್ಮ ವಿರುದ್ಧ ಯುದ್ಧವನ್ನು ಮೊದಲು ಪ್ರಾರಂಭಿಸಿದವರಾಗಿದ್ದಾರೆ. ತಮ್ಮ ಒಪ್ಪಂದಗಳಿಗೆ ಭಂಗವುಂಟುಮಾಡಿದ ಬಹುದೇವಾರಾಧಕರ ನಾಯಕರ ವಿರುದ್ಧ ಮಾತ್ರ ಹೋರಾಡಲು ನಿಮಗೆ ಅನುಮತಿಸಲಾಗಿದೆ. ನಿಮ್ಮ ವಿರುದ್ಧ ಇನ್ನಷ್ಟು ಹೋರಾಡುವುದನ್ನು ತಡೆಯಲು ನಿಮಗೆ ಯುದ್ಧಕ್ಕಾಗಿ ಅನುಮತಿಸಲಾಗಿದೆ.

ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆ ಇದೆ ಎಂಬುದನ್ನು ಪ್ರತಿಪಾದಿಸಲಿಕ್ಕಾಗಿ ತಪ್ಪಾಗಿ ವ್ಯಾಖ್ಯಾನಿಸಲಾದ ವಚನಗಳ ಸರಿಯಾದ ವಿವರಣೆ ಇದಾಗಿದೆ. ಧರ್ಮತ್ಯಾಗ ಮಾಡುವವರನ್ನು ಮುಸ್ಲಿಮರಾಗಲು ಬಲಾತ್ಕಾರ ಮಾಡುವ ಕುರಿತು ಯಾವ ಸೂಚನೆಯೂ ಈ ವಚನಗಳಲ್ಲಿಲ್ಲ. ಇಲ್ಲಿ ಪ್ರಸ್ತಾಪಿಸಲಾದವರ ಬಗ್ಗೆಯೇ ಬೇರೊಂದೆಡೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ನಿಮಗೂ ಅವರ ಪೈಕಿ ನೀವು ದ್ವೇಷಿಸುವರಿಗೂ ಮಧ್ಯೆ ಅಲ್ಲಾಹನು (ಮುಂದೊಮ್ಮೆ) ಪ್ರೀತಿ ಹುಟ್ಟಿಸಲೂಬಹುದು. ಅಲ್ಲಾಹನು ಸರ್ವಶಕ್ತನು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ.

"ಧರ್ಮದ ಕಾರಣದಿಂದ ನಿಮ್ಮೊಡನೆ ಯುದ್ಧ ಮಾಡದವರೊಡನೆ ಮತ್ತು ನಿಮ್ಮ ಮನೆಗಳಿಂದ ನಿಮ್ಮನ್ನು ಹೊರಕ್ಕಟ್ಟದವರೊಡನೆ ನೀವು ಒಳಿತಿನಿಂದಲೂ ನ್ಯಾಯಯುತವಾಗಿಯೂ ವರ್ತಿಸುವುದನ್ನು ಅಲ್ಲಾಹನು ನಿಮಗೆ ವಿರೋಧಿಸುವುದಿಲ್ಲ. ಖಂಡಿತವಾಗಿಯೂ ನ್ಯಾಯ ಪಾಲಿಸುವವರನ್ನು ಅಲ್ಲಾಹನು ಪ್ರೀತಿಸುತ್ತಾನೆ.

"ಧರ್ಮದ ಕಾರಣದಿಂದ ನಿಮ್ಮೊಡನೆ ಯುದ್ಧ ಮಾಡುವವರೊಡನೆ, ನಿಮ್ಮ ಮನೆಗಳಿಂದ ನಿಮ್ಮನ್ನು ಹೊರ ಕಟ್ಟುವವವರೊಡನೆ ಮತ್ತು ನಿಮ್ಮನ್ನು ಹೊರಕ್ಕಟ್ಟುವುದರಲ್ಲಿ (ಇತರ ಶತ್ರುಗಳಿಗೆ) ನೆರವು ನೀಡುವರೊಡನೆ ಮಾತ್ರ ನೀವು ಸ್ನೇಹ ಬೆಳೆಸುವುದನ್ನು ಅಲ್ಲಾಹನು ವಿರೋಧಿಸುತ್ತಾನೆ. ಯಾರಾದರೂ ಅವರೊಡನೆ ಸ್ನೇಹ ಬೆಳೆಸಿದರೆ ಅವರು ಅಧರ್ಮಿಗಳೇ ಸರಿ." (60 : 8-10)

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ:

"ಗ್ರಂಥದವರ ಒಂದು ಪಂಗಡದ ಜನರು ಹೇಳುತ್ತಾರೆ: ವಿಶ್ವಾಸಿಗಳಿಗೆ (ಮುಸ್ಲಿಮರಿಗೆ) ಅವತೀರ್ಣಗೊಂಡುದರಲ್ಲಿ ಹಗಲಿನ ಆರಂಭದಲ್ಲಿ ನೀವು ನಂಬಿಕೊಂಡು, ಅದರ ಕೊನೆಯಲ್ಲಿ ನಿರಾಕರಿಸಿರಿ. (ಹೀಗೆ ಮಾಡಿದರೆ) ಪ್ರಾಯಶಃ ಅವರು ಮರಳಿ ಬರುವರು." (3 : 73)

ಈ ವಚನದಲ್ಲಿ ಗ್ರಂಥದವರೆಂದು ಹೇಳಿದುದು ಮದೀನದ ಯಹೂದಿಯರ ಕುರಿತಾಗಿದೆ. ಮುಸ್ಲಿಮರಲ್ಲಿ ಸಂಶಯ ಉದ್ಭವಿಸುವಂತೆ ಮಾಡಿ ಅವರ ಪೈಕಿ ಕೆಲವರು ಇಸ್ಲಾಮ್ ಧರ್ಮವನ್ನು ತಿರಸ್ಕರಿಸುವುದಕ್ಕೆ ಹೇತುವಾಗಲು ಯಹೂದಿಯರು ಹೂಡಿದ ಒಂದು ಉಪಾಯ ಅದಾಗಿತ್ತು. ಇಸ್ಲಾಮ್ ಧರ್ಮ ತ್ಯಜಿಸುವುದು ಮರಣದಂಡನೆಗೆ ಪಾತ್ರವಾಗುವ ಅಪರಾಧವಾಗಿದ್ದರೆ ಯಹೂದಿಯರಿಗೆ ಈ ಉಪಾಯವನ್ನು ಹೂಡಲು ಹೇಗೆ ತಾನೆ ಸಾಧ್ಯವಾಗುತ್ತಿತ್ತು? ಹೀಗೆ ಧರ್ಮತ್ಯಾಗ ಮಾಡಿದ ಯಾರನ್ನಾದರೂ ಮರಣದಂಡನೆಗೆ ಗುರಿಪಡಿಸಿದ ದಾಖಲೆ ಇದೆಯೇ? ಹಾಗೆ ಮಾಡಿದ್ದರೆ ಬೇರೆಯವರು ಅವರ ಹೆಜ್ಜೆಗೆ ಹೆಜ್ಜೆ ಹಾಕಿ ನಡೆಯುವುದಕ್ಕೆ ತಡೆಯಾಗುತ್ತಿತ್ತು.

ಧರ್ಮತ್ಯಾಗಕ್ಕೆ ಮರಣದಂಡನೆ ಇದೆ ಎಂದು ಪ್ರತಿಪಾದಿಸುವವರು ಈ ವಚನದ ಕುರಿತು, ಈ ವಚನ ಯಹೂದಿಯರ ಯೋಚನೆಯನ್ನು ಮಾತ್ರ ಹೇಳುತ್ತದೆ; ಅವರು ಅದನ್ನು ಕಾರ್ಯಗತಗೊಳಿಸಲಿಲ್ಲ ಎಂದು ಹೇಳುತ್ತಾರೆ. ಈ ವಚನದಲ್ಲಿ ಯಹೂದಿಯರ ಯೋಚನೆ ಮಾತ್ರ ಹೇಳಿದ್ದರೂ ಈ ವಚನ ಧರ್ಮತ್ಯಾಗಕ್ಕೆ ಮರಣದಂಡನೆ ಇಲ್ಲ ಎಂಬುದಕ್ಕೆ ಪರಿಪೂರ್ಣ ಸಾಕ್ಷ್ಯಾಧಾರವಾಗುತ್ತದೆ. ಏಕೆಂದರೆ ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆ ಇರುವುದಾದರೆ ಯಹೂದಿಗಳು ಹೀಗೆ ಯೋಚಿಸಲು ಸಾಧ್ಯವೇ ಇರಲಿಲ್ಲ. ಅಲ್ಲದೆ ಇದು ಯಹೂದಿಯರ ಯೋಚನೆ ಮಾತ್ರವಾಗಿತ್ತು; ಅವರು ಅದನ್ನು ಕಾರ್ಯಗತಗೊಳಿಸಲಿಲ್ಲ ಎಂದು ಹೇಳುವುದು ಸರಿಯಲ್ಲ. ಯಹೂದಿಯರು ತಮ್ಮ ಈ ಯೋಚನೆಯನ್ನು ಕಾರ್ಯಗತ ಗೊಳಿಸಿದರೆಂದು ಹದೀಸು ಗ್ರಂಥಗಳು ಹೇಳುತ್ತವೆ. ಖೈಬರ್ ಮತ್ತು ಉರೈನದ ಹನ್ನೆರಡು ಯಹೂದಿ ಮತಪಂಡಿತರು ಈ ಯೋಚನೆಯನ್ನು ಕೃತಿ ರೂಪಕ್ಕಿಳಿಸಿದ್ದರು. (ವ್ಯಾಖ್ಯಾನ : ಬಹ್ರುಲ್ ಮುಹೀತ್, ಸಂಪುಟ 2 ಪುಟ 493)

ಪವಿತ್ರ ಖುರ್‌ಆನ್ ವ್ಯಾಖ್ಯಾನಗಳು ಮೇಲಿನ ವಚನ ಇರುವ ಅಧ್ಯಾಯ (ಸೂರಃ ಆಲಿ ಇಮ್ರಾನ್) ಮಕ್ಕದ ವಿಜಯ ಮತ್ತು ಪ್ರವಾದಿಯವರ(ಸ) ನಿಧನದ ಮಧ್ಯಕಾಲದಲ್ಲಿ ಅವತೀರ್ಣವಾಯಿತೆಂದು ಅಂಗೀಕರಿಸುತ್ತವೆ. ಆದುದರಿಂದ ಇಸ್ಲಾಮ್ ಧರ್ಮವು ಅರಬ್ ದೇಶದಲ್ಲಿ ಸುಸ್ಥಾಪಿತವಾದ ನಂತರ ಯಹೂದಿಯರು ತಮ್ಮ ಉಪಾಯವನ್ನು ಕಾರ್ಯಗತಗೊಳಿಸುತ್ತಾ ಇದ್ದರು ಎಂಬುದು ನಿಸ್ಸಂದೇಹವಾಗಿ ಸಾಬೀತು ಆಗುತ್ತದೆ. ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆಯು ವಿಧಿಸಲ್ಪಡುತ್ತಿದ್ದರೆ ಯಹೂದಿಯರು ಇಂತಹ ಆತ್ಮಘಾತಕ ಮತ್ತು ಹುಚ್ಚು ಉಪಾಯ ಹೂಡಲು ಹೇಗೆ ತಾನೆ ಸಾಧ್ಯ? ಧರ್ಮತ್ಯಾಗಿ ಮುಸ್ಲಿಮನು ಮರಣದಂಡನೆಗೀಡಾಗುವುದಾದರೆ ಒಬ್ಬನನ್ನು ಹಗಲಿನ ಮೊದಲ ಭಾಗದಲ್ಲಿ ಇಸ್ಲಾಮನ್ನು ಸ್ವೀಕರಿಸಲು ಮತ್ತು ಹಗಲಿನ ಕೊನೆಯ ಭಾಗದಲ್ಲಿ ಇಸ್ಲಾಮನ್ನು ತಿರಸ್ಕರಿಸಲು ಹೇಗೆ ತಾನೆ ಪ್ರೋತ್ಸಾಹಿಸಲು ಸಾಧ್ಯ?

## ಹದೀಸುಗಳು

ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ಪ್ರತಿಪಾದಿಸುವವರು ಪ್ರವಾದಿಯವರ(ಸ) ನುಡಿಗಳನ್ನು ತಪ್ಪಾಗಿ ಮಿತಿಮೀರಿ ವ್ಯಾಖ್ಯಾನಿಸುತ್ತಾರೆ. ವಾಸ್ತವಿಕವಾಗಿ ಪ್ರವಾದಿಯವರ(ಸ) ನುಡಿಗಳು ಈ ವ್ಯಾಖ್ಯಾನಗಾರರ ಪ್ರತಿಪಾದನೆಯನ್ನು ಬೆಂಬಲಿಸುವುದಿಲ್ಲ. ಬದಲು, ಧರ್ಮತ್ಯಾಗಕ್ಕೆ ಈ ಲೋಕದಲ್ಲಿ ಯಾವುದೇ ಶಿಕ್ಷೆ ಇಲ್ಲ ಎಂದು ಸ್ಪಷ್ಟವಾಗಿ ಸೂಚಿಸುವ ಅನೇಕ ಹದೀಸುಗಳು (ಪ್ರವಾದಿ ನುಡಿಗಳು) ಇವೆ.

ಈ ಬಗ್ಗೆ ನಮ್ಮ ವಿಚಾರವನ್ನು ಪೂರ್ಣವಾಗಿ ಮಂಡಿಸಲು ಧರ್ಮತ್ಯಾಗಕ್ಕಾಗಿ ಮರಣದಂಡನೆಯ ಶಿಕ್ಷೆ ಇದೆ ಎಂದು ಪ್ರತಿಪಾದಿಸುವವರು ಉಲ್ಲೇಖಿಸುವ ಹದೀಸುಗಳನ್ನು ನಿಮ್ಮ ಮುಂದಿರಿಸಲು ಬಯಸುತ್ತೇವೆ.

1. ಅನಸ್‌ರವರಿಂದ(ರ) ಕೇಳಿದುದಾಗಿ ಅಬೂ ಖಲಬ ಹೀಗೆ ಹೇಳುತ್ತಾರೆ: ಅಕಲ್ ಅಥವಾ ಉರೈನ ಗೋತ್ರದ ಜನರನ್ನು ಮದೀನದ ಹೊರಗೆ ಹೆಣ್ಣು ಒಂಟೆಗಳನ್ನು ಸಾಕುವ ಪ್ರದೇಶದಲ್ಲಿ ವಾಸಿಸಲು ಪ್ರವಾದಿಯವರು(ಸ) ಕಳುಹಿಸಿದ್ದರು. ಈ ಜನರು ಒಂಟೆಗಳನ್ನು ಕಾಯುವವರನ್ನು ಕೊಂದು ಒಂಟೆಗಳ ಹಿಂಡನ್ನು ಕದ್ದುಕೊಂಡು ಹೋದರು. ಈ ಜನರು ಧರ್ಮತ್ಯಾಗ ಮಾಡಿದುದು ಸತ್ಯವಾಗಿದ್ದರೂ ಅವರನ್ನು ಶಿಕ್ಷಿಸಿದುದು ಒಂಟೆಗಳನ್ನು ಕಾಯುವವರನ್ನು ಕೊಂದುದಕ್ಕಾಗಿತ್ತು. (ಅಧ್ಯಾಯ 3 ನೋಡಿರಿ).

2. ಮಕ್ಕವನ್ನು ಜಯಿಸಿದ ನಂತರ ಮರಣದಂಡನೆಗೆ ಗುರಿಪಡಿಸಲ್ಪಟ್ಟ ನಾಲ್ಕು ಜನರಲ್ಲಿ ಒಬ್ಬನು ಇಬ್ನು ಖತಲ್ ಆಗಿದ್ದನು. ಅವನು ಧರ್ಮತ್ಯಾಗ ಮಾಡಿದ್ದರೂ ಅವನನ್ನು ಶಿಕ್ಷಿಸಿದುದು ತನ್ನ ಜೊತೆ ಪ್ರಯಾಣಿಸುತ್ತಿದ್ದವನನ್ನು ಕೊಂದ ಕಾರಣದಿಂದಾಗಿದೆ ಎಂಬುದು ಸ್ಪಷ್ಟ. (ಅಧ್ಯಾಯ 6 ನೋಡಿರಿ).

3. ಇನ್ನೊಂದು ಘಟನೆ ಮಖೀಸ್ ಬಿನ್ ಸಬಾಬನಿಗೆ ಸಂಬಂಧಿಸಿದೆ. ಅವನು ತನ್ನ ಸಹೋದರ ಹಿಶಾಮನನ್ನು ಆಕಸ್ಮಿಕವಾಗಿ ಕೊಂದ ಮದೀನ ಮುಸ್ಲಿಮನನ್ನು ಸೇಡು ತೀರಿಸಲು ಕೊಂದಿದ್ದನು. ಅವನು ಧರ್ಮತ್ಯಾಗ ಮಾಡಿದ್ದರೂ ಅವನನ್ನು ಕೊಂದುದು ಮದೀನದ ನಿವಾಸಿಯನ್ನು ಕೊಂದುದಕ್ಕೆ ಆಗಿತ್ತು.

ಮೇಲೆ ವಿವರಿಸಿದ ಮೂರು ಘಟನೆಗಳಲ್ಲಿ ಮರಣದಂಡನೆಗೆ ಗುರಿಯಾದವರು ಕೊಲೆಪಾತಕಿಗಳಾಗಿದ್ದರು. ಅವರು ಧರ್ಮತ್ಯಾಗ ಮಾಡಿದವರೂ ಆಗಿದ್ದರು. ಹಾಗಿರುವಾಗ ಅವರು ಮಾಡಿದ ಕೊಲೆಪಾತಕದ ಬಗ್ಗೆ ಕಣ್ಣುಮುಚ್ಚಿ, ಧರ್ಮತ್ಯಾಗ ಮಾಡಿದುದಕ್ಕಾಗಿ ಅವರಿಗೆ ಮರಣದಂಡನೆ ವಿಧಿಸಲಾಗಿತ್ತೆಂದು ಹೇಳುವುದು ಹೇಗೆ?

4. ಧರ್ಮತ್ಯಾಗಕ್ಕೆ ಮರಣದಂಡನೆ ಇದೆ ಎಂದು ಪ್ರತಿಪಾದಿಸುವವರು ಒಂದು ಹದೀಸು ತಮ್ಮ ವಾದಕ್ಕೆ ಬಹಳ ಒತ್ತು ಕೊಡುವುದಾಗಿ ಹೇಳುತ್ತಾರೆ. ಒಬ್ಬ ಮಹಿಳೆಯನ್ನು ಧರ್ಮತ್ಯಾಗಕ್ಕಾಗಿ ಪ್ರವಾದಿಯವರ(ಸ) ಆಜ್ಞೆ ಪ್ರಕಾರ ಕೊಲ್ಲಲಾಯಿತೆಂದು ಅವರು ಹೇಳುತ್ತಾರೆ. ಈ ಹದೀಸು ತೀರಾ ವಿಶ್ವಾಸಾರ್ಹವಲ್ಲ. ಪ್ರವಾದಿಯವರು(ಸ) ಯಾವ ಮಹಿಳೆಗೂ ಧರ್ಮತ್ಯಾಗಕ್ಕಾಗಿ ಎಂದೂ ಮರಣದಂಡನೆ ವಿಧಿಸಿರಲಿಲ್ಲವೆಂಬುದು ಸತ್ಯವಾಗಿದೆ. ಪ್ರಸಿದ್ಧ ನ್ಯಾಯಶಾಸ್ತ್ರ ಗ್ರಂಥವಾದ "ಹಿದಾಯ" ಹೀಗೆ ಹೇಳಿದೆ:

"ಮಹಿಳೆಯರನ್ನು ಧರ್ಮತ್ಯಾಗಕ್ಕಾಗಿ ಕೊಲ್ಲುವುದನ್ನು ಪ್ರವಾದಿಯವರು(ಸ) ನಿಷಿದ್ಧಗೊಳಿಸಿದ್ದಾರೆ. ಈ ಬಗ್ಗೆ ಇರುವ ಶಿಕ್ಷೆಯ ನಿಯಮಗಳ ಪ್ರಕಾರ ಶಿಕ್ಷೆಯನ್ನು ಪರಲೋಕಕ್ಕಾಗಿ ಬಿಡಲಾಗಿದೆ. ಇಹಲೋಕದಲ್ಲಿ ವಿಧಿಸುವ ಶಿಕ್ಷೆಯು ಧರ್ಮತ್ಯಾಗದ ಉದ್ದೇಶವನ್ನು ನಿಷೇಧಿಸುವುದು ಮತ್ತು ದೇವನಿಗೆ ಮಾತ್ರ ಸಂಬಂಧಿಸಿದುದರ ವಿಚಾರಣೆ ಮಾಡುವಂತೆ ಆಗುವುದು. ಒಬ್ಬನನ್ನು ಯುದ್ಧಕಾಲದಲ್ಲಿ ವಿರುದ್ಧ ವರ್ತನೆಯನ್ನು ತಡೆಯಲು ಮಾತ್ರ ಈ ತತ್ವದಿಂದ ವಿಭಿನ್ನವಾಗಿ ಕ್ರಮಕೈಗೊಳ್ಳಬಹುದಾಗಿದೆ. ಮಹಿಳೆಯರು ತಮ್ಮ ಶಾರೀರಿಕ ಪ್ರಕೃತಿಯ ಕಾರಣದಿಂದ ಯುದ್ಧ ಮಾಡಲು ಸಾಮರ್ಥ್ಯವನ್ನು ಹೊಂದಿರದ ಕಾರಣದಿಂದ ಮಹಿಳೆಯಾದ ಧರ್ಮತ್ಯಾಗಿಯನ್ನು ಶಿಕ್ಷಿಸಲೇಬಾರದು."

ಮೌದೂದಿಯ ಹಾಗಿರುವ ವಿದ್ವಾಂಸರು ಧರ್ಮತ್ಯಾಗಕ್ಕೆ ಮರಣ ದಂಡನೆಯನ್ನು ಪ್ರತಿಪಾದಿಸುವ ಹದೀಸುಗಳ ವಿಶ್ವಾಸಾರ್ಹತೆಯ ಬಗ್ಗೆ ಇರುವ ಬಲವತ್ತಾದ ಸಂದೇಹಗಳ ಕುರಿತು ತಿಳಿದ ನಂತರವೂ ಅಂತಹ ಹದೀಸುಗಳನ್ನು ಆಧಾರವಾಗಿಟ್ಟುಕೊಂಡು ತಮ್ಮ ವಿಚಾರಗಳನ್ನು ರೂಪಿಸುವುದು ವಿಚಿತ್ರಕರವಾಗಿದೆ. ಇಂತಹ ಬಲಹೀನ ಹದೀಸುಗಳನ್ನು ಗಣ್ಯರಾದ ಮುಸ್ಲಿಂ ವಿದ್ವಾಂಸರು ತಿರಸ್ಕರಿಸಿದ್ದಾರೆ

5. ಅಬ್ದುಲ್ಲಾ ಬಿನ್ ಸಅದ್‌ಗೆ ಸಂಬಂಧಿಸಿದ ಪ್ರಕರಣವನ್ನು ಆರನೆಯ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿದೆ. ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆಯನ್ನು ಪವಿತ್ರ ಖುರ್‌ಆನ್ ವಿಧಿಸಿದ್ದರೆ ಪ್ರವಾದಿಯವರು(ಸ) ಆ ನಿಯಮದ ಕುರಿತು ಯಾವ ರಿಯಾಯಿತಿಯನ್ನೂ ತೋರಿಸುತ್ತಿರಲಿಲ್ಲ ಮತ್ತು ಯಾರನ್ನೂ ಆ ನಿಯಮದ ಜಾರಿಗೊಳಿಸುವಿಕೆಯಿಂದ ಹೊರಗಿರಿಸುತ್ತಿರಲಿಲ್ಲ. ಧರ್ಮತ್ಯಾಗಕ್ಕೆ ಶಿಕ್ಷೆ ಮರಣದಂಡನೆಯೆಂದಾದರೆ ಪ್ರವಾದಿಯವರು(ಸ) ದೇವ ನಿಯಮವನ್ನು ಹೇಗೆ ತಾನೆ ಉಲ್ಲಂಘಿಸಲು ಸಾಧ್ಯ?

## ಪ್ರವಾದಿ ಶಿಷ್ಯರು

ಪವಿತ್ರ ಖುರ್‌ಆನ್ ಮತ್ತು ಯಾವುದೇ ವಿಶ್ವಾಸಾರ್ಹ ಹದೀಸು ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ಪ್ರತಿಪಾದಿಸುವವರ ವಾದಕ್ಕೆ ಯಾವುದೇ ಬೆಂಬಲ ನೀಡುವುದಿಲ್ಲ ಎಂದು ನಾವು ಈ ಮೊದಲು ನೋಡಿದ್ದೇವೆ. ಆದರೆ ಮರಣದಂಡನೆ ಪ್ರತಿಪಾದಿಸುವವರು ಬೇರೆ ಕೆಲವು ಉಪಾಯಗಳಿಂದ ತಮ್ಮ ವಾದವನ್ನು ಪುಷ್ಟೀಕರಿಸಲು ಪ್ರಯತ್ನಿಸುತ್ತಿದ್ದಾರೆ. ಅವರ ಈ ವಾದಗತಿಗಳನ್ನು ಸವಿಸ್ತಾರವಾಗಿ ಪರಿಶೀಲಿಸುವುದು ಆವಶ್ಯಕವಾಗಿದೆ. ಅವರ ಈ ವಾದಗಳು ಪ್ರವಾದಿಯವರ(ಸ) ತೀರ್ಮಾನಗಳ ಮೇಲೆ ಆಧರಿಸಿರದೆ ಕೇವಲ ಪ್ರವಾದಿಯವರ(ಸ) ಶಿಷ್ಯರ ಅಭಿಪ್ರಾಯಗಳ ಮೇಲೆ ಸ್ಥಾಪಿತವಾಗಿವೆ. ಒಂದು ಸಂಗತಿ ಸ್ಪಷ್ಟಗೊಳಿಸಲು ಇಚ್ಛಿಸುತ್ತೇವೆ. ಪ್ರವಾದಿಯವರ(ಸ) ಶಿಷ್ಯರ ಅಭಿಪ್ರಾಯಗಳು ಕೇವಲ ವ್ಯಾಖ್ಯಾನಗಳಾಗಿ ಪರಿಗಣಿಸಲು ಯೋಗ್ಯವಾಗಿವೆ. ಅವರ ಅಭಿಪ್ರಾಯಗಳಿಗೆ ಪವಿತ್ರ ಖುರ್‌ಆನಿನ ಆಜ್ಞೆಗಳಿಗೆ ಸಮಾನವಾದ ಸ್ಥಾನ ನೀಡಲು ಸಾಧ್ಯವಿಲ್ಲ. ಅವರ ಅಭಿಪ್ರಾಯಗಳು ಕೇವಲ ವ್ಯಾಖ್ಯಾನಗಳಾಗಿ ಮಾತ್ರ ಗಣಿಸಲ್ಪಡಬಹುದಾಗಿದೆ.

1. ಝಕಾತ್‌ಗೆ ಸಂಬಂಧಿಸಿದ ವಿದ್ರೋಹದ ಕುರಿತು ಆರನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅಬ್‌ಸ್ ಮತ್ತು ಝುಬ್ಯಾನ್ ಗೋತ್ರದವರು ಮದೀನವನ್ನು ಮೊದಲು ಆಕ್ರಮಿಸಿ ಯುದ್ಧವನ್ನು ಪ್ರಾರಂಭಿಸಿದರು. ಉಸಾಮರವರು(ರ) ತನ್ನ ದಂಡಿನೊಂದಿಗೆ ಯುದ್ಧಕಣದಿಂದ ಹಿಂದಿರುಗಿ ಬರುವ ಮೊದಲೇ ಅಬೂಬಕರ್‌ರವರು(ರ) ಆ ಆಕ್ರಮಣಗಾರರನ್ನು ಎದುರಿಸಿದರು. ಇಲ್ಲಿ ಧರ್ಮತ್ಯಾಗಿಗಳು ಆಕ್ರಮಣಗಾರರಾಗಿದ್ದರು. ಅವರು ಝಕಾತ್ ಕೊಡುವುದನ್ನು ನಿರಾಕರಿಸಿದರಲ್ಲದೆ ಮುಸ್ಲಿಮರ ವಿರುದ್ಧ ಖಡ್ಗ ಕೈಗೆತ್ತಿಕೊಂಡರು. ಹಾಗೆ ಅವರು ಇಸ್ಲಾಮೀ ರಾಜ್ಯದ ವಿರುದ್ಧ ವಿದ್ರೋಹ ಮಾಡಿದರು. ಅವರು ತಮ್ಮ ಗೋತ್ರದ ಮುಸ್ಲಿಮರಲ್ಲಿ ಕೆಲವರನ್ನು ಬೆಂಕಿ ಹಚ್ಚಿ ಜೀವಂತವಾಗಿ ಸುಟ್ಟುಹಾಕಿದರು. ಅವರು ಕೊಂದವರ ಮೃತಶರೀರಗಳನ್ನು ಅಂಗವಿಚ್ಛೇದಗೊಳಿಸಿದರು. (ತಬರಿ ಸಂಪುಟ IV, 1873; ಇಬ್ನು ಖಲ್‌ದೂನ್ ಸಂಪುಟ II, 65; ಖಾಮೀಸ್ ಸಂಪುಟ II, 237)

ಮೇಲಿನ ಘಟನೆಯನ್ನು ಆಧಾರವಾಗಿಟ್ಟುಕೊಂಡು ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ಪ್ರತಿಪಾದಿಸುವವರು ಈ ಘಟನೆಗೆ ಸಂಬಂಧಿಸಿದ ವಾಸ್ತವಿಕಾಂಶಗಳನ್ನು ಅರಿಯದವರಾಗಿದ್ದಾರೆ ಅಥವಾ ಅವರು ಅರಿತ ನಂತರ ಸಹ ಜನರನ್ನು ತಪ್ಪುಗ್ರಹಿಕೆಗೊಳಪಡಿಸಲಿಕ್ಕಾಗಿ ವಿದ್ರೋಹಿಗಳು ನಿರಪರಾಧಿ ಮುಸ್ಲಿಮರನ್ನು ಕೊಂದುದನ್ನು ಹಗುರವಾಗಿ ಗಣಿಸುತ್ತಿದ್ದಾರೆ.

2. ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆಯನ್ನು ಪ್ರತಿಪಾದಿಸುವವರು ಹೀಗೆ ಪ್ರಶ್ನಿಸುತ್ತಾರೆ: ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆ ಇಲ್ಲವಾದರೆ ಕಪಟ ಪ್ರವಾದಿಯಾದ ಮುಸೈಲಿಮನನ್ನು ಏಕೆ ಬಿಟ್ಟು ಬಿಡಲಿಲ್ಲ? ವಾಸ್ತವಿಕ ಸಂಗತಿ ಏನೆಂದರೆ, ಮುಸೈಲಿಮನು ರಾಜಕೀಯ ಅಧಿಕಾರ ಗಳಿಸುವ ಹಂಬಲ ಹೊಂದಿದ್ದನು. ಅವನು ಅಬೂ ಹನೀಫ ಜೊತೆಗೆ ಪ್ರವಾದಿಯವರ(ಸ) ಸನ್ನಿಧಿಯಲ್ಲಿ ಹಾಜರಾಗಿ ಹೀಗೆ ಹೇಳಿದನು: ನನ್ನನ್ನು ನಿಮ್ಮ ಉತ್ತರಾಧಿಕಾರಿಯಾಗಿ ನಿಶ್ಚಯಿಸುವುದಾದರೆ ನಾನು ನಿಮಗೆ ಶರಣಾಗುವೆನು. ಪ್ರವಾದಿ(ಸ) ಹೀಗೆ ಉತ್ತರ ಹೇಳಿದರು: ಖರ್ಜೂರದ ಮರದ ಒಂದು ಗರಿಯನ್ನು ಸಹ ನಾನು ಕೊಡಲಾರೆನು. ಮುಸೈಲಿಯ ಹಿಂದಿರುಗಿ ಹೋದ ನಂತರ ಹೇಳಿದನು: ಅರಬ್ ದೇಶದ ಅರ್ಧ ಭಾಗ ನನ್ನದ್ದಾಗಿದೆ. ಅವನು ಪ್ರವಾದಿಯವರಿಗೆ(ಸ) ಒಂದು ಪತ್ರ ಬರೆದು ಹೇಳಿದನು: "ನಾನು ಅಧಿಕಾರದಲ್ಲಿ ನಿಮ್ಮ ಭಾಗೀದಾರನಾಗಿ ನೇಮಿಸಲ್ಪಟ್ಟಿದ್ದೇನೆ." ಪ್ರವಾದಿಯವರು(ಸ) ಅವನಿಗೆ ಬರೆದ ಉತ್ತರದಲ್ಲಿ ಪವಿತ್ರ ಖುರ್‌ಆನ್ ಅಧ್ಯಾಯ 7ರ ವಚನ 129ನ್ನು° ಉಲ್ಲೇಖಿಸಿದರು.

ಮುಸೈಲಿಮನು ತಾನು ಪ್ರವಾದಿ ಎಂದು ವಾದಿಸಿದ ನಂತರ ಹಬೀಬ್ ಬಿನ್ ಝೈದ್(ರ) ಎಂಬ ಸಹಾಬಿಯನ್ನು (ಪ್ರವಾದಿ ಶಿಷ್ಯರನ್ನು) ಸೆರೆ ಹಿಡಿದು ಕೊಂದು ಅವರ ಅಂಗ ವಿಚ್ಛೇದನೆ ಮಾಡಿದನು. ಅನಂತರ ಶರೀರ ಭಾಗಗಳನ್ನು ಸುಟ್ಟುಹಾಕಿದನು.

ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ಪ್ರತಿಪಾದಿಸುವವರು ಈ ದಾರುಣ ಹತ್ಯೆಯನ್ನು ಕಡೆಗಣಿಸುತ್ತಾರೆ ಮತ್ತು ಧರ್ಮತ್ಯಾಗವು ಮುಸೈಲಿಮನ ಮೇಲೆ ಆರೋಪಿಸಲ್ಪಡುವ ಏಕಮಾತ್ರ ಅಪರಾಧ ಎಂದು ವಾದಿಸುತ್ತಾರೆ. ಅವನು ಕೊಲೆಯನ್ನು ನಡೆಸದೆ ಇರುತ್ತಿದ್ದರೆ ಕೇವಲ ಧರ್ಮತ್ಯಾಗಕ್ಕಾಗಿ ಅವನು ಶಿಕ್ಷಿಸಲ್ಪಡುತ್ತಿದ್ದನೇ? ಅವನನ್ನು ನ್ಯಾಯ ವಿಚಾರಣೆಗೆ ಗುರಿಪಡಿಸಿದುದು ಅವನು ನಡೆಸಿದ ಕೊಲೆ ಮತ್ತು ಗಲಭೆ ಗೊಂದಲಗಳಿಗಲ್ಲವೇ? ಪ್ರವಾದಿಯವರು(ಸ) ಮುಸೈಲಿಮನನ್ನು ಅವನು ತನ್ನ ಪ್ರವಾದಿತ್ವವನ್ನು ತಿರಸ್ಕರಿಸಿದುದಕ್ಕಾಗಿ ಮರಣದಂಡನೆ ವಿಧಿಸಿದ ಕುರಿತು ಅಥವಾ ತನ್ನ ಶಿಷ್ಯರಿಗೆ ಅವನನ್ನು ಕೊಲ್ಲಲು ಆಜ್ಞಾಪಿಸಿದ ಕುರಿತು ಆಧಾರದ ಒಂದು ತುಣುಕು ಸಹ ದೊರಕುವುದಿಲ್ಲ. ಪ್ರವಾದಿಯವರು(ಸ) ನಿರ್ದಿಷ್ಟವಾಗಿ ಯಾವುದೇ ತೀರ್ಪು ನೀಡಿದುದರ ಸಾಕ್ಷ್ಯವನ್ನು ದೊರಕಿಸಿಕೊಳ್ಳಲು ವಿಫಲರಾದ ಮೌಲಾನ ಮೌದೂದಿ, ಪ್ರವಾದಿಯವರು(ಸ) ಸೂಚಿಸಿದರೆಂದು ಹೇಳಲ್ಪಟ್ಟಿರುವ ಒಂದು ಅಪೇಕ್ಷೆಯ ಮೇಲೆ ತನ್ನ ವಾದವನ್ನು ಸ್ಥಾಪಿಸಲು ಪ್ರಯತ್ನಿಸಿದ್ದಾರೆ. ಪ್ರವಾದಿಯವರು(ಸ) ತನ್ನ ಜೀವಿತದ ಅವಸಾನದ ಕಾಲದಲ್ಲಿ ಮುಸೈಲಿಮನನ್ನು ನಾಶಗೊಳಿಸಬೇಕೆಂಬ ಇಚ್ಛೆಯನ್ನು ಪ್ರಕಟಿಸಿದುದಾಗಿ ಹೇಳಲಾಗಿದೆ. ಆದರೆ ವಾಸ್ತವಿಕವಾಗಿಯೂ ಪ್ರವಾದಿಯವರು(ಸ) ಹಾಗೆ ಇಚ್ಛಿಸಿದ್ದರೆ ಅವರ ಪ್ರಥಮ ಖಲೀಫರಾದ ಅಬೂಬಕರ್‌ರವರು(ರ) ಪ್ರವಾದಿಯವರ(ಸ) ಇಚ್ಛೆಯನ್ನು ಈಡೇರಿಸಲು ಕೂಡಲೇ ಒಂದು ದಂಡನ್ನು ಕಳುಹಿಸದೆ ಅದನ್ನು ಕಡೆಗಣಿಸಲು ಸಾಧ್ಯವಿರಲಿಲ್ಲ. ಆದರೆ ಮುಸೈಲಿಮನು ಸ್ವತಃ ಆಕ್ರಮಣಮಾಡಲು ಮುಂದಾಗುವ ತನಕ ಅಬೂಬಕರ್‌ರವರು(ರ) ಪ್ರತೀಕ್ಷಿಸುತ್ತಾ ಇದ್ದುದಾದರೂ ಏಕೆ? ಮುಸೈಲಿಮನು ಬನೂ ಹನೀಫ್ ಗೋತ್ರದ 40,000 ಯೋಧರೊಂದಿಗೆ ಮುಸ್ಲಿಮ್ ಸೈನ್ಯದ ನೇತಾರರಾದ ಖಾಲಿದ್ ಬಿನ್ ವಲೀದ್‌ರವರನ್ನು(ರ) ಎದುರಿಸಿದನು. ಮುಸೈಲಿಮನೇ ಯುದ್ಧವನ್ನು ಆರಂಭಿಸಿ ಮದೀನದ ಕಡೆಗೆ ಮುನ್ನುಗ್ಗಿದನು. ಆಗ ಅಬೂಬಕರ್‌ರವರು(ರ) ಅವನ ವಿದ್ರೋಹ ಮತ್ತು ಅವನು ಹಬೀಬ್ ಬಿನ್ ಝೈದ್‌ರವರನ್ನು(ರ) ಹತ್ಯೆ ಮಾಡಿದ ಕಾರಣದಿಂದ ಅವನ ವಿರುದ್ಧ ಹೋರಾಡಲು ಸೈನ್ಯಕ್ಕೆ ಆಜ್ಞಾಪಿಸಿದರು. (ಖಾಮೀಸ್ ಸಂಪುಟ II, 641)

3. ಇನ್ನೊಂದು ಸಂಭವ ಇನ್ನೊಬ್ಬ ಕಪಟ ಪ್ರವಾದಿ ತುಲೈಹನಿಗೆ ಸಂಬಂಧಿಸಿದೆ. ಅವನು ಕೇವಲ ಒಬ್ಬ ಕಪಟ ಪ್ರವಾದಿ ಮಾತ್ರವಾಗಿರಲಿಲ್ಲ. ಅವನು ಉಕಾಶ ಬಿನ್ ಮುಹ್‌ಸಿನ್ ಮತ್ತು ಸಾಬಿತ್ ಬಿನ್ ಅಕ್‌ರಮ್ ಅನ್‌ಸಾರಿ - ಇವರಿಬ್ಬರನ್ನು ಕೊಂದಿದ್ದನು. ಖಾಲಿದ್ ಬಿನ್ ವಲೀದ್‌ರವರು(ರ)

° "ನೀವು ಅಲ್ಲಾಹನ ಸಹಾಯವನ್ನು ಯಾಚಿಸಿರಿ ಮತ್ತು ಸಹನೆ ಕೈಗೊಳ್ಳಿರಿ. ಖಂಡಿತವಾಗಿಯೂ ಭೂಮಿ ಅಲ್ಲಾಹನದ್ದಾಗಿದೆ. ಅವನ ದಾಸರ ಪೈಕಿ ತಾನು ಇಷ್ಟಪಡುವವರಿಗೆ ಅವನು ಅದನ್ನು ವಾರಸು ಹಕ್ಕಾಗಿ ನೀಡುತ್ತಾನೆ. ಅಂತಿಮ ವಿಜಯ ಭಯಭಕ್ತಿಯನ್ನು ತೋರ್ಪಡಿಸುವವರಿಗೆ."

ಅವನ ವಿರುದ್ಧ ಹೋರಾಡುವ ಮೊದಲು ಒಬ್ಬ ಪ್ರತಿನಿಧಿಯನ್ನು ಶಾಂತಿ ಸಂಧಾನ ನಡೆಸಲು ಮತ್ತು ರಕ್ತಪಾತ ನಡೆಸದಿರಲು ಹೇಳಿ ಕಳುಹಿಸಿದ್ದರು. ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆ ನಿಗದಿತವಾಗಿದ್ದರೆ ತುಲೈಹನ ಬಳಿಗೆ ಒಬ್ಬ ದೂತನನ್ನು ಕಳುಹಿಸಿ ಅವನಿಗೆ ಕ್ಷಮೆಯನ್ನು ನೀಡುವ ಕೊಡುಗೆ ನೀಡುವುದಾದರೂ ಹೇಗೆ ಎಂಬ ಸಂಗತಿಯನ್ನು ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ಪ್ರತಿಪಾದಿಸುವವರು ಕಡೆಗಣಿಸುತ್ತಾರೆ.

4. ಇದೇ ರೀತಿಯ ಘಟನೆ ಅಸ್‌ವದ್ ಅನಸಿಗೆ ಸಂಬಂಧಿಸಿಯೂ ನಡೆಯಿತು. ಅವನು ಧರ್ಮತ್ಯಾಗದೊಂದಿಗೆ ವಿದ್ರೋಹ ಕೃತ್ಯಗಳನ್ನು ನಡೆಸಿದನು. ಅವನು ಯೆಮನಿನ ಮುಸ್ಲಿಮ್ ಗವರ್ನರಾದ ಶಹ್ರ್ ಬಿನ್ ಬಾಝುನ್‌ರವರನ್ನು ಕೊಂದು ಅವರ ವಿಧವೆಯನ್ನು ಬಲಾತ್ಕಾರದಿಂದ ಮದುವೆಯಾಗಿ ತನ್ನನ್ನು ಯೆಮನಿನ ಗವರ್ನರೆಂದು ಘೋಷಿಸಿಕೊಂಡನು. ಪ್ರವಾದಿಯವರಿಗೆ[ಸ] ಅವನ ವಿದ್ರೋಹದ ಕುರಿತು ತಿಳಿದಾಗ ಅವರು ಮುಆಝ್ ಬಿನ್ ಜಬಲ್‌ರಿಗೆ ಮತ್ತು ಮುಸ್ಲಿಮರಿಗೆ ಒಂದು ಪತ್ರ ಬರೆದು ಅಸ್‌ವದ್ ಅನಸಿಯನ್ನು ಎದುರಿಸಲು ಹೇಳಿದರು. ಅನಂತರ ಅವನು ಮುಸ್ಲಿಮರ ವಿರುದ್ಧ ಹೋರಾಟದಲ್ಲಿ ಕೊಲ್ಲಲ್ಪಟ್ಟನು. (ಅವನ ಹತ್ಯೆಯ ವಾರ್ತೆ ಪ್ರವಾದಿಯವರು[ಸ] ನಿಧನ ಹೊಂದಿದ ಮರುದಿನ ಮದೀನಕ್ಕೆ ತಲಪಿತು.)

5. ಲಿಖ್‌ಬೀತ್ ಬಿನ್ ಮಾಲಿಕ್ ಅಝ್‌ದಿ ಧರ್ಮತ್ಯಾಗ ಮಾಡಿ ಪ್ರವಾದಿ ಎಂದು ವಾದಿಸಿದನು. ಒಮಾನಿನ ಆಡಳಿತಾಧಿಕಾರಿಗಳಾದ ಜಾಫರ್ ಮತ್ತು ಅಬಾದ್‌ರನ್ನು ಅವನು ಓಡಿಸಿದನು. ಇತರ ಎಲ್ಲಾ ಕಪಟ ಪ್ರವಾದಿತ್ವವಾದಿಗಳ ಹಾಗೆ ಅವನಿಗೆ ಧರ್ಮದಲ್ಲಿ ಆಸಕ್ತಿಯಿರಲಿಲ್ಲ. ಅವನಿಗೆ ರಾಜಕೀಯ ಅಧಿಕಾರದ ವ್ಯಾಮೋಹವಿತ್ತು. ಅವನು ರಾಜಕೀಯ ಅಧಿಕಾರ ಗಳಿಸಲು ಯತ್ನಿಸಿದುದು ತಾನು ವಾಸಿಸುತ್ತಿದ್ದ ಇಸ್ಲಾಮಿಕ ದೇಶದ ವಿದ್ರೋಹ ನಡೆಸುವ ಮೂಲಕವಾಗಿತ್ತು. ಆದುದರಿಂದ ಅವನಿಗೆ ಸಂಬಂಧಿಸಿ ಧರ್ಮತ್ಯಾಗದ ಪ್ರಶ್ನೆಯು ಅಸಂಗತವಾಗಿದೆ. ನಾವು ವಾದಕ್ಕೆ ಬೇಕಾಗಿ ಹೀಗೆ ಭಾವಿಸೋಣ: ಮೇಲೆ ಉಲ್ಲೇಖಿಸಿದ ಯಾರೂ ಧರ್ಮತ್ಯಾಗ ಮಾಡದೆ ಕೇವಲ ಮುಸ್ಲಿಮ್ ರಾಜ್ಯದ ವಿರುದ್ಧ ವಿದ್ರೋಹ ಮಾಡಿದ್ದರೆ ಅವರ ಸ್ಥಿತಿ ಹೇಗಾಗುತ್ತಿತ್ತು? ಆಗ ರಾಜ್ಯದ ಆಡಳಿತೆಯು ಅವರ ವಿದ್ರೋಹದ ವಿರುದ್ಧ ಕ್ರಮ ಕೈಗೊಳ್ಳುತ್ತಿತ್ತು. ದೇಶದಲ್ಲಿ ಅಸ್ತವ್ಯಸ್ತತೆ ಉಂಟುಮಾಡುವ ಅಪರಾಧಕ್ಕಾಗಿ ಪವಿತ್ರ ಖುರ್‌ಆನ್ ಮರಣ ದಂಡನೆಯ ಶಿಕ್ಷೆಯನ್ನು ವಿಧಿಸುತ್ತದೆ. ಆದರೆ ಧರ್ಮತ್ಯಾಗಕ್ಕೆ ಆ ಶಿಕ್ಷೆಯು ಇಲ್ಲ.

6. ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ಪ್ರತಿಪಾದಿಸುವ ಜನರು ಉಮ್ಮ್ ಖಿರ್ಫ ಎಂಬ ಮಹಿಳೆಗೆ ಸಂಬಂಧಿಸಿದ ಪ್ರಕರಣವನ್ನು ಉಲ್ಲೇಖಿಸುತ್ತಾರೆ. ಆಕೆ ಹಝ್‌ರತ್ ಅಬೂಬಕರ್‌ರವರ[ರ] ಕಾಲದಲ್ಲಿ ಧರ್ಮತ್ಯಾಗ ಮಾಡಿದಳು. ಆಕೆಗೆ ಮೂವತ್ತು ಪುತ್ರರಿದ್ದರು. ಅವರನ್ನು ಆಕೆ ಮುಸ್ಲಿಮರ ವಿರುದ್ಧ ಹೋರಾಡಲು ಯಾವಾಗಲೂ ಪ್ರಚೋದಿಸುತ್ತಾ ಇದ್ದಳು. ಆಕೆ ರಾಜ್ಯದ್ರೋಹಕ್ಕಾಗಿ ಮತ್ತು ಕೊಲೆಯಲ್ಲಿ ಪಾಲುಗಾರಳಾದುದಕ್ಕೆ ಆಕೆಯನ್ನು ಶಿಕ್ಷಿಸಲಾಯಿತಲ್ಲದೆ ಅವಳು ಧರ್ಮತ್ಯಾಗ ಮಾಡಿದುದಕ್ಕಲ್ಲ.

7. ಹಝ್‌ರತ್ ಅಲಿಯವರು[ರ] ಖಾರಿಜಿಗಳ ವಿರುದ್ಧ ಯುದ್ಧ ಮಾಡಿದುದನ್ನು ಹೆಚ್ಚು ಹೆಚ್ಚಾಗಿ ಪ್ರಸ್ತಾಪಿಸಲಾಗುತ್ತದೆ. ಖಾರಿಜಿಗಳು (ಖವಾರಿಜ್) ದೇಶದಲ್ಲಿ ಗಲಭೆ ಗೊಂದಲಗಳನ್ನು ಉಂಟು ಮಾಡಿದರು. ಅವರು ಮುಸ್ಲಿಮ್ ಸ್ತ್ರೀಯರನ್ನೂ ಪುರುಷರನ್ನೂ ಕೊಂದರು. ಅವರು ಅಲಿಯವರು ನೇಮಿಸಿದ ಗವರ್ನರನ್ನು, ಅವರ ದಾಸಿಯನ್ನು ಮತ್ತು ಅಲಿಯವರ ದೂತರನ್ನು ಕೊಂದರು. (ಅಧ್ಯಾಯ 6 ನೋಡಿರಿ.)

8. ಮುಆಝ್ ಬಿನ್ ಜಬಲ್ ಮತ್ತು ಅಬೂ ಮೂಸಾ ಅಶ್‌ಹರಿ ಯೆಮನಿನ ಎರಡು ಬೇರೆ ಬೇರೆ ಭಾಗಗಳಿಗೆ ನೇಮಿಸಲ್ಪಟ್ಟ ಗವರ್ನರ್‌ಗಳಾಗಿದ್ದರು. ಅವರು ಹೊರಡುವ ಮೊದಲು ಪ್ರವಾದಿ[ಸ] ಹೀಗೆ ಉಪದೇಶಿಸಿದರು: "ಜನರಿಗೆ ಎಲ್ಲವನ್ನೂ ಸುಲಭಗೊಳಿಸಿರಿ. ಅವರಿಗೆ ಕಷ್ಟಕೊಡಬೇಡಿರಿ. ಅವರೊಂದಿಗೆ ಪ್ರೀತಿಯಿಂದ ಮಾತನಾಡಿರಿ. ನಿಮ್ಮಿಂದ ದೂರ ಸರಿದು ಹೋಗುವ ಹಾಗೆ ವರ್ತಿಸಬೇಡಿರಿ." ಒಂದು ದಿನ ಮುಆಝ್‌ರವರು ಅಬೂಮೂಸಾ ಅಶ್‌ಹರಿಯನ್ನು ಭೇಟಿಯಾಗಲು ಬಂದಾಗ ಹಗ್ಗದಿಂದ ಕಟ್ಟಿಹಾಕಲಾದ ಒಬ್ಬನನ್ನು ಕಂಡರು. ಅವನ ಕುರಿತು ವಿಚಾರಿಸಿದಾಗ, ಅವನು ಯಹೂದಿ ಧರ್ಮದಿಂದ ಇಸ್ಲಾಮ್ ಧರ್ಮಕ್ಕೆ ಪ್ರವೇಶಿಸಿ ಅನಂತರ ಇಸ್ಲಾಮ್ ಧರ್ಮ ತ್ಯಜಿಸಿದನೆಂದು ತಿಳಿಯಿತು. ವರದಿಗಾರ ಹೀಗೆ ಹೇಳುತ್ತಾರೆ: ಕಳೆದ ಎರಡು ಮೂರು ತಿಂಗಳಿನಿಂದ ಅವನನ್ನು ಮುಸ್ಲಿಮನಾಗಿ ಪುನಃಪರಿವರ್ತನೆ ಹೊಂದಲು ಮುಸ್ಲಿಮರು ಪ್ರೇರೇಪಿಸುತ್ತಾ ಇದ್ದರು. ಆದರೆ ಅದು ನಿಷ್ಪ್ರಯೋಜಕವಾಯಿತು. ಆಗ ಮುಆಝ್ ಹೀಗೆ ಹೇಳಿದರು: ನಾನು ಸವಾರಿ ಮೃಗದಿಂದ ಕೆಳಗಿಳಿಯುವುದರೊಳಗೆ ಅವನನ್ನು ಕೊಲ್ಲಬೇಕು. ಇದು ದೇವನ ಮತ್ತು ಅವನ ಸಂದೇಶವಾಹಕನ ತೀರ್ಪು ಆಗಿದೆ."

ಮುಆಝ್ ಹೇಳಿದ ಕೊನೆಯ ವಾಕ್ಯ ದೇವನ ಮತ್ತು ಅವನ ಸಂದೇಶ ವಾಹಕನ ಇಷ್ಟವೇನೆಂದು ಅವರು ಸ್ವತಃ ಗ್ರಹಿಸುದುದು ಮಾತ್ರವಾಗಿತ್ತು. ಅಂತಹ ಅಭಿಪ್ರಾಯಗಳು ಅವರು ಹೇಳಿದ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ ನಂತರ ಮಾತ್ರ ಅಂಗೀಕಾರಾರ್ಹವಾಗುತ್ತವೆ. (ಈ ಬಗ್ಗೆ ಈ ಅಧ್ಯಾಯದ ಮುಂದಿನ ಭಾಗದಲ್ಲಿ ಕೂಲಂಕಷವಾಗಿ ವಿವರಿಸಲಾಗಿದೆ.)

ನಾವು ಈ ವರದಿಯ ವಿಶ್ವಾಸಾರ್ಹತೆಯನ್ನು ಪರಿಶೀಲಿಸುವ. ಮುಆಝ್‌ರವರು ಹೇಳಿದರೆಂದು ಉಲ್ಲೇಖಿಸಲಾದ ಮಾತು ಪ್ರವಾದಿಯವರು[ಸ] ನೀಡಿದ ಮಾರ್ಗಸೂಚಿಗೆ ಅನುಸಾರವಾಗಿಲ್ಲ. ಜನರಿಗೆ ಎಲ್ಲವನ್ನೂ ಸುಲಭಗೊಳಿಸಬೇಕೆಂದೂ ಜನರನ್ನು ದೂರಸರಿಸಬಾರದೆಂದೂ ಪ್ರವಾದಿಯವರು ಉಪದೇಶಿಸಿದ್ದರು. ಮುಆಝ್‌ರವರಿಗೆ ಇಸ್ಲಾಮ್ ಕುರಿತು ಇದ್ದ ಜ್ಞಾನವನ್ನು ಪರಿಶೀಲಿಸದೆ ಮಾನವನ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಒಂದು ಮುಖ್ಯ ವಿಷಯದ ಕುರಿತು ಒಂದು ಹದೀಸನ್ನು ಆಧಾರವಾಗಿಟ್ಟುಕೊಂಡು ತೀರ್ಮಾನಿಸುವುದು ಪರಿಪೂರ್ಣ ಮೂರ್ಖತನವಾಗಿದೆ.

ಈ ಹದೀಸಿನ ಕುರಿತು ಸಾಕಷ್ಟು ಸಂಶಯಗಳಿವೆ. ಈ ಹದೀಸಿನ ವರದಿಗಾರರ ಸರಪಳಿ ಮತ್ತು ಅದರ ಅಧಿಕೃತೆ ಸಂಶಯಕರವಾಗಿದೆ. ಈ ರೀತಿ ಭಿನ್ನಾಭಿಪ್ರಾಯಗಳು ತಲೆದೋರಿದಾಗ ಅಂತಹ ಹದೀಸನ್ನು ತಿರಸ್ಕರಿಸಲಾಗುತ್ತದೆ. ಈ ಹದೀಸುಗಳನ್ನು ಪ್ರವಾದಿಯವರು[ಸ] ನಿಧನ ಹೊಂದಿ ಇನ್ನೂರು ಮುನ್ನೂರು ವರ್ಷಗಳ ನಂತರ ಸಂಗ್ರಹಿಸಲಾಯಿತು. ಕಾಲವು ದಾಟಿ ಹೋದಂತೆ ನೆನಪಿನ ತಪ್ಪುಗಳು ಸಂಭವಿಸುತ್ತವೆ. ಒಂದು ಹದೀಸಿನ ಪ್ರಕಾರ ಮುಆಝ್‌ರ ಆಜ್ಞೆಯಂತೆ ಯಹೂದಿಯನ್ನು ಕೊಲ್ಲಲಾಯಿತು. ಇನ್ನೊಂದು ಹದೀಸಿನ ಪ್ರಕಾರ ಯಹೂದಿಯನ್ನು ಸ್ವತಃ ಮುಆಝ್ ಕೊಂದರು. ಇಂತಹ ಮುಖ್ಯ ವಿಷಯದ ಕುರಿತು ಭಿನ್ನಾಭಿಪ್ರಾಯವಿರುವಾಗ ಈ ಹದೀಸಿನ ನಿಖರತೆಯನ್ನು ಅಂಗೀಕರಿಸುವುದಾದರೂ ಹೇಗೆ? ಜನರು ಇತರರಿಂದ ಆಲಿಸಿದುದನ್ನು ಮರೆತುಬಿಡಬಹುದು. ಆದರೆ ನಿಜವಾಗಿಯೂ ನೋಡಿದ್ದರೆ ಆ ಧರ್ಮತ್ಯಾಗಿಗೆ ಏನಾಯಿತೆಂದು ಅವರು ನೆನಪಿಟ್ಟುಕೊಳ್ಳುತ್ತಿದ್ದರು.

ನಾವು ಇನ್ನು ಮುಂದೆ ಬೇರೊಂದು ಹದೀಸಿನ ಕುರಿತು ಬರೆಯಲಿದ್ದೇವೆ. ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆಯನ್ನು ಪ್ರತಿಪಾದಿಸುವವರು ಈ

ಹದೀಸನ್ನು ಒತ್ತಿ ಹೇಳುತ್ತಾರಲ್ಲದೆ ಇದರ ಮೇಲೆ ತಮ್ಮ ವಾದವನ್ನು ಸ್ಥಾಪಿಸುತ್ತಾರೆ. ಈ ಹದೀಸಿನ ಬಗ್ಗೆ ಈ ಅಧ್ಯಾಯದ ಕೊನೆಯ ಭಾಗದಲ್ಲಿ ಸವಿಸ್ತಾರವಾಗಿ ವಿವರಿಸಲಾಗುವುದು.

ಈ ಹದೀಸನ್ನು ಉಲ್ಲೇಖಿಸುವ ಮೊದಲು ಹದೀಸುಗಳ ಬಗ್ಗೆ ಮುಸ್ಲಿಮ್ ವಿದ್ವಾಂಸರು ರೂಪಿಸಿದ ಮಾರ್ಗಸೂಚಿಗಳನ್ನು ವಿವರಿಸುತ್ತೇನೆ. ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ಮಧ್ಯೆ ಇರುವ ವೈರುಧ್ಯಗಳು ಮತ್ತು ವಿವಾದಗಳು ಹಾಗೂ ಹದೀಸು-ಹದೀಸುಗಳ ಮಧ್ಯೆ ಇರುವ ವಿವಾದಗಳು ಪರಿಹರಿಸಲ್ಪಡಲು ಈ ಮಾರ್ಗಸೂಚಿಗಳು ಸಹಾಯಕವಾಗುವುವು.

ಆ ಮಾರ್ಗಸೂಚಿಗಳು ಈ ಕೆಳಗಿನವುಗಳಾಗಿವೆ:

1. ದೇವ ವಚನ ಸರ್ವೋಚ್ಚವಾಗಿದೆ.
2. ಎರಡನೆಯ ಸ್ಥಾನ ಪ್ರವಾದಿಯವರ[ಸ] ನಡವಳಿಕೆ ಅಥವಾ ಸುನ್ನತ್ ಆಗಿದೆ.
3. ಮೂರನೆಯ ಸ್ಥಾನ ಹದೀಸು (ಪ್ರವಾದಿ ವಚನ)ಗಳಾಗಿವೆ.

(i) ಪ್ರವಾದಿಯವರು[ಸ] ನುಡಿದ ಮಾತುಗಳು ನಿಜವಾಗಿಯೂ ಅವರೇ ನುಡಿದುದೆಂದು ನಿಖರವಾಗಿ ತಿಳಿದರೆ ಆ ಮಾತುಗಳು ಪ್ರವಾದಿಯವರ[ಸ] ಮೂಲಕ ದೇವನೇ ನುಡಿಸಿದ ಮಾತುಗಳೆಂದು ಗಣಿಸಲ್ಪಡಬೇಕು. ಪ್ರವಾದಿಯವರ[ಸ] ನುಡಿಗಳು ಪವಿತ್ರ ಖುರ್‌ಆನ್ ವಚನಗಳಿಗೆ ವಿರುದ್ಧವಾಗಿ ಕಾಣುವುದಿಲ್ಲವಾದರೆ ಅಂತಹ ನುಡಿಗಳನ್ನು ಪ್ರವಾದಿಯವರ[ಸ] ನುಡಿಗಳೆಂದೇ ಅಂಗೀಕರಿಸಬೇಕು.

(ii) ಪ್ರವಾದಿಯವರ[ಸ] ನುಡಿಗಳೆಂದು ಹೇಳಲ್ಪಡುವ ಮಾತುಗಳು ಪವಿತ್ರ ಖುರ್‌ಆನಿನ ಯಾವುದಾದರೂ ವಚನಕ್ಕೆ ವಿರುದ್ಧವಾಗಿ ಕಂಡು ಬಂದರೆ ಅಂತಹ ನುಡಿಗಳನ್ನು ತಿರಸ್ಕರಿಸಬೇಕು ಮತ್ತು ಅವುಗಳು ಪ್ರವಾದಿಯವರಿಂದ[ಸ] ನುಡಿಯಲ್ಪಟ್ಟವುಗಳಲ್ಲ ಎಂದು ಗಣಿಸಬೇಕು.

(iii) ಪ್ರವಾದಿಯವರದೆಂದು[ಸ] ಹೇಳಲ್ಪಡುವ ಒಂದು ನುಡಿಯು ಪವಿತ್ರ ಖುರ್‌ಆನಿನ ಯಾವುದಾದರೂ ಆಜ್ಞೆಯನ್ನು ಸ್ಪಷ್ಟವಾಗಿ ಉಲ್ಲಂಘಿಸುವುದಿಲ್ಲವಾದರೆ ಆ ನುಡಿಯನ್ನು ಪವಿತ್ರ ಖುರ್‌ಆನಿನ ಆಜ್ಞೆಗಳೊಂದಿಗೆ ಸಮನ್ವಯಗೊಳಿಸಲು ಪ್ರಯತ್ನಿಸಬೇಕು ಮತ್ತು ಅದು ಸಾಧ್ಯವಾಗದಿದ್ದರೆ ತಿರಸ್ಕರಿಸಬೇಕು.

(iv) ಪವಿತ್ರ ಖುರ್‌ಆನಿನ ವಚನಗಳೊಂದಿಗೆ ಒಂದು ಹದೀಸನ್ನು (ಪ್ರವಾದಿ ನುಡಿಯನ್ನು) ಸಮನ್ವಯಗೊಳಿಸಲು ಪ್ರಯತ್ನಿಸುವಾಗ ಒಂದು ಸಂಗತಿ ನೆನಪಿಡಬೇಕು. ಪವಿತ್ರ ಖುರ್‌ಆನಿನ ಸ್ಪಷ್ಟವಾದ ಯಾವುದಾದರೂ ಉಪದೇಶವನ್ನು ತಥಾಕಥಿತವಾದ ಒಂದು ಹದೀಸಿಗಾಗಿ ಹೊಂದಾಣಿಕೆ ಮಾಡಬಾರದು. ಆದರೆ ಆ ಹದೀಸಿಗೆ ವಿಶದೀಕರಣ ಕಂಡುಹಿಡಿಯಲು ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕು. ಆದುದರಿಂದ ಒಂದು ಹದೀಸಿನ ಬಗ್ಗೆ ಸಂಶಯ ಉಂಟಾದರೆ ಅದನ್ನು ಪವಿತ್ರ ಖುರ್‌ಆನಿನ ವಚನಗಳ ಬೆಳಕಿನಲ್ಲಿ ಪರಿಶೀಲಿಸಿ ತೀರ್ಮಾನ ಮಾಡಬೇಕು.

(v) ಪವಿತ್ರ ಖುರ್‌ಆನ್ ಮತ್ತು ಹದೀಸ್ ಪರಸ್ಪರ ವಿರುದ್ಧವಾಗಿರದಿದ್ದರೆ ಹದೀಸಿನ ವಿಶ್ವಾಸಾರ್ಹತೆಯು ಅದರ ವರದಿಗಾರರ ಸರಪಳಿಯ ಪರಿಶೀಲನೆಯಿಂದ ನಿರ್ಧರಿಸಬೇಕು.

(vi) ಅಂತಹ ಹದೀಸನ್ನು ಬೇರೆ ವಿಶ್ವಾಸಾರ್ಹ ಹದೀಸುಗಳೊಂದಿಗೆ ಹೋಲಿಸಿ ನೋಡಿ ಆ ಹದೀಸು ಬೇರೆ ಅಂಗೀಕೃತ ಹದೀಸುಗಳಿಗೆ ವಿರುದ್ಧವಾಗಿರದೆ ಅಂಗೀಕಾರಾರ್ಹವಾಗಿದೆಯೇ ಎಂಬುದನ್ನು ನಿರ್ಧರಿಸಬೇಕು.

(vii) ಹದೀಸನ್ನು ಪರಿಶೀಲಿಸುವ ಇನ್ನೊಂದು ಕ್ರಮ, ಹದೀಸಿನಲ್ಲಿ ಪ್ರಸ್ತಾಪಿಸಲಾದ ವಿಷಯವನ್ನು ವಿಮರ್ಶಾತ್ಮಕವಾಗಿ ನೋಡುವುದಾಗಿದೆ. ಪ್ರವಾದಿಯರ[ಸ] ನಡೆನುಡಿಗಳಿಗೆ ಒಂದು ಹದೀಸು ವಿರುದ್ಧವಾಗಿದ್ದರೆ ಅದನ್ನು ತಿರಸ್ಕರಿಸಬೇಕು. ಅಂತಹ ಹದೀಸು ತರ್ಕ ಮತ್ತು ವಿಚಾರಗಳಿಗೆ ವಿರುದ್ಧವಾಗಿರುತ್ತದೆ.

ಮೇಲೆ ವಿವರಿಸಲಾದ ಮಾರ್ಗಸೂಚಿಗಳ ಬೆಳಕಿನಲ್ಲಿ ಮರಣದಂಡನೆಯನ್ನು ಪ್ರತಿಪಾದಿಸುವವರು ಮುಂದಿರಿಸುವ ಹದೀಸನ್ನು ಪರಿಶೀಲಿಸುವ °

## ಹದೀಸು

ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ಪ್ರತಿಪಾದಿಸುವವರು ಈ ಕೆಳಗಿನ ಹದೀಸನ್ನು ಆಧಾರವಾಗಿ ನೀಡುತ್ತಾರೆ:

ಇಕ್ರಿಮ ಹೀಗೆ ವರದಿ ಮಾಡುತ್ತಾರೆ: ಕೆಲವು ಝಿಂದೀಖರನ್ನು (ಧರ್ಮಭ್ರಷ್ಟರನ್ನು) ಹಝ್ರತ್ ಅಲಿಯವರ[ರ] ಮುಂದೆ ಹಾಜರುಗೊಳಿಸಲಾಯಿತು. ಆಗ ಅವರು ಆ ಜನರನ್ನು ಜೀವಂತವಾಗಿ ಸುಡಲು ಆಜ್ಞಾಪಿಸಿದರು. ಇಬ್ನು ಅಬ್ಬಾಸ್ ಹೇಳಿದರು : ನಾನು ಹಾಗೆ ಆಜ್ಞಾಪಿಸುತ್ತಿರಲಿಲ್ಲ. ಏಕೆಂದರೆ ಹಝ್ರತ್ ಪ್ರವಾದಿ[ಸ] ಹೇಳಿದ್ದರು: ಅಗ್ನಿಯ ಶಿಕ್ಷೆಯನ್ನು ಅಲ್ಲಾಹನು ಮಾತ್ರ ವಿಧಿಸುವನು. ಪ್ರವಾದಿಯವರು[ಸ] ಹೀಗೆಯೂ ಹೇಳಿದ್ದಾರೆ: ಧರ್ಮವನ್ನು ತ್ಯಜಿಸುವವನನ್ನು ಕೊಲ್ಲಿರಿ. (ಬುಖಾರಿ)

ಈ ಹದೀಸು ಅಲ್ಪ ಸ್ವಲ್ಪ ವ್ಯತ್ಯಾಸದೊಂದಿಗೆ ತಿರ್‌ಮಿದಿ, ಅಬೂದಾವೂದ್, ನಸಾಯಿ ಮತ್ತು ಇಬ್ನು ಮಾಜದಲ್ಲಿದೆ.

## ಪವಿತ್ರ ಖುರ್‌ಆನಿಗೆ ವಿರುದ್ಧ

ಈ ಹದೀಸು ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳಿಗೆ ವಿರುದ್ಧವಾಗಿದೆ:*

| | |
|---|---|
| ಅಧ್ಯಾಯ 2 | ವಚನ 57,100, 109, 218, 257, 273 |
| ಅಧ್ಯಾಯ 3 | ವಚನ 21, 73, 86-92, 145 |
| ಅಧ್ಯಾಯ 4 | ವಚನ 83, 138, 139, 146 |
| ಅಧ್ಯಾಯ 5 | ವಚನ 55, 62, 91-93, 99-100 |
| ಅಧ್ಯಾಯ 6 | ವಚನ 67, 105-108, 126 |
| ಅಧ್ಯಾಯ 7 | ವಚನ 124-129 |
| ಅಧ್ಯಾಯ 9 | ವಚನ 11-14 |
| ಅಧ್ಯಾಯ 10 | ವಚನ 100-109 |
| ಅಧ್ಯಾಯ 13 | ವಚನ 41 |
| ಅಧ್ಯಾಯ 15 | ವಚನ 10 |
| ಅಧ್ಯಾಯ 16 | ವಚನ 83, 105-107, 126 |
| ಅಧ್ಯಾಯ 17 | ವಚನ 55 |
| ಅಧ್ಯಾಯ 18 | ವಚನ 30 |
| ಅಧ್ಯಾಯ 19 | ವಚನ 47 |
| ಅಧ್ಯಾಯ 20 | ವಚನ 72-74 |
| ಅಧ್ಯಾಯ 22 | ವಚನ 40 |
| ಅಧ್ಯಾಯ 24 | ವಚನ 55 |

° ಪವಿತ್ರ ಖುರ್‌ಆನ್ ಹೇಳುತ್ತದೆ: "ನೀವು ಆ ಮಾತನ್ನು ಕೇಳಿದಾಗ ಸತ್ಯವಿಶ್ವಾಸಿಗಳಾದ ಪುರುಷರೂ ಸ್ತ್ರೀಯರೂ ತಮ್ಮ ಜನರ ಕುರಿತು ಒಳಿತನ್ನು ಬಗೆದು 'ಇದು ಬರೇ ಸುಳ್ಳು' ಎಂದು ಯಾಕೆ ಹೇಳಲಿಲ್ಲ?" (24:13)

ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಹೇಳಿದರು: "ಒಬ್ಬನು ತಾನು ಕೇಳಿದುದರ ಬಗ್ಗೆ ಪರಿಶೀಲಿಸದೆ ಸ್ವೀಕರಿಸುವುದು ಅವನ ಅಪ್ರಾಮಾಣಿಕತೆಗೆ ಸಾಕ್ಷ್ಯವಾಗಿದೆ." (ಮುಸ್ಲಿಂ, ಸಂಪುಟ 1)

* ಪವಿತ್ರ ಖುರ್‌ಆನಿನ ಅಧ್ಯಾಯಗಳ ಪ್ರಾರಂಭದಲ್ಲಿರುವ 'ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ' ಎಂಬ ವಚನವನ್ನು ಆ ಅಧ್ಯಾಯದ ಒಂದನೆಯ ವಚನವೆಂದು ಲೆಕ್ಕಹಾಕಲಾಗಿದೆ.

ಅಧ್ಯಾಯ 25 ವಚನ 42-44
ಅಧ್ಯಾಯ 26 ವಚನ 117
ಅಧ್ಯಾಯ 28 ವಚನ 57
ಅಧ್ಯಾಯ 29 ವಚನ 19
ಅಧ್ಯಾಯ 39 ವಚನ 30-42
ಅಧ್ಯಾಯ 40 ವಚನ 26, 27
ಅಧ್ಯಾಯ 42 ವಚನ 7, 8, 48, 49
ಅಧ್ಯಾಯ 47 ವಚನ 26
ಅಧ್ಯಾಯ 50 ವಚನ 46
ಅಧ್ಯಾಯ 51 ವಚನ 57
ಅಧ್ಯಾಯ 64 ವಚನ 9-13
ಅಧ್ಯಾಯ 66 ವಚನ 7
ಅಧ್ಯಾಯ 88 ವಚನ 22-23

ಮೇಲೆ ಸೂಚಿಸಲಾದ ವಚನಗಳೊಂದಿಗೆ ನಾವು ಇದರ ಮೊದಲು ಉಲ್ಲೇಖಿಸಿದ ವಚನಗಳನ್ನೂ ಪರಿಶೀಲಿಸಿರಿ. ಈ ಕೆಳಗಿನ ಪವಿತ್ರ ಖುರ್‌ಆನ್ ವಚನಗಳು ಮಾದರಿಯಾಗಿವೆ:

"ಇಸ್ಲಾಮ್ ಹೊರತು ಬೇರೆ ಯಾವುದೇ ಧರ್ಮವನ್ನು ಅವಲಂಬಿಸಲು ಯಾರಾದರೂ ಬಯಸಿದರೆ (ಅವನು ತಿಳಿದುಕೊಳ್ಳಲಿ) ಅವನಿಂದ ಅದು ಎಂದಿಗೂ ಸ್ವೀಕರಿಸಲ್ಪಡಲಾರದು. ಪರ ಲೋಕದಲ್ಲಿ ಅವನು ನಷ್ಟ ಹೊಂದಿದವರಲ್ಲಿ ಸೇರುವನು. ಸತ್ಯವಿಶ್ವಾಸವನ್ನು ಕೈಗೊಂಡು ಈ ಪ್ರವಾದಿ ಸತ್ಯವಂತನೆಂದು ಸಾಕ್ಷ್ಯವಹಿಸಿ, (ಅದಕ್ಕೆ) ತಮಗೆ ಸ್ಪಷ್ಟವಾದ ಪುರಾವೆಗಳು ಲಭಿಸಿದ ಬಳಿಕ ಅವಿಶ್ವಾಸವನ್ನು ತಾಳಿದ ಒಂದು ಜನಾಂಗಕ್ಕೆ ಅಲ್ಲಾಹನು ಹೇಗೆ ನೇರ ಮಾರ್ಗವನ್ನು ತೋರಿಸುವನು? ಅಧರ್ಮಿಗಳಾದವರಿಗೆ ಅಲ್ಲಾಹನು ಸತ್ಪಥವನ್ನು ತೋರಿಸಲಾರ. ಅವರ ಮೇಲೆ ಅಲ್ಲಾಹನ, ದೇವದೂತರ ಮತ್ತು ಮನುಷ್ಯರ ಎಲ್ಲರ ಶಾಪವಿರುವುದೇ ಅವರಿಗಿರುವ ಪ್ರತಿಫಲ. ಅವರು ಅದರಲ್ಲಿ (ಆ ಶಾಪ ಸ್ಥಿತಿಯಲ್ಲಿ) ಕಾಲಕಳೆಯುವರು. ಅವರ ಶಿಕ್ಷೆ ಹಗುರಗೊಳಿಸಲ್ಪಡದು. ಅವರಿಗೆ ಕಾಲಾವಕಾಶವನ್ನೂ ನೀಡಲಾಗದು - ಆ ಬಳಿಕ ಪಶ್ಚಾತ್ತಾಪಪಟ್ಟು ತಿದ್ದಿಕೊಂಡವರ ಹೊರತು. ಖಂಡಿತವಾಗಿಯೂ ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯ ನಿಧಿಯೂ ಆಗಿದ್ದಾನೆ. ಸತ್ಯವಿಶ್ವಾಸವನ್ನು ಹೊಂದಿದ ನಂತರ ಅವಿಶ್ವಾಸವನ್ನು ಹೊಂದಿ ಮತ್ತೆ ಅವಿಶ್ವಾಸದಲ್ಲೇ ಮುನ್ನೇರುವವರ ಪಶ್ಚಾತ್ತಾಪವು ಎಂದಿಗೂ ಸ್ವೀಕರಿಸಲ್ಪಡದು. ಅವರೇ ದಾರಿ ತಪ್ಪಿದವರು. ಅವಿಶ್ವಾಸವನ್ನು ಹೊಂದಿ ಅವಿಶ್ವಾಸದಲ್ಲೇ ಮರಣಹೊಂದಿದವರ ಪೈಕಿ ಯಾರಾದರೂ ಪ್ರಾಯಶ್ಚಿತ್ತವಾಗಿ ಭೂಮಿಯಷ್ಟು ಬಂಗಾರವನ್ನು ತೆತ್ತರೂ ಅವನಿಂದ ಎಂದಿಗೂ ಅದು ಸ್ವೀಕರಿಸಲ್ಪಡಲಾರದು. ಅವರಿಗೆ ಯಾತನಾಮಯ ಶಿಕ್ಷೆ ಇದೆ. ಅವರಿಗೆ ಸಹಾಯಕರಾಗಿ ಯಾರೂ ಇಲ್ಲ." (ಪವಿತ್ರ ಖುರ್‌ಆನ್ 3 : 86-92)

ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಧರ್ಮತ್ಯಾಗಕ್ಕಾಗಿ ಶಿಕ್ಷೆನೀಡುವುದನ್ನು ಈ ವಚನಗಳು ಪ್ರಸ್ತಾಪಿಸುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. "ಅವರು ಅದರಲ್ಲಿ ಕಾಲ.ಕಳೆಯುವರು." ಎಂದು ಹೇಳಿದುದು ಪರಲೋಕದ ಕುರಿತಾಗಿದೆ. 'ದೇವಶಾಪ'ವನ್ನು ವ್ಯಾಖ್ಯಾನಿಸಿ, ಧರ್ಮತ್ಯಾಗಿಗೆ ಮರಣದಂಡನೆ ನೀಡುವ ಅಧಿಕಾರ ತನಗೆ ಲಭಿಸಿದೆ ಎಂದು ಬುದ್ಧಿ ಸ್ತಿಮಿತೆಯುಳ್ಳವನು ವಾದಿಸುವುದು ಊಹಾತೀತವಾಗಿದೆ. ಈ ವಚನಗಳಲ್ಲಿ ಮರಣದಂಡನೆಯ ಪ್ರಸ್ತಾಪವೇ ಇಲ್ಲ. ಅಂತಹ ಶಿಕ್ಷೆ ಇದ್ದುದಾದರೆ ಪವಿತ್ರ ಖುರ್‌ಆನಿನಲ್ಲಿ ಬೇರೆ ಶಿಕ್ಷೆಗಳು ಸೂಚಿಸಲ್ಪಟ್ಟ ಹಾಗೆ ಈ ಬಗ್ಗೆ ಶಿಕ್ಷೆಯೂ ಸೂಚಿಸಲ್ಪಡುತ್ತಿತ್ತು. ತದ್ವಿರುದ್ಧವಾಗಿ ಧರ್ಮತ್ಯಾಗಿ ಪಶ್ಚಾತ್ತಾಪ ಪಡುವ ಬಗ್ಗೆ ಮತ್ತು ದೇವನಿಂದ ಅನಂತರ ಕ್ಷಮಿಸಲ್ಪಡುವ ಕುರಿತು ಈ ವಚನಗಳಲ್ಲಿ ಹೇಳಲಾಗಿದೆ. ಒಬ್ಬನು ಈ ಲೋಕದಲ್ಲಿ ಕೊಲ್ಲಲ್ಪಟ್ಟ ನಂತರ ಹೇಗೆ ತಾನೆ ಪಶ್ಚಾತ್ತಾಪಪಡಲು ಸಾಧ್ಯ?

ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆ ಇದೆ ಎಂದು ವಾದಿಸುವವರು ಈ ಹದೀಸನ್ನು ಸತ್ಯವೆಂದು ಗಣಿಸುವುದಾದರೆ ಈ ಹದೀಸು ಪವಿತ್ರ ಖುರ್‌ಆನಿನ ವಚನಗಳಿಗೆ ವಿರುದ್ಧವಾಗಿರುವುದನ್ನು ಹೇಗೆ ಸಮನ್ವಯಗೊಳಿಸ ಬಲ್ಲರೆಂಬುದನ್ನು ಯೋಚಿಸಬೇಕಾಗಿದೆ. ಮೇಲಿನ ಖುರ್‌ಆನ್ ವಚನಗಳ ಆಧಾರದಲ್ಲಿ ಅವರು ತಮ್ಮ ನಿಲುವನ್ನು ಪುನಃ ಪರಿಶೀಲಿಸಬೇಕು ಮತ್ತು ಈ ವಿಷಯದ ಬಗ್ಗೆ ಪೂರ್ವಗ್ರಹ ಪೀಡಿತರಾಗದೆ ಪರೀಕ್ಷಿಸಬೇಕು. ಪವಿತ್ರ ಖುರ್‌ಆನಿನ ಸ್ಪಷ್ಟ ವಚನಗಳಿಗೆ ವಿರುದ್ಧವಾಗಿ ಮೇಲೆ ವಿವರಿಸಿದಂತಹ ಸಂದೇಹಕರ ಹದೀಸುಗಳಿಗೆ ಹೇಗೆ ತಾನೆ ಹೆಚ್ಚಿನ ಮಹತ್ವ ನೀಡಲು ಸಾಧ್ಯ?

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ನಿನ್ನ ಪ್ರಭು ಇಚ್ಛಿಸಿದ್ದರೆ, ಭೂಲೋಕದಲ್ಲಿರುವ ಎಲ್ಲರೂ ವಿಶ್ವಾಸ ಹೊಂದುತ್ತಿದ್ದರು. ಹಾಗಿರುವಾಗ ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತಪಡಿಸುವಿಯೋ? ಅಲ್ಲಾಹನ ಅನುಮತಿ ವಿನಾ ಯಾರಿಗೂ ವಿಶ್ವಾಸಹೊಂದಲು ಸಾಧ್ಯವಿಲ್ಲ. ಬುದ್ಧಿಯನ್ನು ಉಪಯೋಗಿಸದವರ ಮೇಲೆ ಅವನು ತನ್ನ ಕ್ರೋಧವನ್ನು ಇಳಿಸುತ್ತಾನೆ." (10 : 100, 101)

ಜನರನ್ನು ವಿಶ್ವಾಸಿಗಳಾಗಲು ದೇವನೇ ಬಲಾತ್ಕಾರ ಮಾಡದೆ ಇರುವಾಗ ವಿಶ್ವಾಸವನ್ನು ಬಲಾತ್ಕಾರದಿಂದ ಹೇರಲು ಮತ್ತು ಮೌಢ್ಯದಿಯ ಇಲಿಗೂಡನ್ನು ಸ್ಥಾಪಿಸಲು ನಮಗಿರುವ ಅಧಿಕಾರವಾದರೂ ಏನು? ಧರ್ಮತ್ಯಾಗಕ್ಕೆ ಮರಣ ದಂಡನೆಯನ್ನು ಪ್ರತಿಪಾದಿಸುವವರಿಗೆ ಸಂಬಂಧಿಸಿ ಇರುವ ಸಮಸ್ಯೆ ಏನೆಂದರೆ, ಅವರು ಪ್ರವಾದಿಯವರು(ಸ) ನಿಧನಹೊಂದಿದ ನಂತರ ಕೆಲವು ನೂರು ವರ್ಷ ದಾಟಿ ಹೋದ ಮೇಲೆ ಸಂಗ್ರಹಿಸಲಾದ, ಪವಿತ್ರ ಖುರ್‌ಆನಿನ ತತ್ವೋಪದೇಶಗಳಿಗೆ ವಿರುದ್ಧವಾದ ಹದೀಸುಗಳನ್ನು ಎಲ್ಲರೂ ಏಕ ಪ್ರಕಾರವಾಗಿ ಅಂಗೀಕರಿಸುತ್ತಾರೆ.

## ಪ್ರವಾದಿಯವರ(ಸ) ನಡವಳಿಕೆಗೆ ವಿರುದ್ಧ

ಇಸ್ಲಾಮಿಕ ನಿಯಮಗಳ ಎರಡನೆಯ ಮೂಲಾಧಾರವು ಹಝ್ರತ್ ಪ್ರವಾದಿಯವರ(ಸ) ನಡವಳಿಕೆಯಾಗಿದೆ. ಯಾರನ್ನಾದರೂ ಧರ್ಮತ್ಯಾಗಕ್ಕಾಗಿ ಮರಣದಂಡನೆಗೆ ಗುರಿಪಡಿಸಲಾಯಿತೆಂದು ಹೇಳುವುದು ಪೊಳ್ಳುವಾದವೆಂದು ನಾವು ಈ ಮೊದಲೇ ವಿವರಿಸಿದ್ದೇವೆ.

ಮಕ್ಕದ ಜನರೊಡನೆ ಪ್ರವಾದಿಯವರ(ಸ) ವರ್ತನೆ ಹೇಗಿತ್ತು? ದೇವನ ಸಂದೇಶವನ್ನು ಅಂಗೀಕರಿಸಿ ಶಾಂತಿಯುತವಾಗಿ ಪ್ರಕಟಿಸುವ ಸ್ವಾತಂತ್ರ್ಯ ತನಗೆ ಬೇಕೆಂದು ಪ್ರವಾದಿಯವರು(ಸ) ಬಯಸಿದರು. ಮಕ್ಕದ ಜನರು ಈ ಸ್ವಾತಂತ್ರ್ಯವನ್ನು ನೀಡಲಿಲ್ಲ ಮತ್ತು ಪ್ರವಾದಿಯವರ(ಸ) ಜೊತೆ ಸೇರಿದವರನ್ನು ದಂಡಿಸಿದರು. ಮಕ್ಕದ ಜನರ ದೃಷ್ಟಿಯಲ್ಲಿ ಪ್ರವಾದಿಯವರ(ಸ) ಸಂದೇಶವನ್ನು ನಂಬಿದವರು ಧರ್ಮತ್ಯಾಗಿಗಳಾಗಿದ್ದರು. ಅವರು ಮೂರ್ತಿಪೂಜೆ ತ್ಯಜಿಸಿದವರಾಗಿದ್ದರು.

ಹಝ್ರತ್ ಪ್ರವಾದಿಯವರು[ಸ] ತನ್ನ ಜೀವಿತವನ್ನು ಪ್ರತಿಯೊಬ್ಬರ ಮೂಲಭೂತ ಹಕ್ಕುಗಳ ಸಂರಕ್ಷಣೆಗಾಗಿ ಹೋರಾಡುತ್ತಾ ಕಳೆದರು. ಪ್ರತಿಯೊಬ್ಬನಿಗೆ ತಾನಿಚ್ಛಿಸುವ ಧರ್ಮವನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವಿದೆ; ಯಾರೂ ಇನ್ನೊಬ್ಬನ ಧರ್ಮವನ್ನು ಬಲಾತ್ಕಾರದಿಂದ ಬದಲಾಯಿಸಬಾರದು; ಪ್ರತಿಯೊಬ್ಬನಿಗೆ ತನ್ನ ಧರ್ಮ ಬದಲಾಯಿಸುವ ಹಕ್ಕಿದೆ; ಎಲ್ಲಾ ಧರ್ಮೀಯರಿಗೂ ಈ ಹಕ್ಕಿದೆ ಎಂಬುದು ಅವರ ನಿಲುವಾಗಿತ್ತು.

ಧರ್ಮದ ಚರಿತ್ರೆಯಲ್ಲಿ ಎಲ್ಲಾ ಪ್ರವಾದಿಗಳಿಂದ ವಿರೋಧಿಗಳ ವಿರುದ್ಧ ನಡೆಸಲಾದ "ಪವಿತ್ರ ಯುದ್ಧ"ದ ನಿಜವಾದ ಅರ್ಥ ಇದೇ ಆಗಿದೆ. ಪವಿತ್ರ ಖುರ್‌ಆನ್ ಹಿಂದಿನ ಕಾಲದ ಪ್ರವಾದಿಗಳ ಚರಿತ್ರೆಯನ್ನು ಹೀಗೆಯೇ ವಿವರಿಸಿದೆ. (ಪವಿತ್ರ ಖುರ್‌ಆನ್ ವಚನ 2:5; 6:113, 21:42; 25:32; 36:8,31; 43:8 ನೋಡಿರಿ). ಕೆಲವು ಪ್ರವಾದಿಗಳ ಹೆಸರು ಹೀಗಿವೆ. ಪ್ರವಾದಿ ಇಬ್ರಾಹೀಮ್[ಅ] (ವಚನ 6:75-79; 19:47; 21:53,59,61, 69-70; 37:89-91,98); ಪ್ರವಾದಿ ಇಲ್‌ಯಾಸ್[ಅ] (ವಚನ 37:126-127); ಪ್ರವಾದಿ ಲೂತ್[ಅ] (26:166-168; 27:57; 15:71); ಪ್ರವಾದಿ ನೂಹ್[ಅ] (7:60; 10:72; 11:26, 27; 26:117; 71:2-21); ಪ್ರವಾದಿ ಮೂಸಾ[ಅ] (7:105-106; 7:124; 10:76-79; 17:102-103; 20:44-45,50-53; 26:19-34) ಮತ್ತು ಪ್ರವಾದಿ ಈಸಾ[ಅ] (3:52-56; 5:118; 19:37; 43:65)

ಅವರೆಲ್ಲರ ಹೋರಾಟ ಯಾಕಾಗಿತ್ತು? ಅವರ ಸಮಕಾಲೀನರಾದ ಜನರು ಪ್ರವಾದಿಗಳನ್ನು ವಿರೋಧಿಸಿದುದು ಅವರಿಗೆ ಜನರ ಧರ್ಮವನ್ನು ಬದಲಾಯಿಸಲು ಹಕ್ಕು ಇಲ್ಲ ಎಂಬ ವಾದದೊಂದಿಗಾಗಿತ್ತು. ಅದಕ್ಕೆ ವಿರುದ್ಧವಾಗಿ ಪ್ರವಾದಿಗಳು ಹೋರಾಟ ನಡೆಸಿದರು. ಪ್ರತಿಯೊಬ್ಬನಿಗೆ ತನಗಿಷ್ಟವಿರುವ ಧರ್ಮವನ್ನು ಅವಲಂಬಿಸುವ ಹಕ್ಕಿದೆ. ಶಾಂತಿ ಮತ್ತು ಪ್ರೇಮದ ಸಂದೇಶ ಶಾಂತಿಯುತವಾಗಿ ಪ್ರಚಾರಗೊಳಿಸುವಾಗ ಅದನ್ನು ಬಲಾತ್ಕಾರದಿಂದ ತಡೆಯುವ ಹಕ್ಕು ಯಾರಿಗೂ ಇರುವುದಿಲ್ಲ.

ಈ ತರ್ಕಬದ್ಧ ಮಾನವೀಯ ನಿಲುವನ್ನು ಹಠದಿಂದ ಎದುರಿಸಿದ ವಿರೋಧಿಗಳು ಪ್ರವಾದಿಗಳನ್ನು ತಿರಸ್ಕರಿಸಿದರು ಮತ್ತು ಜನರ ವಿಶ್ವಾಸವನ್ನು ಬದಲಾಯಿಸುವ ಹಕ್ಕು ಪ್ರವಾದಿಗಳಿಗಿಲ್ಲವೆಂಬ ನಿರ್ಧಾರಕ್ಕೆ ಅಂಟಿಕೊಂಡರು. ಪ್ರವಾದಿಗಳು ಮತಪ್ರಚಾರವನ್ನು ಮಾಡುವುದರಿಂದ ಹಿಂದೆ ಸರಿಯದಿದ್ದರೆ ಅವರು ಧರ್ಮ ತ್ಯಾಗಕ್ಕಾಗಿ (ವಿರೋಧಿಗಳ ದೃಷ್ಟಿಯಲ್ಲಿ)ರುವ ಶಿಕ್ಷೆಗೆ ಪಾತ್ರರಾಗಲು ಸಿದ್ಧರಾಗಬೇಕು. ಅದು ಮರಣದಂಡನೆ ಅಥವಾ ಗಡಿಪಾರಿನ ಶಿಕ್ಷೆಯ ರೂಪದಲ್ಲಿರುವುದು.

ಹಝ್ರತ್ ಪ್ರವಾದಿ[ಸ] ತನ್ನ ವಿರೋಧಿಗಳ ವಿರುದ್ಧ ಮಾಡಿದ ಹೋರಾಟವು ಹಿಂದಿನ ಪ್ರವಾದಿಗಳ ನಡವಳಿಕೆಗೆ ಸಮವಾಗಿತ್ತು. ಪ್ರವಾದಿ[ಸ] ತನ್ನ ಜೀವಿತಾದ್ಯಂತ ಪಾಲಿಸಿದ ತತ್ವವನ್ನು ನಿರಾಕರಿಸಲು ಬುದ್ಧಿಯುಳ್ಳ ಯಾವುದಾದರೂ ವ್ಯಕ್ತಿಗೆ ಹೇಗೆ ತಾನೆ ಸಾಧ್ಯ? ಪ್ರವಾದಿಯವರ[ಸ] ನಿಲುವನ್ನು ಪ್ರಶ್ನಿಸಬಲ್ಲವರು ಯಾರು? ಪವಿತ್ರ ಖುರ್‌ಆನ್, ಪ್ರವಾದಿಯವರ[ಸ] ಸುನ್ನತ್ (ನಡವಳಿಕೆ) ಮತ್ತು ಬೇರೆ ಹದೀಸುಗಳು ಇಕ್ರಿಮ ವರದಿ ಮಾಡಿದ ಹದೀಸನ್ನು ಅಲ್ಲಗಳೆಯುವಂತೆ ಮಾಡುತ್ತವೆ. ಈ ಹದೀಸು ವಿಶ್ವಾಸಾರ್ಹವಲ್ಲವೆಂಬುದರ ಕುರಿತು ಇನ್ನಷ್ಟು ಒತ್ತಿ ಹೇಳಬೇಕಾಗಿಲ್ಲ.

## ಹದೀಸಿನ ವಿಶ್ವಾಸಾರ್ಹತೆ ಮತ್ತು ವರದಿಗಾರರು

ಈ ಹದೀಸು, ಹದೀಸಿನ ವಿಶ್ವಾಸಾರ್ಹವಾದ ಆರು ಗ್ರಂಥಗಳಲ್ಲಿ ಒಂದರ ಹೊರತು ಉಳಿದ ಐದರಲ್ಲಿ ಉಲ್ಲೇಖಿತವಾಗಿದೆ. ಬುಖಾರಿ, ತಿರ್ಮದಿ, ಅಬೂದಾವೂದ್, ನಸಾಯಿ ಮತ್ತು ಇಬ್ನು ಮಾಜದಲ್ಲಿ ಈ ಹದೀಸು ಇದೆ.

ಒಂದು ಹದೀಸು ಅಧಿಕೃತವಾದುದೆಂದು ನಿರ್ಧರಿಸಲ್ಪಡಲು ಅದು ಒಂದು ಅಧಿಕೃತ ಹದೀಸು ಸಂಗ್ರಹದಲ್ಲಿ ಇದ್ದರೆ ಮಾತ್ರ ಸಾಕಾಗಲಾರದು. ಒಂದು ಹದೀಸು ಸ್ವೀಕೃತವಾಗಲು ಬೇರೆ ಪರೀಕ್ಷೆಗಳನ್ನೂ ನಡೆಸಬೇಕಾಗಿದೆ. ಇವುಗಳಲ್ಲಿ ಮುಖ್ಯವಾದುದು ವರದಿಗಾರರ ಸರಪಳಿಯಲ್ಲಿರುವ ವರದಿಗಾರರ ಸ್ವಭಾವಗುಣಗಳನ್ನು ಪರಿಶೀಲಿಸುವುದಾಗಿದೆ.

ಹಲವು ವಿದ್ವಾಂಸರು ಈ ಕೆಲಸಕ್ಕಾಗಿ ತಮ್ಮ ಜೀವಿತವನ್ನೇ ಮೀಸಲಾಗಿರಿಸಿದ್ದರು. ಅವರು ಕಷ್ಟಪಟ್ಟು ಸಂಗ್ರಹಿಸಿದ ಜೀವಿತ ಚರಿತ್ರೆಗಳು ನಮಗೆ ಲಭಿಸಿವೆ. ಅವುಗಳ ಮೂಲಕ ವರದಿಗಾರರ ಸರಪಳಿಯ ಪ್ರತಿಯೊಂದು ಕೊಂಡಿಯ ಬಗ್ಗೆ ತಿಳಿಯಬಹುದಾಗಿದೆ. ನಾವು ಈ ಹದೀಸನ್ನು ಪರಿಶೀಲಿಸುವ. ಈ ಹದೀಸನ್ನು ಅಹದ್ ಗರೀಬ್ ವರ್ಗಕ್ಕೆ ಸೇರಿಸಲಾಗಿದೆ. (ಅಂದರೆ ಒಬ್ಬ ಮೂಲ ವರದಿ ಗಾರನಿಗೆ ಸಂಬಂಧಿಸಿ ವರದಿಗಾರರ ಒಂದೇ ಒಂದು ಸರಪಳಿ.) ಹದೀಸಿನ ಐದು ಸಂಗ್ರಹ ಗ್ರಂಥಗಳಲ್ಲಿ ಮೂಲ ವರದಿಗಾರನ ಹೆಸರು ಇಕ್ರಿಮ ಎಂದು ಮಾತ್ರ ಬರೆಯಲಾಗಿದೆ.

ಲಕ್ನೋದ ಮೌಲಾನ ಅಬ್ದುಲ್ ಹಯ್ಯ್ ಇಕ್ರಿಮ ವರದಿ ಮಾಡಿದ ಈ ಹದೀಸಿನ ಬಗ್ಗೆ ಹೀಗೆ ಹೇಳುತ್ತಾರೆ: ಇಮಾಮ್ ಬುಖಾರಿ ತನ್ನ ಹದೀಸು ಸಂಗ್ರಹದಲ್ಲಿ ಈ ಹದೀಸನ್ನು ಉಲ್ಲೇಖಿಸಿದ ಕಾರಣ ಉಳಿದ ಸಂಗ್ರಹಕರು ಈ ಹದೀಸಿನ ಬಗ್ಗೆ ಸ್ವತಃ ಸಂಶೋಧನೆ ನಡೆಸದೆ ತಮ್ಮ ಗ್ರಂಥಗಳಲ್ಲಿ ಸೇರಿಸಿದರು. (ಮೌಲಾನ ಅಬ್ದುಲ್ ಹಯ್ಯ್ : ಅರ್ರಫಲ್‌ವತ್ತಕ್‌ಮೀಲ್)

ಒಂದು ಹದೀಸು ವರದಿಗಾರರ ಒಂದು ಸರಪಳಿಯ ಮೂಲಕ ನಿವೇದಿಸಲಾಗಿದ್ದರೂ ಅಧಿಕೃತವಾಗಲು ಸಾಧ್ಯವಿದೆ. ಆದರೆ ಆ ಹದೀಸು ಒಂದಕ್ಕಿಂತ ಹೆಚ್ಚು ನಂಬಿಕೆಗರ್ಹ ವರದಿಗಾರರ ಸರಪಳಿಗಳಿಂದ ನಿವೇದಿಸಲ್ಪಟ್ಟ ಹದೀಸಿನಷ್ಟು ವಿಶ್ವಾಸಾರ್ಹವಾಗಿದೆ ಎಂದು ಗಣಿಸಲಾಗದು. ಮನುಷ್ಯರ ಹಕ್ಕುಗಳು, ಕರ್ತವ್ಯಗಳು ಮತ್ತು ಶಿಕ್ಷೆಗಳು ಇಂತಹ ಏಕ ಸರಪಳಿಯ ಹದೀಸುಗಳಿಂದ ಪ್ರಭಾವಿತವಾಗಲು ಅನುಮತಿ ಇರುವುದಿಲ್ಲ. ಹುದೂದ್ ಬಗ್ಗೆ ಹೆಚ್ಚಿನ ಜಾಗರೂಕತೆಯ ಆವಶ್ಯಕತೆ ಇದೆ. ಪವಿತ್ರ ಖುರ್‌ಆನ್ ವಿಧಿಸುವ ಶಿಕ್ಷೆಯನ್ನು ಹುದೂದ್ ಎನ್ನುತ್ತಾರೆ. ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆಯನ್ನು ಪ್ರತಿಪಾದಿಸುವವರು ತಮ್ಮ ನಿಲುವು ಪವಿತ್ರ ಖುರ್‌ಆನ್ ವಿಧಿಸುವ ಹುದೂದ್ ಶಿಕ್ಷೆಯ ಪರಿಧಿಯೊಳಗಿದೆ ಎಂದು ವಾದಿಸುತ್ತಾರೆ. ಆದರೆ ಅವರ ಈ ವಾದವನ್ನು ನಾವು ಈ ಮೊದಲೇ ಖಂಡಿಸಿದ್ದೇವೆ.

ವರದಿಗಾರರ ಒಂದು ಸರಪಳಿಯಿಂದ ಮಾತ್ರ ನಿವೇದಿಸಲಾದ ಹದೀಸನ್ನು ಕೆಲವರು ಸರಿಯಾದುದೆಂದು ಗಣಿಸಿದರೂ ಆ ಹದೀಸಿಗೆ ನ್ಯಾಯ ತೀರ್ಮಾನದಲ್ಲಿ ಹಸ್ತಕ್ಷೇಪ ಮಾಡುವ ಹಕ್ಕು ಇರುವುದಿಲ್ಲ. ಈ ಹದೀಸನ್ನು ವರದಿ ಮಾಡಿದ ಇಕ್ರಿಮರ ಕುರಿತು ಮತ್ತು ಅವರ ಖ್ಯಾತಿಯ ಕುರಿತು ತಿಳಿಯುವುದು ಆವಶ್ಯಕವಾಗಿದೆ.

### ಇಕ್ರಿಮ೦:

ಇಕ್ರಿಮರವರು ಇಬ್ನು ಅಬ್ಬಾಸ್‌ರವರ ಗುಲಾಮರೂ ಅವರ ವಿದ್ಯಾರ್ಥಿಯೂ ಆಗಿದ್ದರು. ಅವರು ವಿದ್ಯಾಭ್ಯಾಸದಲ್ಲಿ ಹಿಂದೆ ಇರುವವರಾಗಿದ್ದರು. ಅವರು ತನ್ನ ಬಗ್ಗೆ ಹೀಗೆ ವರದಿ ಮಾಡಿದ್ದಾರೆ: ವಿದ್ಯಾಭ್ಯಾಸದ ಬಗ್ಗೆ ತನ್ನ ಅನಾಸಕ್ತಿಯ ಕಾರಣ ಕೋಪಾವಿಷ್ಟರಾದ ಇಬ್ನು ಅಬ್ಬಾಸ್ ತನ್ನ ಕೈಕಾಲುಗಳನ್ನು

೦ ಇವರು ಅಬೂ ಜಹಲ್‌ನ ಪುತ್ರ ಇಕ್ರಿಮ ಅಲ್ಲ.

ಹಗ್ಗದಿಂದ ಬಿಗಿದು ತನ್ನನ್ನು ವಿದ್ಯಾಭ್ಯಾಸದ ತರಗತಿಯಿಂದ ಓಡಿ ಹೋಗದಂತೆ ಮಾಡಿ ಪ್ರವಚನ ಕಾಲದಲ್ಲಿ ತನ್ನನ್ನು ಬಲಾತ್ಕಾರದಿಂದ ತಡೆದಿರಿಸುತ್ತಿದ್ದರು. (ಇಬ್ನು ಸಅದ್: ಅತ್ತಬಖಲ್ ಕಬೀರ್, ಸಂಪುಟ 2, ಪುಟ 386)

ಇಕ್ರಿಮ ಇಸ್ಲಾಮಿನ ಚತುರ್ಥ ಖಲೀಫ ಹಝ್ರತ್ ಅಲಿಯವರ[ರ] ವಿರೋಧಿಯಾಗಿದ್ದರು. ಹಝ್ರತ್ ಅಲಿ[ರ] ಮತ್ತು ಇಬ್ನು ಅಬ್ಬಾಸ್ ಮಧ್ಯೆ ಭಿನ್ನಾಭಿಪ್ರಾಯ ತಲೆದೋರಿದಾಗ ಇಕ್ರಿಮ ಖಾರಿಜಿಗಳ ಕಡೆಗೆ ವಾಲುವವರಾಗಿದ್ದರು. ಅನಂತರ ಅಬ್ಬಾಸೀ ವಂಶದ ಆಡಳಿತ ಕಾಲದಲ್ಲಿ ಇಕ್ರಿಮ ಗೌರವದ ಸ್ಥಾನ ಪಡೆದರು. (ಅಬ್ಬಾಸಿ ವಂಶದವರು ಹಝ್ರತ್ ಅಲಿರವರೊಂದಿಗೆ[ರ] ಸಂಬಂಧ ಹೊಂದಿದುದನ್ನು ರಾಜಕೀಯ ಕಾರಣದಿಂದ ಕಠಿಣವಾಗಿ ವಿರೋಧಿಸುವವರಾಗಿದ್ದರು.) ಇಕ್ರಿಮ ಹಝ್ರತ್ ಅಲಿರವರನ್ನು[ರ] ವಿರೋಧಿಸುತ್ತಿದ್ದ ಕಾರಣ ಮತ್ತು ಖಾರಿಜಿಗಳೊಂದಿಗೆ ಅವರಿಗಿದ್ದ ಮಧುರ ಸಂಬಂಧದ ಕಾರಣದಿಂದ ಅಬ್ಬಾಸಿ ವಂಶಜರಿಗೆ ಪ್ರಿಯರಾಗಿದ್ದರು. (ಮೀಝಾನುಲ್ ಐತದಾಲ್, ಸಂಪುಟ 2, ಪುಟ 35)

ಝುಹಬಿ ಹೀಗೆ ಹೇಳುತ್ತಾರೆ: ಇಕ್ರಿಮ ಖಾರಿಜಿ ಪಂಥದವರಾದ ಕಾರಣ ಅವರು ವರದಿ ಮಾಡಿದ ಹದೀಸುಗಳು ನಂಬಿಕೆಗೆ ಅನರ್ಹವಾಗಿವೆ. ಧರ್ಮತ್ಯಾಗಕ್ಕೆ ಶಿಕ್ಷೆ ವಿಧಿಸುವ ಕುರಿತು ಅಧ್ಯಯನ ನಡೆಸಿದ ವಿದ್ವಾಂಸರಾದ ಇಮಾಮ್ ಅಲಿಬಿನ್ ಮದೈನಿ ಹೀಗೆಯೇ ಅಭಿಪ್ರಾಯ ಸೂಚಿಸಿರುವರು. ಯಹ್‌ಯಾ ಬಿನ್ ಬೇಕಿರ್ ಹೀಗೆ ಹೇಳುತ್ತಿದ್ದರು: ಈಜಿಪ್ಟ್, ಅಲ್ಜೀರಿಯಾ ಮತ್ತು ಮೊರಾಕ್ಕೋದ ಖಾರಿಜಿಗಳು (ಖವಾರಿಜ್) ಇಕ್ರಿಮರೊಂದಿಗೆ ನಿಕಟ ಸಂಬಂಧ ಹೊಂದಿದ್ದರು.

ಒಂದು ವಿಷಯ ಗಮನಾರ್ಹವಾಗಿದೆ. ಧರ್ಮತ್ಯಾಗಕ್ಕಾಗಿ ಮರಣದಂಡನೆಯ ಶಿಕ್ಷೆ ನೀಡಿದ ಪ್ರಕರಣಗಳು ಬಹುತೇಕ ಬಸ್ರಾ, ಕೂಫ ಮತ್ತು ಯೆಮನ್‌ನಿಂದ ವರದಿಯಾಗಿವೆ. ಹಿಜಾಝ್ (ಮಕ್ಕ, ಮದೀನ) ಪ್ರದೇಶದ ಜನರು ಇವುಗಳ ಕುರಿತು ಸಂಪೂರ್ಣವಾಗಿಯೂ ತಿಳಿಯದವರಾಗಿದ್ದರು. ಇಕ್ರಿಮರಿಂದ ವರದಿಯಾದುದನ್ನು ಇರಾಕೀ ವರದಿ ಎಂಬ ವಿಭಾಗಕ್ಕೆ ಸೇರಿಸಲಾಗಿದೆ. ಮಕ್ಕದ ಇಮಾಮರಾಗಿದ್ದ ತೌಸ್ ಬಿನ್ ಕೈಸಾನ್ ಇರಾಕ್ ವರದಿಗಳು ಹೆಚ್ಚಾಗಿ ಸಂಶಯಕರವಾಗಿವೆ ಎಂದು ಹೇಳಿದ್ದಾರೆ. (ಅಬೂ ದಾವೂದ್, ಸಂಪುಟ 2, ಪುಟ 35)

ಇಷ್ಟು ಮಾತ್ರವಲ್ಲ, ಯಹ್‌ಯಾ ಬಿನ್ ಸಯೀದುಲ್ ಅನ್ಸಾರಿ ಇಕ್ರಿಮರ ಕುರಿತು ನಂಬಿಕೆಗರ್ಹರಲ್ಲವೆಂದು ಹೇಳಿದ್ದಾರಲ್ಲದೆ ಅವರನ್ನು ಕಝ್ಝಾಬ್ (ಮಹಾ ಸುಳ್ಳುಗಾರ) ಎಂದು ಕರೆದಿದ್ದಾರೆ. (ಕಿತಾಬ್ ಅಲ್ ಸುಅಫಲ್ ಕಬೀರ್ ನೋಡಿರಿ).

ಅಬ್ದುಲ್ಲಾ ಬಿನ್ ಹಾರಿಸ್‌ರವರು ಅಲಿ ಬಿನ್ ಅಬ್ದುಲ್ಲಾ ಬಿನ್ ಅಬ್ಬಾಸ್‌ರನ್ನು ಭೇಟಿಯಾದಾಗ ಕಂಡ ಒಂದು ದೃಶ್ಯವನ್ನು ಹೀಗೆ ವಿವರಿಸಿದ್ದಾರೆ: ಅಲಿ ಬಿನ್ ಅಬ್ದುಲ್ಲಾ ಬಿನ್ ಅಬ್ಬಾಸ್‌ರವರ ಮನೆ ಬಾಗಿಲಿನ ಮುಂದೆ ಒಂದು ಕಂಬಕ್ಕೆ ಇಕ್ರಿಮರನ್ನು ಕಟ್ಟಿಹಾಕಿದುದನ್ನು ಕಂಡು ಅವರಿಗೆ ಆಘಾತವೂ ಆಶ್ಚರ್ಯವೂ ಆಯಿತು. ಆಗ ಅವರು ಈ ಕ್ರೂರವರ್ತನೆಯ ಬಗ್ಗೆ ಅಲಿ ಬಿನ್ ಅಬ್ದುಲ್ಲಾ ಬಿನ್ ಅಬ್ಬಾಸ್‌ರವರನ್ನು ಪ್ರಶ್ನಿಸಿದರು. ಅವರಿಗೆ ದೇವ ಭಯವಿಲ್ಲವೇ ಎಂದು ಕೇಳಿದರು. ಇಕ್ರಿಮರವರು ತನ್ನ ಭಕ್ತಿ ಮತ್ತು ಇತರ ಕಾರಣಗಳಿಂದ ಪ್ರಸಿದ್ಧರಾಗಿದ್ದು ಅಂತಹ ಮಹಾನ್ ವ್ಯಕ್ತಿ ತನ್ನ ದಿವಂಗತ ಯಜಮಾನನ ಪುತ್ರನಿಂದಲೇ ಈ ರೀತಿ ಶಿಕ್ಷಿಸಲ್ಪಡುವುದು ಸರಿಯೋ ಎಂದು ಕೇಳುವುದು ಅವರ ಉದ್ದೇಶವಾಗಿತ್ತು. ಈ ಪ್ರಶ್ನೆಗೆ ಉತ್ತರವಾಗಿ ಅಲಿ ಬಿನ್ ಅಬ್ದುಲ್ಲಾ ಬಿನ್ ಅಬ್ಬಾಸ್ ತನ್ನ ವರ್ತನೆಯನ್ನು ಸರಿಯೆಂದು ಹೇಳಿದರು ಮತ್ತು ತನ್ನ ದಿವಂಗತ ಪಿತ ಇಬ್ನು ಅಬ್ಬಾಸ್ ಕುರಿತು ಇಕ್ರಿಮ ಸುಳ್ಳು ಹೇಳುವ ಉದ್ಧಟತನ ತೋರಿಸಿದರು ಎಂದು ಹೇಳಿದರು. (ಅಬೂ ಜಾಫರ್ ಮುಹಮ್ಮದ್ ಬಿನ್ ಅಮ್ರ್ ಬಿನ್ ಮೂಸಾ ಬಿನ್ ಹಾಮದ್ ಅಲ್ ಅಕ್‌ಬ್ಲಿ ಅಲ್ ಮುಲ್‌ಕಿ ಕಿತಾಬ್ ಅಲ್ ಸುಅಫಲ್ ಕಬೀರ್.) ಇಕ್ರಿಮರವರ ಸ್ವಭಾವದ ಬಗ್ಗೆ ತೀರ್ಪು ನೀಡಲು ಅಲಿ ಬಿನ್ ಅಬ್ದುಲ್ಲಾ ಬಿನ್ ಅಬ್ಬಾಸ್‌ಗಿಂತ ಉತ್ತಮವಾಗಿ ಬೇರೆ ಯಾರಿಗೆ ತಾನೆ ಸಾಧ್ಯ? ಹದೀಸನ್ನು ಮೊದಲು ಕ್ರೋಢೀಕರಿಸಿದ ಇಮಾಮ್ ಮಾಲಿಕ್ ಬಿನ್ ಅನಸ್ (95-179 ಹಿಜರಿ) ಮುಸ್ಲಿಮ್ ಜಗತ್ತಿನಲ್ಲಿ ಅತ್ಯಂತ ಗೌರವಿಸಲ್ಪಡುತ್ತಾರೆ. ಅವರು ಹೇಳಿದುದು ಹೀಗೆ: ಇಕ್ರಿಮ ವರದಿ ಮಾಡಿದ ಹದೀಸುಗಳು ನಂಬಿಕೆಗೆ ಅನರ್ಹವಾಗಿವೆ. (ಮೀಝಾನುಲ್ ಐತಿದಾಲ್ ಸಂಪುಟ2, ಪುಟ209)

ಈ ಕೆಳಗಿನ ಪ್ರಸಿದ್ಧ ವಿದ್ವಾಂಸರು ಇಕ್ರಿಮರ ಕುರಿತು ಅವರು ಉತ್ಪ್ರೇಕ್ಷೆ ಮಾಡುವ ಸ್ವಭಾವ ಹೊಂದಿದ್ದರು ಎಂದು ಹೇಳಿದ್ದಾರೆ. ಇಮಾಮ್ ಯಹ್‌ಯಾ ಬಿನ್ ಸಯೀದಲ್ ಅನ್‌ಸಾರಿ, ಅಲಿ ಬಿನ್ ಅಬ್ದುಲ್ಲಾ ಬಿನ್ ಅಬ್ಬಾಸ್ ಮತ್ತು ಅತಾ ಬಿನ್ ಅಬೀ ರಾಬಿಲ್. (ಫತ್‌ಹುಲ್ ಬಾರಿ)

ಯಾವ ಮನುಷ್ಯನ ಏಕಮಾತ್ರ ವರದಿಯಿಂದ ಅನೇಕ ಜನರ ಜೀವಗಳು ಅವರು ಧರ್ಮತ್ಯಾಗ ಮಾಡಿದುದಕ್ಕಾಗಿ ಮರಣದಂಡನೆಗೆ ಗುರಿಯಾದವೋ ಆ ಮನುಷ್ಯನ ನಿಜವಾದ ಸ್ವಭಾವ ಚಿತ್ರಣ ಮೇಲಿನದಾಗಿದೆ.

## ಇಬ್ನು ಅಬ್ಬಾಸ್

ಇಬ್ನು ಅಬ್ಬಾಸ್° ಎಂಬ ಹೆಸರು ಒಂದು ಹದೀಸಿನ ಮೊದಲಿನ ವರದಿಗಾರನಾಗಿ ಬಂದಾಗಲೆಲ್ಲಾ ಬಹುತೇಕ ಮುಸ್ಲಿಮ್ ಮತಪಂಡಿತರು ಬಹಳ ಗೌರವಿಸುತ್ತಾರೆ. ಅವರ ಹೆಸರಿನ ಕಾರಣದಿಂದ ಮತ್ತು ಅವರ ಕೀರ್ತಿಯ ಕಾರಣದಿಂದ ಸುಳ್ಳು ಹದೀಸುಗಳನ್ನು ಸೃಷ್ಟಿಸುವವರು ತಮ್ಮ ಸುಳ್ಳು ಹದೀಸುಗಳನ್ನು ಅವರಿಂದ ಪ್ರಾರಂಭಿಸುತ್ತಾರೆ ಎಂಬುದನ್ನು ಅವರು ಮರೆತುಬಿಡುತ್ತಾರೆ. ಆದುದರಿಂದ ಇಬ್ನು ಅಬ್ಬಾಸ್ ಹೆಸರಿನಲ್ಲಿ ಪ್ರಾರಂಭವಾಗುವ ಹದೀಸುಗಳನ್ನು ಸರಿಯಾಗಿ ಪರೀಕ್ಷಿಸಿ ತೀರ್ಮಾನ ಮಾಡಬೇಕಾಗಿದೆ.

ಒಬ್ಬ ವರದಿಗಾರನು ಇಬ್ನು ಅಬ್ಬಾಸ್ ಹೇಳಿದುದನ್ನು ಪ್ರಾಮಾಣಿಕವಾಗಿ ವಿವರಿಸಿದ್ದರೂ ಇಕ್ರಿಮರು ಇಬ್ನು ಅಬ್ಬಾಸ್ ಹೇಳಿದುದನ್ನು ಸರಿಯಾಗಿ ಅರ್ಥಮಾಡದೆ ಹೇಳಿದುದನ್ನು ನಿರಾಕರಿಸಲಾಗದು. ಈ ಕೆಳಗಿನ ಹದೀಸು ಈ ಬಗ್ಗೆ ಹೆಚ್ಚಿನ ವಿಶದೀಕರಣ ನೀಡುವುದು.

ಇಬ್ನು ಅಬ್ಬಾಸ್ ಹೇಳುತ್ತಾರೆ: ಉಮರ್ ಹೀಗೆ ಹೇಳುತ್ತಿದ್ದರು: ಪ್ರವಾದಿಯವರು[ಸ] ಹೇಳಿದರು: ಮೃತನಾದವನ ಮೃತ ಶರೀರದ ಮುಂದೆ ಅತ್ತರೆ ಮೃತನಾದವನಿಗೆ ಶಿಕ್ಷೆ ನೀಡಲ್ಪಡುವುದು. ಇಬ್ನು ಅಬ್ಬಾಸ್ ಪುನಃ ಹೇಳಿದರು: ಉಮರ್ ಮೃತರಾದಾಗ ಅವರು ಹೇಳಿದ ಹದೀಸಿನ ಕುರಿತು ಆಯಿಶಾರವರನ್ನು[ರ] ಕೇಳಿದರು. ಆಗ ಆಯಿಶಾ[ರ] ಹೇಳಿದರು: "ಉಮರನ್ನು ಅಲ್ಲಾಹನು ಕ್ಷಮಿಸಲಿ. ಪ್ರವಾದಿಯವರು[ಸ] ಹಾಗೇನೂ ಹೇಳಿಲ್ಲ. ಅವರು ಹೇಳಿದುದು ಹೀಗೆ: ಒಬ್ಬ ಅವಿಶ್ವಾಸಿಯ ಉತ್ತರಾಧಿಕಾರಿಗಳು ಅವನ ಮೃತಶರೀರದ ಮುಂದೆ ಕುಳಿತು ಗೋಳಿಟ್ಟರೆ ಅವರ ಕೃತ್ಯದಿಂದ ಆ ಅವಿಶ್ವಾಸಿಯ ಶಿಕ್ಷೆಯು ವರ್ಧಿಸುವುದು. ಆಯಿಶಾ[ರ] ಹೀಗೆಯೂ ಹೇಳಿದರು: ನಮಗೆ ಪವಿತ್ರ ಖುರ್‌ಆನಿನ ಈ ವಚನ ಸಾಕು: "ನಿಶ್ಚಯವಾಗಿಯೂ ಯಾವುದೇ ಆತ್ಮವು ಇನ್ನೊಂದರ ಭಾರವನ್ನು ಹೊರಲಾರದು." (ಬುಖಾರಿ - ಕಿತಾಬುಲ್ ಜನಾಯಿಝ್)

ಹಝ್ರತ್ ಉಮರ್[ರ] ಅವರಂತಹ ಮಹಾನ್ ವ್ಯಕ್ತಿ ಸಹ

° ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಸೋದರ ಮಾವ ಅಬ್ಬಾಸ್‌ರವರ[ರ] ಪುತ್ರ. ಇಬ್ನು ಅಬ್ಬಾಸ್ ಪೈಗಂಬರರ ಕಾಲದಲ್ಲಿ ಚಿಕ್ಕ ಮಗುವಾಗಿದ್ದರು.

ಪ್ರವಾದಿಯವರ(ಸ) ಮಾತನ್ನು ತಪ್ಪಾಗಿ ಗ್ರಹಿಸಬಹುದಾದರೆ, ಅದು ಅಪೂರ್ವವಾಗಿ ಸಂಭವಿಸುವುದಾದರೂ ಸಾಮಾನ್ಯ ವರದಿಗಾರರು ಇಬ್ನು ಅಬ್ಬಾಸ್‌ರವರ ಹೇಳಿಕೆಗಳನ್ನು ತಪ್ಪಾಗಿ ಅರ್ಥಮಾಡಿಕೊಳ್ಳುವುದು ಹೆಚ್ಚು ಸಂಭವನೀಯವಾಗಿದೆ.

ಈ ರೀತಿ ಪ್ರವಾದಿಯವರ(ಸ) ಸಂದೇಶಗಳು ತಪ್ಪಾಗಿ ವರದಿಯಾಗುವ ಸಾಧ್ಯತೆ ಇರುವಾಗ ಒಬ್ಬ ಪ್ರಜ್ಞಾವಂತನಾದ ಮನುಷ್ಯನು ಹದೀಸುಗಳನ್ನು ಆಧಾರವಾಗಿಟ್ಟುಕೊಂಡು ಜನರ ಜೀವಿತ, ಮರಣ ಮತ್ತು ಮೂಲಭೂತ ಹಕ್ಕುಗಳ ಬಗ್ಗೆ ಬಹಳ ದೂರಗಾಮಿ ಪ್ರಭಾವ ಬೀರುವಂತಹ ತೀರ್ಪು ನೀಡುವುದಾದರೂ ಹೇಗೆ?

ಇಕ್ರಿಮ ಈ ಹದೀಸನ್ನು ಸ್ವತಃ ಸೃಜಿಸಿ ಇಬ್ನು ಅಬ್ಬಾಸ್ ಹೆಸರಲ್ಲಿ ವರದಿ ಮಾಡಿರಲೂಬಹುದು. ಅಂತಹ ಸ್ವಭಾವ ಇಕ್ರಿಮರಿಗಿತ್ತೆಂದು ಅಲಿ ಬಿನ್ ಇಬ್ನು ಅಬ್ಬಾಸ್‌ರವರ ಹೇಳಿಕೆಯಿಂದ ತಿಳಿಯುತ್ತದೆ.

## ಇತರ ಆಂತರಿಕ ಪ್ರಮಾಣಗಳು

ಇಕ್ರಿಮ ವರದಿ ಮಾಡಿದ ಹದೀಸಿನಲ್ಲಿ ಅಂತರ್ಗತ ವಿಷಯದ ಬಗ್ಗೆ ಪರಿಶೀಲಿಸಿದಾಗ ಈ ಕೆಳಗಿನ ತಪ್ಪುಗಳು ಕಾಣಿಸುತ್ತವೆ:

1. ಹಝ್ರತ್ ಅಲಿ(ರ) ಅವರಂತಹ ಉನ್ನತ ಸ್ಥಾನ ಗಳಿಸಿದ ಮಹಾ ಪುರುಷರು ಇಸ್ಲಾಮ್ ಧರ್ಮವು ಸುಟ್ಟು ಹಾಕಿ ಕೊಲ್ಲುವ ಶಿಕ್ಷೆಯನ್ನು ಸ್ಪಷ್ಟವಾಗಿ ನಿಷಿದ್ಧಗೊಳಿಸಿದೆ ಎಂದು ತಿಳಿದಿರಲಿಲ್ಲವೆಂಬುದು ತಪ್ಪಾದ ಹೇಳಿಕೆಯಾಗಿದೆ.

2. ತನ್ನ ಧರ್ಮ ಬದಲಾಯಿಸುವವರನ್ನು ಕೊಲ್ಲಿರಿ ಎಂಬ ಮಾತನ್ನು ಹಲವು ರೀತಿಯಲ್ಲಿ ವ್ಯಾಖ್ಯಾನಿಸಬಹುದಾಗಿದೆ. ಇದನ್ನು ಪುರುಷರಿಗೂ ಮಹಿಳೆಯರಿಗೂ ಮಕ್ಕಳಿಗೂ ಅನ್ವಯಿಸುವಂತೆ ಮಾಡಬಹುದು. ಇಮಾಮ್ ಅಬೂ ಹನೀಫ ಮತ್ತು ಬೇರೆ ಕೆಲವು ಕರ್ಮಶಾಸ್ತ್ರಪಂಡಿತರು ಧರ್ಮತ್ಯಾಗ ಮಾಡಿದ ಮಹಿಳೆಯನ್ನು ಕೊಲ್ಲಬಾರದೆಂದು ಹೇಳಿದ್ದಾರೆ.

3. ಈ ಹದೀಸಿನಲ್ಲಿ ಬಳಸಲಾದ ದೀನ್(ಧರ್ಮ) ಪದ ಎಲ್ಲಾ ಧರ್ಮಗಳಿಗೆ ಅನ್ವಯಿಸುವಂತಹದ್ದಾಗಿದೆ. ಅದು ಇಸ್ಲಾಮ್ ಧರ್ಮವನ್ನು ಮಾತ್ರ ಉದ್ದೇಶಿಸಿಲ್ಲ. ಮೂರ್ತಿಪೂಜಕರ ಧರ್ಮವನ್ನೂ ದೀನ್ ಎಂದು ಹೇಳಲಾಗಿದೆ. (ಪವಿತ್ರ ಖುರ್‌ಆನ್ ಸೂರತುಲ್ ಕಾಫಿರೂನ್)

ಈ ಹದೀಸಿನಲ್ಲಿ ಬಳಸಲಾದ ಪದವು ಎಲ್ಲಾ ಧರ್ಮಗಳಿಗೆ ಅನ್ವಯಿಸುವ ಕಾರಣದಿಂದ ಈ ಹದೀಸನ್ನು ಧರ್ಮತ್ಯಾಗಿ ಮುಸ್ಲಿಮನಿಗೆ ಮಾತ್ರ ಸಂಬಂಧಿಸಿದೆ ಎಂದು ಹೇಳುವುದಾದರೂ ಹೇಗೆ? ಕಟ್ಟುನಿಟ್ಟಾಗಿ ಈ ಸಾಂಕೇತಿಕ ಪದವನ್ನು ಅರ್ಥವಿಸುವುದಾದರೆ ಧರ್ಮವನ್ನು ಬದಲಾಯಿಸುವ ಎಲ್ಲರನ್ನೂ - ಯಾವ ಧರ್ಮಕ್ಕೆ ಸೇರಿದವರಾದರೂ ಸರಿ- ಈ ಹದೀಸಿನ ಪ್ರಕಾರ ಕೊಲ್ಲಬೇಕು. ಇದರ ಅರ್ಥ ಹೀಗಾಗುತ್ತದೆ: ಕ್ರೈಸ್ತನಾಗುವ ಯಹೂದಿಯನ್ನು ಕೊಲ್ಲಬೇಕು. ಮುಸ್ಲಿಮನಾಗುವ ಕ್ರೈಸ್ತನನ್ನು ಕೊಲ್ಲಬೇಕು. ಬಹುದೇವಾರಾಧಕರಲ್ಲಿ ಯಾರಾದರೂ ಯಾವುದಾದರೂ ಧರ್ಮವನ್ನು ಅವಲಂಬಿಸಿದರೆ ಕೊಲ್ಲಬೇಕು. ಅಲ್ಲದೆ ಈ ತತ್ವ ಮುಸ್ಲಿಮ್ ದೇಶಗಳಲ್ಲಿ ಮಾತ್ರವಲ್ಲ ಲೋಕದಲ್ಲಿ ಎಲ್ಲಾ ಕಡೆಗಳಲ್ಲಿ ಜಾರಿಗೊಳಿಸಬೇಕು. ಆದುದರಿಂದ ಆಸ್ಟ್ರೇಲಿಯಾದ ಮೂಲನಿವಾಸಿ, ಆಫ್ರಿಕಾದ ಪಿಗ್ಮಿ ಅಥವಾ ದಕ್ಷಿಣ ಅಮೇರಿಕದ ರೆಡ್ ಇಂಡಿಯನ್ ತಮ್ಮ ಧರ್ಮವನ್ನು ಬದಲಾಯಿಸಿದರೆ ಕೊಲ್ಲಲ್ಪಡಬೇಕು.

ಇಸ್ಲಾಮ್ ಧರ್ಮಪ್ರಚಾರಕ್ಕೆ ಬಹಳ ಒತ್ತು ನೀಡುತ್ತದೆ. ಪ್ರತಿಯೊಬ್ಬ ಮುಸ್ಲಿಮನು ಅಲ್ಲಾಹನ ಮಾರ್ಗದಲ್ಲಿ ಉಪದೇಶ ನೀಡುವವನಾಗಬೇಕು. ಪ್ರಸಿದ್ಧ ಮುಸ್ಲಿಮ್ ವಿದ್ವಾಂಸರು ಇಂದಿನ ಕಾಲದಲ್ಲಿ ಯಥಾರ್ಥ ಇಸ್ಲಾಮಿಕ ಜಿಹಾದಿನ ಸ್ಫೂರ್ತಿಯನ್ನು ನಿರಾಕರಿಸುತ್ತಿರುವುದು ಮತ್ತು ಇಸ್ಲಾಮ್ ಧರ್ಮವನ್ನು ತ್ಯಜಿಸುವವರು ಕೊಲ್ಲಲ್ಪಡಬೇಕೆಂಬ ಸಂಕುಚಿತ ದೃಷ್ಟಿಕೋನ ಹೊಂದಿರುವುದು ವಿಡಂಬನಾತ್ಮಕವಾಗಿದೆ. ಬೇರೆ ಧರ್ಮಗಳಿಗೆ ಸೇರಿದವರ ಬಗ್ಗೆ ಏನು ಹೇಳುವಿರಿ? ಮುಸ್ಲಿಮೇತರರೊಡನೆ ಧಾರ್ಮಿಕ ವಿಶ್ವಾಸದ ಬಗ್ಗೆ ಸೌಹಾರ್ದದಿಂದ ವಾಗ್ವಾದ ಮಾಡಿ ಇಸ್ಲಾಮಿನ ಸಂದೇಶವನ್ನು ತಲುಪಿಸಲು ಶಾಂತಿಯುತವಾಗಿ ಪ್ರಯತ್ನ ಮಾಡುತ್ತಾ ಇರಬೇಕೆಂದು ಇಸ್ಲಾಮ್ ಘೋಷಿಸುತ್ತದೆ. ಈ ಕರ್ತವ್ಯ ಎಷ್ಟು ಮುಖ್ಯವಾಗಿದೆ ಎಂದರೆ ಪ್ರತಿಯೊಬ್ಬ ಮುಸ್ಲಿಮನು ತನ್ನ ಮರಣದ ತನಕ ಈ ಕರ್ತವ್ಯದಲ್ಲಿ ನಿರತನಾಗಿರಬೇಕೆಂದು ಇಸ್ಲಾಮ್ ಧರ್ಮ ಉಪದೇಶಿಸುತ್ತದೆ. ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳಿದೆ:

"ಜಾಣ್ಮೆಯಿಂದಲೂ ಸದುಪದೇಶದಿಂದಲೂ ನಿನ್ನ ಪ್ರಭುವಿನ ಮಾರ್ಗದೆಡೆಗೆ ನೀನು (ಜನರನ್ನು) ಆಮಂತ್ರಿಸು. ಉತ್ತಮವಾದ ರೀತಿಯಲ್ಲಿ ಅವರೊಡನೆ ವಾಗ್ವಾದ ಮಾಡು. ತನ್ನ ಮಾರ್ಗವನ್ನು ಬಿಟ್ಟು ಹೋಗುವವರು ಯಾರೆಂದು ನಿನ್ನ ಪ್ರಭು ಚೆನ್ನಾಗಿ ಬಲ್ಲವನಾಗಿದ್ದಾನೆ. ಸರಿಯಾದ ಮಾರ್ಗವನ್ನು ಅವಲಂಬಿಸುವವರು ಯಾರೆಂದೂ ಅವನು ಚೆನ್ನಾಗಿ ತಿಳಿದಿರುತ್ತಾನೆ." (16:126)

ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ಪ್ರತಿಪಾದಿಸುವವರು ಮತಾಂಧರೂ ಮಾನವೀಯ ಗುಣರಹಿತರೂ ಆಗಿದ್ದು ಅವರು ಪ್ರತಿಪಾದಿಸುವ ಈ ತತ್ವದಿಂದ ಅಂತರ್‌ರಾಷ್ಟ್ರೀಯ ಮತ್ತು ಅಂತರ್ ಧರ್ಮೀಯ ಸಂಬಂಧಗಳು ಹೇಗೆ ಬಿಗಡಾಯಿಸುವುವು ಎಂಬುದನ್ನು ಮನಗಾಣದವರಾಗಿದ್ದಾರೆ. ಅವರ ಅಭಿಪ್ರಾಯ ಪ್ರಕಾರ ಮುಸ್ಲಿಮರ ಹೊರತು ಇತರ ಎಲ್ಲಾ ಧರ್ಮಗಳ ಅನುಯಾಯಿಗಳಿಗೆ ಧರ್ಮವನ್ನು ಬದಲಾಯಿಸುವ ಹಕ್ಕಿದೆ. ಮುಸ್ಲಿಮರಿಗೆ ಇತರ ಧರ್ಮದ ಜನರನ್ನು ತಮ್ಮ ಧರ್ಮಕ್ಕೆ ಸೇರಿಸುವ ವಿಶೇಷ ಹಕ್ಕು ಇದೆ. ಆದರೆ ಇತರ ಧರ್ಮದ ಜನರಿಗೆ ಮುಸ್ಲಿಮರನ್ನು ತಮ್ಮ ಧರ್ಮಕ್ಕೆ ಸೇರಿಸುವ ಹಕ್ಕು ನಿಷಿದ್ಧಗೊಳಿಸಲಾಗಿದೆ. ಇಸ್ಲಾಮ್ ಧರ್ಮದ ನ್ಯಾಯ ವ್ಯವಸ್ಥೆಯ ಬಗ್ಗೆ ಎಷ್ಟು ಖೇದಕರ ಚಿತ್ರಣ ಇದಾಗಿದೆ!

ಕೊನೆಯದಾಗಿ ಹೇಳುವುದಾದರೆ, ಧರ್ಮತ್ಯಾಗ ಎಂದರೆ ಒಬ್ಬನು ತಾನು ಹೊಂದಿದ ವಿಶ್ವಾಸವನ್ನು ಸ್ವತಃ ತ್ಯಜಿಸುವುದಾಗಿದೆ. ವಿಶ್ವಾಸಾದರ್ಶಗಳಲ್ಲಿ ಭಿನ್ನಾಭಿಪ್ರಾಯಗಳು (ಎಷ್ಟು ಗುರುತರವಾಗಿದ್ದರೂ) ಒಬ್ಬನನ್ನು ಧರ್ಮತ್ಯಾಗಿ ಎಂದು ಘೋಷಿಸಲು ಹೇತುವಾಗಲಾರವು. ಧರ್ಮತ್ಯಾಗಕ್ಕೆ ಇರುವ ಶಿಕ್ಷೆ ದೇವನ ಕೈಯಲ್ಲಿದೆ. ಅವನ ವಿರುದ್ಧವೇ ಧರ್ಮತ್ಯಾಗಿ ಅಪರಾಧ ಮಾಡುತ್ತಾನೆ. ಧರ್ಮ ತ್ಯಾಗಿ ಬೇರೆ ಅಪರಾಧಗಳನ್ನು ಮಾಡದಿದ್ದರೆ ಇಹಲೋಕದಲ್ಲಿ ಶಿಕ್ಷಾರ್ಹನಾಗುವುದಿಲ್ಲ. ಇದು ದೇವನ ಉಪದೇಶವಾಗಿದೆ. ಇದು ಪ್ರವಾದಿಯವರ(ಸ) ಉಪದೇಶವಾಗಿದೆ. ಇದೇ ಅಭಿಪ್ರಾಯವನ್ನು ಹನಫೀ ಕರ್ಮಶಾಸ್ತ್ರಪಂಡಿತರು ಅಂಗೀಕರಿಸಿದ್ದಾರೆ. (ಹಿದಾಯ ನೋಡಿರಿ.) ಫತ್‌ಹುಲ್ ಖದೀರ್, ಚಲ್‌ಪೀ ಇದೇ ಅಭಿಪ್ರಾಯ ಸೂಚಿಸುತ್ತವೆ. ಹಾಫಿಝ್ ಇಬ್ನು ಖಯ್ಯಿಮ್, ಇಬ್ರಾಹಿಮ್ ನಖಾಯಿ, ಸೂಫಿಯಾನ್ ಸೌರಿ ಮತ್ತು ಬೇರೆ ಅನೇಕ ವಿದ್ವಾಂಸರು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಮೌದೂದಿ ಘೋಷಿಸುವ ಈ ಹದೀಸಿನ ಸತ್ಯತೆ ಬಗ್ಗೆ ಒಮ್ಮತಾಭಿಪ್ರಾಯ ಕೇವಲ ಕಟ್ಟು ಕಥೆಯಾಗಿದೆ.

(ಮುಂದುವರಿಯುವುದು)

ಇಂಗ್ಲಿಷ್‌ನಿಂದ ಭಾಷಾಂತರ: A. ಅಬ್ದುಸ್ಸಲಾಮ್

# READ AHMADIYYA PERIODICALS

| | |
|---|---|
| **The Review of Religions** | **Annual Subscription: Rs 150/-**<br>Write to: The Chairman<br>The Review of Religions,<br>Qadian - 143516 (Punjab) |
| **BADR**<br>**Urdu Weekly** | **Annual Subscription: Rs 300/-**<br>Write to: The Manager<br>The BADR Weekly<br>Qadian - 143516 (Punjab) |
| **ANSARULLAH**<br>**Urdu & Hindi Bi-Monthly** | **Annual Subscription: Rs 100/-**<br>Write to: The Manager<br>ANSARULLAH<br>Qadian - 143516 (Punjab) |
| **MISHKAT**<br>**Urdu Monthly** | **Annual Subscription: Rs 120/-**<br>Write to: The Manager<br>MISHKAT<br>Qadian - 143516 (Punjab) |
| **SATHYADOOTHAN**<br>**Malayalam Monthly** | **Annual Subscription: Rs 150/-**<br>Write to: The Manager<br>The SATHYADOOTHAN Monthly<br>G.H. Road, Kozhikode (Kerala) |
| **SATHYAMITHRAM**<br>**Malayalam Bi-Monthly** | **Annual Subscription: Rs 60/-**<br>Write to: The Manager<br>SATHYAMITHRAM<br>Thavakkara, Kannur, (Kerala) |

# ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ 2008

## ಹಝ್ರುತ್ ಖಲೀಫತುಲ್ ಮಸೀಹ್ V ನಿರ್ದೇಶಿಸಿದ ಪ್ರಾರ್ಥನೆಗಳು ಮತ್ತು ಕರ್ಮಾನುಷ್ಠಾನಗಳು

1. ಪ್ರತಿ ಮಾಸ ಒಂದು ನಫಲ್ ಉಪವಾಸ ಅನುಷ್ಠಿಸಬೇಕು.
2. ಪ್ರತಿ ದಿನ ಎರಡು ರಕ್‌ಅತ್ ನಫಲ್ ನಮಾಝ್ ಮಾಡಬೇಕು.
3. ಪ್ರತಿ ದಿನ ಏಳು ಸಲ ಸೂರಃ ಫಾತಿಹ ಅರ್ಥಗ್ರಹಿಸಿಕೊಂಡು ಓದಬೇಕು:

☆ بِسْمِ اللّٰهِ الرَّحْمٰنِ الرَّحِيْمِ۔ اَلْحَمْدُ لِلّٰهِ رَبِّ الْعٰلَمِيْنَ ۔اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔اِيَّاكَ نَعْبُدُ وَاِيَّاكَ نَسْتَعِيْنُ۔

اِهْدِ نَاالصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ ۔غَيْرِ الْمَغْضُوْبِ عَلَيْهِمْ وَلَاالضَّآلِّيْنَ۔

**ಅರ್ಥ:** ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ. ಎಲ್ಲ ಸ್ತುತಿ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ. ಅವನು ಪರಮ ದಯಾವಂತನೂ ಕಾರುಣ್ಯನಿಧಿಯೂ ನ್ಯಾಯ ತೀರ್ಮಾನ ದಿನದ ಅಧಿಪತಿಯೂ ಆಗಿದ್ದಾನೆ. (ಓ ದೇವಾ.) ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ. ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ, ಕ್ರೋಧಕ್ಕೆ ಈಡಾಗದವರ ಮತ್ತು ದಾರಿತಪ್ಪದವರ ಮಾರ್ಗದಲ್ಲಿ.

4. ☆ اَللّٰهُمَّ صَلِّ عَلٰى مُحَمَّدٍ وَّ عَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ ۔

☆ اَللّٰهُمَّ بَارِكْ عَلٰى مُحَمَّدٍ وَّعَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ۔

**ಅರ್ಥ:** ಓ ಅಲ್ಲಾಹ್, ನೀನು ಹಝ್ರುತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು-ಹಝ್ರುತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ನೀನು ವಿಶೇಷ ಕರುಣೆ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. ಓ ಅಲ್ಲಾಹ್, ನೀನು ಹಝ್ರುತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ಅನುಗ್ರಹವನ್ನು ದಯಪಾಲಿಸು - ಹಝ್ರುತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ಅನುಗ್ರಹ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. (ದಿನಂಪ್ರತಿ 33 ಸಲ)

5. ☆ رَبَّنَا لَا تُزِغْ قُلُوْبَنَا بَعْدَ اِذْ هَدَيْتَنَا وَهَبْ لَنَا مِنْ لَّدُنْكَ رَحْمَةً ۔اِنَّكَ اَنْتَ الْوَهَّابُ۔

**ಅರ್ಥ:** ನಮ್ಮ ಪ್ರಭೂ ನೀನು ನಮಗೆ ಮಾರ್ಗದರ್ಶನ ಮಾಡಿದ ಬಳಿಕ ನಮ್ಮ ಹೃದಯಗಳಲ್ಲಿ ವಕ್ರಬುದ್ಧಿಯುಂಟಾಗುವಂತೆ ಮಾಡದಿರು. ನೀನು ನಮಗೆ ನಿನ್ನಿಂದ ಕರುಣೆಯನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ನೀನೇ ಅತಿ ದೊಡ್ಡ ಅನುಗ್ರಹದಾತ. (ದಿನಂಪ್ರತಿ 33 ಸಲ)

6. ☆ رَبَّنَا اَفْرِغْ عَلَيْنَا صَبْرًا وَّثَبِّتْ اَقْدَامَنَا وَانْصُرْنَا عَلَى الْقَوْمِ الْكٰفِرِيْنَ۔

**ಅರ್ಥ:** ನಮ್ಮ ಪ್ರಭೂ, ನೀನು ನಮಗೆ ಸ್ಥೈರ್ಯವನ್ನು ಕರುಣಿಸು. ನಮ್ಮ ಪಾದಗಳನ್ನು ಸ್ಥಿರಗೊಳಿಸಿ ಅವಿಶ್ವಾಸಿಗಳಿಗೆ ವಿರುದ್ಧವಾಗಿ ನಮಗೆ ನೆರವು ನೀಡು. (ದಿನಂಪ್ರತಿ 11 ಸಲ)

7. ☆ اَللّٰهُمَّ اِنَّا نَجْعَلُكَ فِيْ نُحُوْرِهِمْ وَ نَعُوْذُبِكَ مِنْ شُرُوْرِهِمْ ۔

**ಅರ್ಥ:** ಓ ಅಲ್ಲಾಹ್, ಅವರನ್ನು ಎದುರಿಸಲು ನಾವು ನಿನ್ನನ್ನು ಗುರಾಣಿಯನ್ನಾಗಿ ಮಾಡುತ್ತೇವೆ. ಅವರ ಎಲ್ಲಾ ಉಪದ್ರಗಳಿಂದ ಪಾರಾಗಲು ನಿನ್ನ ಅಭಯ ಯಾಚಿಸುತ್ತೇವೆ. (ದಿನಂಪ್ರತಿ 11 ಸಲ)

8 ☆ اَسْتَغْفِرُاللّٰهَ رَبِّيْ مِنْ كُلِّ ذَنْبٍ وَّاَتُوْبُ اِلَيْهِ۔

**ಅರ್ಥ:** ನನ್ನ ಪ್ರಭುವಾದ ಅಲ್ಲಾಹನೊಡನೆ ನಾನು ನನ್ನ ಎಲ್ಲ ಪಾಪಗಳಿಗೆ ಕ್ಷಮೆಕೋರುತ್ತೇನೆ ಮತ್ತು ನಾನು ಅವನೆಡೆಗೆ ಬಾಗುತ್ತೇನೆ. (ದಿನಂಪ್ರತಿ 33 ಸಲ)

9. ☆ سُبْحَانَ اللّٰهِ وَبِحَمْدِهٖ سُبْحَانَ اللّٰهِ الْعَظِيْمِ۔ اَللّٰهُمَّ صَلِّ عَلٰى مُحَمَّدٍ وَّاٰلِ مُحَمَّدٍ۔

**ಅರ್ಥ:** ಅಲ್ಲಾಹನು ಪರಿಶುದ್ಧನು ಮತ್ತು ಅವನಿಗೆ ಸಕಲ ಸ್ತುತಿಸ್ತೋತ್ರಗಳು. ಅಲ್ಲಾಹನು ಪರಿಶುದ್ಧನು ಮತ್ತು ಮಹಾಮಹಿಮನು. ಓ ಅಲ್ಲಾಹ್, ನೀನು ಹಝ್ರುತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು. (ದಿನಂಪ್ರತಿ 33 ಸಲ)

Registered with the Registrar of Newspapers for India No. R.N. 27354/75
YUGARASHMI Kannada Quarterly, June - 2008

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ

ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್

ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ

ಇಂಟರ್‌ನೇಶನಲ್

THE FIRST ISLAMIC SATELLITE CHANNEL

BROADCASTING ROUND THE CLOCK

SATELLITE : ASIASAT 3S
POSITION : 105.5° EAST
FREQUENCY : 3760 MHZ
MIN. DISH SIZE : 1.8 METRE

POLARISATION : HORIZONTAL
SYMBOL RATE : 26000 MBPS
FEC : 7/8

E-Mail : info@alislam.org    Website : http:www.alislam.org/mta.tv




ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ
ಪ್ರಕಟಿಸಲ್ಪಟ್ಟ

ಪವಿತ್ರ ಖುರ್‌ಆನ್

ಕನ್ನಡ ಭಾಷಾಂತರ

ಬೆಲೆ : ರೂ. 200/-

ದೊರೆಯುವ ವಿಳಾಸ :

AHMADIYYA MUSLIM MISSION
No.1, 3rd Cross Road,
Wilson Garden,
Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001.
Printed at Karavali Printers, Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Car street, Mangalore - 575 001